# ಅಧ್ಯಾಯ-1

## ಪ್ರಾಸ್ತಾವಿಕ

ಧಾರವಾಡ ಜಿಲ್ಲೆಯು ಬಹು ಪ್ರಾಚೀನ ಕಾಲದಿಂದಲೂ ಜನವಸತಿಯನ್ನು ಹೊಂದಿದ್ದ ಪ್ರದೇಶವಾಗಿದೆ. ತುಂಗಭದ್ರಾ, ವರದಾ ಮತ್ತು ಮಲಪ್ರಭಾ ನದಿಗಳು ಪ್ರಾಗೈತಿಹಾಸಿಕ ಕಾಲದಿಂದಲೂ ಜನರ ವಸತಿಗೆ ಪ್ರೋತ್ಸಾಹಕಾರಿಯಾಗಿವೆ. ಕರ್ನಾಟಕದ ಇತಿಹಾಸದಲ್ಲಿ ಧಾರವಾಡ ಜಿಲ್ಲೆಯ ಪಾತ್ರ ವಿಶಿಷ್ಟವಾದುದಾದರೂ ಇಲ್ಲಿ ಆಳಿದ ಗಣ್ಯ ಅರಸು ಮನೆತನಗಳಲ್ಲಿ ಪ್ರಮುಖವಾದ ಯಾವ ಒಂದರ ಕಾಯಂ ರಾಜಧಾನಿಯೂ ಈ ಜಿಲ್ಲೆಯಲ್ಲಿರಲಿಲ್ಲ. ಆದರೆ ಐತಿಹಾಸಿಕ ಕಾಲದ ಖ್ಯಾತ ಸಮೃದ್ಧ ಪ್ರಾಂತಗಳಾದ ಬೆಳ್ವೊಲ-300 ಮತ್ತು ಪುಲಿಗೆರೆ-300 ಪ್ರಾಂತಗಳು ಈ ಜಿಲ್ಲೆಯಲ್ಲಿ ಬಹುಮಟ್ಟಿಗೆ ಸಮಾವೇಶಗೊಂಡಿದ್ದವು ಮತ್ತು ಅನೇಕ ಸಾಮ್ರಾಜ್ಯಗಳ ತಿರುಳುನಾಡಾಗಿ ಈ ಪ್ರದೇಶ ಇತ್ತು. ಹೀಗಾಗಿ ಅನೇಕ ರಾಜಕೀಯ, ಧಾರ್ಮಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳ ಕೇಂದ್ರಗಳು ಇಲ್ಲಿ ಅಭಿವೃದ್ಧಿ ಹೊಂದಿದ್ದವು. ಈ ಕಾರಣಗಳಿಂದ ಈ ಜಿಲ್ಲೆಯಲ್ಲಿ ಅನೇಕ ಗಮನಾರ್ಹವಾದ ದೇವಾಲಯಗಳು ನಿರ್ಮಿತವಾದವು. ಅಗ್ರಹಾರಗಳೂ, ಕೆರೆಗಳೂ ರೂಪುತಾಳಿದವು. ಹೀಗಾಗಿ ಈ ಜಿಲ್ಲೆ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಜೀವಂತವಾದ ಜಿಲ್ಲೆಯಾಗಿ ಬೆಳೆದುಬಂದಿದೆ.

ಈ ಜಿಲ್ಲೆಯು ತುಂಗಭದ್ರಾ ಮತ್ತು ಮಲಪ್ರಭಾ ನದಿಗಳ ಜಲಾನಯನ ಪ್ರದೇಶದಲ್ಲಿದೆ. ಜಿಲ್ಲೆಯ ಮಣ್ಣು ಎಲ್ಲ ಪ್ರಕಾರದ ವಿಭಜಿತ ಶಿಲೆಗಳ ಮಿಶ್ರಣದಿಂದ ರೂಪುಗೊಂಡಿದೆ. ಮಲೆನಾಡಿನ ಉದುರೆಲೆಯ ತೇವ ತುಂಬಿದ ಕಾಡು, ಮುಳ್ಳು ಮತ್ತು ಕುರುಚಲು ಕಾಡುಗಳು ಇಲ್ಲಿ ಮುಖ್ಯವಾಗಿವೆ. ಇಲ್ಲಿಯ ವಾಯುಗುಣ ಸಾಮಾನ್ಯವಾಗಿ ಹಿತಕರವಾಗಿದೆ. ಈ ಜಿಲ್ಲೆಯ ಮುಖ್ಯ ಕಸುಬು ವ್ಯವಸಾಯ. ಪ್ರಾಚೀನ ಕಾಲದ ಅನೇಕ ಕೆರೆಗಳು ಮತ್ತು ಜಲಾಶಯಗಳು ಇಂದೂ ಸಹ ಉಪಯುಕ್ತವಾಗಿವೆ. ಜೋಳ, ಅಕ್ಕಿ ಮತ್ತು ಗೋವಿ ಮುಖ್ಯ ಆಹಾರ ಬೆಳೆಗಳು. ಹತ್ತಿ, ಶೇಂಗಾ, ಮೆಣಸಿನಕಾಯಿ, ಕಬ್ಬು ಮತ್ತು ಕುಸುಬೆ ಇತರ ಮುಖ್ಯ ಆಹಾರೇತರ ಬೆಳೆಗಳಾಗಿವೆ. ಈ ಜಿಲ್ಲೆಯು ರಾಜ್ಯದಲ್ಲಿ ಹತ್ತಿಯ ಬೆಳೆಗಾಗಿ ಮೊದಲಿನಿಂದಲೂ ಪ್ರಸಿದ್ಧವಾಗಿದೆ. ಧಾರವಾಡದ ದ್ರಾಕ್ಷಿ, ನವಿಲೂರಿನ ಪೇರಲ, ವಾಸನದ ಬೋರೆಹಣ್ಣು, ಮಲೆನಾಡಿನ ಗೋಡಂಬಿ ಮತ್ತು ಮಾವಿನಹಣ್ಣುಗಳು ಪ್ರಸಿದ್ಧಿಯಾಗಿವೆ. ಈ ಜಿಲ್ಲೆ ಹತ್ತಿಯ ಕೈಗಾರಿಕೆಗೆ ಪ್ರಸಿದ್ಧವಾಗಿದೆ. ಈ ಜಿಲ್ಲೆಯಲ್ಲಿ ಬೇಸಾಯದ ಅನಂತರ ಜನರ ಮುಖ್ಯ ಜೀವನೋಪಾಯ ವ್ಯಾಪಾರ. ಹುಬ್ಬಳ್ಳಿ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಈ ಜಿಲ್ಲೆ ಶಿಕ್ಷಣದಲ್ಲಿ ಮಹತ್ತರ ಪ್ರಗತಿ ಸಾಧಿಸಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಧಾರವಾಡ ಜಿಲ್ಲೆ ಉನ್ನತ ಶಿಕ್ಷಣಕ್ಕೆ ಕೇಂದ್ರಸ್ಥಾನವಾಗಿದ್ದು ಇಲ್ಲಿನ ವಿವಿಧ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ಅನೇಕ ಸಾರ್ವಜನಿಕ ಸಂಘಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಮಹತ್ತರ ಪಾತ್ರ ವಹಿಸಿವೆ.

## ಸ್ಥಾನ ನಿರ್ದೇಶನ, ಮೇರೆಗಳು

ಕರ್ನಾಟಕ ರಾಜ್ಯದ ವಾಯುವ್ಯದಲ್ಲಿರುವ, ಅತಿ ದೊಡ್ಡ ಜಿಲ್ಲೆಗಳಲ್ಲಿ ಒಂದಾಗಿರುವ ಧಾರವಾಡ ಜಿಲ್ಲೆಯು ಉತ್ತರ ಅಕ್ಷಾಂಶ $14^{o}17'$ರಿಂದ $15^{o}50'$ರವರೆಗೆ ಮತ್ತು ಪೂರ್ವ ರೇಖಾಂಶ $74^{o}43'$ರಿಂದ $76^{o}$ ರವರೆಗಿನ ಪ್ರದೇಶದಲ್ಲಿ 13,738 ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಉತ್ತರ ದಕ್ಷಿಣವಾಗಿ, ಉತ್ತರದ ನರಗುಂದ ತಾಲೂಕಿನ ಲಕ್ಮಾಪುರದಿಂದ ದಕ್ಷಿಣದ ಹಿರೇಕೆರೂರು ತಾಲೂಕಿನ ಗುಡ್ಡದ ಮಾದಾಪುರದವರೆಗೆ ಸುಮಾರು 186 ಕಿ.ಮೀ.ಗಳಷ್ಟು ಗರಿಷ್ಠ ಉದ್ದವನ್ನು ಮತ್ತು ಪೂರ್ವ ಪಶ್ಚಿಮವಾಗಿ ಪೂರ್ವದ ಗದಗ ತಾಲೂಕಿನ ತಿಮ್ಮಾಪುರದಿಂದ ಪಶ್ಚಿಮದ ಧಾರವಾಡ ತಾಲೂಕಿನ ಅಳಣಾವರದವರೆಗೆ ಸುಮಾರು 138 ಕಿ.ಮೀ ಗರಿಷ್ಠ ಅಗಲವನ್ನು ಹೊಂದಿದೆ. ಈ ಜಿಲ್ಲೆಯನ್ನು ಪೂರ್ವದಲ್ಲಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳೂ, ಪಶ್ಚಿಮದಲ್ಲಿ ಉತ್ತರ ಕನ್ನಡ ಜಿಲ್ಲೆಯೂ, ಉತ್ತರದಲ್ಲಿ ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳೂ ಮತ್ತು ದಕ್ಷಿಣದಲ್ಲಿ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳೂ ಸುತ್ತುವರೆದಿವೆ. ರಾಜ್ಯದಲ್ಲಿ ಅತಿ ಹೆಚ್ಚು ತಾಲೂಕುಗಳನ್ನು (17) ಹೊಂದಿರುವ ಈ ಜಿಲ್ಲೆಯು ಒಟ್ಟು ಏಳು ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಉತ್ತರದಲ್ಲಿ ಮಲಪ್ರಭಾ ನದಿಯು ಧಾರವಾಡ ಜಿಲ್ಲೆಯನ್ನು ಬಿಜಾಪುರ ಜಿಲ್ಲೆಯಿಂದ ಸುಮಾರು 25 ಕಿ.ಮೀ.ಗಳಷ್ಟು ಅಂತರದವರೆಗೆ ಬೇರ್ಪಡಿಸಿ ಗಡಿಯಾಗಿ ಹರಿಯುತ್ತದೆ. ತುಂಗಭದ್ರಾ ನದಿಯು ಧಾರವಾಡ ಜಿಲ್ಲೆಯನ್ನು ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಶಿವಮೊಗ್ಗ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಬೇರ್ಪಡಿಸಿ ಸುಮಾರು 130 ಕಿ.ಮೀ.ಗಳಷ್ಟು ದೂರ ಗಡಿಯಾಗಿ ಹರಿಯುತ್ತದೆ. ಭೂಪಟದಲ್ಲಿರುವ ಜಿಲ್ಲೆಯ ನಕ್ಷೆಯು ತ್ರಿಕೋನದಂತೆ ಒರಟು ಆಕಾರವನ್ನು ಹೊಂದಿದೆ. ಉತ್ತರದ ಭಾಗ ಅಗಲವಾಗಿಯೂ, ದಕ್ಷಿಣದ ಭಾಗ ಕಿರಿದಾಗಿಯೂ ಇದೆ. ಪೂರ್ವ ಮತ್ತು ಪಶ್ಚಿಮದ ಮೇರೆಗಳು ಉತ್ತರದಿಂದ ದಕ್ಷಿಣಕ್ಕೆ ಕಿರಿದಾಗುತ್ತಾ ಹೋಗುತ್ತವೆ. ಜಿಲ್ಲೆಯನ್ನು ಸುತ್ತುವರಿದಿರುವ ಎಲ್ಲಾ ಇತರ ಜಿಲ್ಲೆಗಳೂ ಕರ್ನಾಟಕ ರಾಜ್ಯಕ್ಕೆ ಸೇರಿರುವುದು ಒಂದು ವಿಶೇಷವಾಗಿದೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

ಧಾರವಾಡ ಜಿಲ್ಲೆಯು ಒಟ್ಟು 13,738 ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು ಜಿಲ್ಲೆಗಳ ಪೈಕಿ ಬಿಜಾಪುರ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ನಂತರದ ಸ್ಥಾನವನ್ನು ಪಡೆದಿದ್ದು, ರಾಜ್ಯದ ಭೌಗೋಳಿಕ ವಿಸ್ತೀರ್ಣದ ಶೇ.7.16 ರಷ್ಟು ವಿಸ್ತೀರ್ಣವನ್ನು ಹೊಂದಿದೆ. 1991ರ ಜನಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು 35,03,150 ಜನರು ವಾಸಿಸುತ್ತಿದ್ದು (ರಾಜ್ಯದ ಒಟ್ಟು ಜನಸಂಖ್ಯೆಯ ಶೇ.7.81 ರಷ್ಟು), ಜಿಲ್ಲಾವಾರು ಜನಸಂಖ್ಯೆ ಪೈಕಿ ಬೆಂಗಳೂರು ಮತ್ತು ಬೆಳಗಾವಿಗಳ ನಂತರದ ಸ್ಥಾನವನ್ನು ಪಡೆದಿದೆ. ಈ ಜಿಲ್ಲೆಯು ನಾಲ್ಕು ಕಂದಾಯ ವಿಭಾಗಗಳನ್ನು ಒಳಗೊಂಡಿದ್ದು 17 ತಾಲೂಕುಗಳನ್ನು ಮತ್ತು 44 ಹೋಬಳಿಗಳನ್ನು ಹೊಂದಿದೆ. ಧಾರವಾಡ ಉಪ ವಿಭಾಗವು ಧಾರವಾಡ, ಹುಬ್ಬಳ್ಳಿ, ಕಲಘಟಗಿ ಮತ್ತು ನವಲಗುಂದ ತಾಲೂಕುಗಳನ್ನು, ಸವಣೂರು ಉಪ ವಿಭಾಗವು ಸವಣೂರು, ಶಿಗ್ಗಾಂವಿ, ಹಾನಗಲ್, ಶಿರಹಟ್ಟಿ ಮತ್ತು ಕುಂದಗೋಳ ತಾಲೂಕುಗಳನ್ನು, ಗದಗ ಉಪ ವಿಭಾಗವು ಗದಗ, ಮುಂಡರಗಿ, ರೋಣ ಮತ್ತು ನರಗುಂದ ತಾಲೂಕುಗಳನ್ನು ಹಾಗೂ ಹಾವೇರಿ ಉಪ ವಿಭಾಗವು ಹಾವೇರಿ, ರಾಣೆಬೆನ್ನೂರು, ಬ್ಯಾಡಗಿ ಮತ್ತು ಹಿರೇಕೆರೂರು ತಾಲೂಕುಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ನರಗುಂದ ತಾಲೂಕು ವಿಸ್ತೀರ್ಣದಲ್ಲಿ ಅತಿ ಚಿಕ್ಕ ತಾಲೂಕು ಆಗಿದ್ದು ಜಿಲ್ಲೆಯ ಶೇ.3.17 ರಷ್ಟು ಪ್ರದೇಶವನ್ನು (435.8 ಚ.ಕಿ.ಮೀ) ಒಳಗೊಂಡಿದೆ ಮತ್ತು ಶೇ.9.39 ರಷ್ಟು ಪ್ರದೇಶವನ್ನು ಹೊಂದಿರುವ ರೋಣ ತಾಲೂಕು (1,290.6 ಚ.ಕಿ.ಮೀ) ಅತಿ ದೊಡ್ಡ ತಾಲೂಕು ಆಗಿದೆ. ಜಿಲ್ಲೆಯಲ್ಲಿ ಒಟ್ಟು 1,362 ಗ್ರಾಮಗಳಿದ್ದು ಇವುಗಳಲ್ಲಿ 40 ಗ್ರಾಮಗಳು ಜನವಸತಿ ಇಲ್ಲದಿರುವ ಗ್ರಾಮಗಳಾಗಿವೆ. ಜಿಲ್ಲೆಯಲ್ಲಿ ಒಟ್ಟು 22 ನಗರ-ಪಟ್ಟಣಗಳಿದ್ದು, 19 ಪುರಸಭೆ ನಗರ ಸಭೆಗಳು ಇವೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಹುಬ್ಬಳ್ಳಿ ಮತ್ತು ಧಾರವಾಡ ತಾಲೂಕುಗಳೆರಡರಲ್ಲೂ ವಿಸ್ತರಿಸಿದೆ. ಜಿಲ್ಲೆಯಲ್ಲಿನ ತಾಲೂಕುವಾರು ಸಾಮಾನ್ಯ ವಿವರಗಳನ್ನು ಹಾಗೂ 1991 ನೇ ಜನಗಣತಿಯಂತೆ ಜನಸಂಖ್ಯೆ ಹಾಗೂ ಜನಸಾಂದ್ರತೆಯನ್ನು ಕೋಷ್ಟಕ 1.1 ರಲ್ಲಿ ಕೊಟ್ಟಿದೆ. ಜಿಲ್ಲೆಯ ವಿಸ್ತೀರ್ಣವು ತಾತ್ಕಾಲಿಕ ಭೌಗೋಳಿಕ ಪ್ರದೇಶವನ್ನು ಪ್ರತಿನಿಧಿಸುತ್ತದೆ ಹಾಗೂ ಈ ಮಾಹಿತಿಯನ್ನು ಭಾರತದ ಸರ್ವೇಯರ್ ಜನರಲ್ ನೀಡಿರುತ್ತಾರೆ. ತಾಲೂಕಿನ ಒಟ್ಟು ಪ್ರದೇಶದ ಅಂಕಿಗಳು ಭೂಬಳಕೆ ಪ್ರದೇಶವನ್ನು ಪ್ರತಿನಿಧಿಸುತ್ತವೆ ಹಾಗೂ ಇದನ್ನು ಭೂಮಾಪನ ನಿರ್ದೇಶಕರು, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆ, ಇವರು

## ಕೋಷ್ಟಕ 1.1 ಧಾರವಾಡ ಜಿಲ್ಲೆಯ ಸಾಮಾನ್ಯ ವಿವರಗಳು

| ಕ್ರಮ ಸಂಖ್ಯೆ | ತಾಲೂಕು | ಹೋಬಳಿಗಳು | ಗ್ರಾಮಗಳು | | ಪಟ್ಟಣ : ನಗರ ಮತ್ತು ನಗರ ಸಮುದಾಯಗಳು | ಪುರಸಭೆ : ನಗರಸಭೆ ಘೋಷಿತ ಪ್ರದೇಶಗಳು | ಪೂರ್ವ ರೇಖಾಂಶ | | ಉತ್ತರ ಅಕ್ಷಾಂಶ | | ವಿಸ್ತೀರ್ಣ (ಚ.ಕಿ.ಮೀ) | ಒಟ್ಟು ಜನಸಂಖ್ಯೆ (೦೦) | ಜನಸಾಂದ್ರತೆ ಪ್ರತಿ ಚ.ಕಿ.ಮೀಗೆ 1991 |
|---|---|---|---|---|---|---|---|---|---|---|---|---|---|
| | | | ಜನ ವಸತಿ ಇರುವ | ಜನ ವಸತಿ ಇಲ್ಲದ | | | ಇಂದ | ವರೆಗೆ | ಇಂದ | ವರೆಗೆ | | | |
| 1. | ಬ್ಯಾಡಗಿ | 2 | 62 | 1 | 1 | 1 | 75° 15' | 75° 36' | 14° 35' | 14° 37' | 436.6 | 1,119 | 256 |
| 2. | ಧಾರವಾಡ | 4 | 105 | 6 | 1 | 1 | 74° 43' | 75° 15' | 15° 19' | 15° 41' | 1,032.5 | 1,928 | 187 |
| 3. | ಗದಗ | 2 | 54 | 1 | 2 | 2 | 75° 16' | 75° 26' | 14° 59' | 15° 24' | 1,097.4 | 2,899 | 264 |
| 4. | ಹಾನಗಲ್ | 3 | 142 | 3 | 1 | 1 | 75° 01' | 75° 20' | 14° 35' | 14° 54' | 773.6 | 2,044 | 264 |
| 5. | ಹಾವೇರಿ | 3 | 86 | 2 | 1 | 1 | 75° 18' | 75° 46' | 14° 42' | 15° 00' | 779.9 | 2,205 | 275 |
| 6. | ಹಿರೇಕೆರೂರ | 3 | 124 | 3 | 1 | - | 75° 14' | 75° 37' | 14° 19' | 14° 36' | 806.6 | 1,920 | 237 |
| 7. | ಹುಬ್ಬಳ್ಳಿ | 3 | 47 | 11 | 1 | 1 | 75° 01' | 75° 28' | 15° 11' | 15° 31' | 631.8 | 1,131 | 178 |
| 8. | ಕಲಘಟಗಿ | 3 | 82 | - | 1 | - | 74° 49' | 75° 09' | 15° 02' | 15° 21' | 682.8 | 1,212 | 177 |
| 9. | ಕುಂದಗೋಳ | 2 | 56 | 1 | 1 | 1 | 75° 09' | 75° 26' | 15° 16' | 15° 37' | 648.5 | 1,380 | 212 |
| 10. | ಮುಂಡರಗಿ | 2 | 48 | - | 1 | 1 | 75° 39' | 75° 56' | 15° 00' | 15° 25' | 884.0 | 1,018 | 115 |
| 11. | ನರಗುಂದ | 2 | 33 | 2 | 1 | 1 | 75° 05' | 75° 34' | 15° 21' | 15° 41' | 435.6 | 867 | 199 |
| 12. | ನವಲಗುಂದ | 2 | 58 | - | 2 | 2 | 75° 16' | 75° 35' | 15° 39' | 15° 51' | 1,080.8 | 1,615 | 149 |
| 13. | ರಾಣೆಬೆನ್ನೂರು | 3 | 103 | 3 | 1 | 1 | 75° 29' | 75° 50' | 14° 24' | 14° 48' | 907.0 | 2,693 | 297 |
| 14. | ರೋಣ | 3 | 91 | - | 3 | 3 | 75° 30' | 76° 02' | 15° 31' | 15° 52' | 1,291.0 | 2,210 | 171 |
| 15. | ಸವಣೂರು | 2 | 62 | - | 1 | 1 | 75° 05' | 75° 46' | 14° 51' | 15° 05' | 539,0 | 1,237 | 229 |
| 16. | ಶಿಗ್ಗಾಂವಿ | 3 | 93 | - | 1 | 1 | 75° 03' | 75° 22' | 14° 52' | 15° 09' | 588.6 | 1,475 | 250 |
| 17. | ಶಿರಹಟ್ಟಿ | 2 | 76 | 7 | 2 | 1 | 75° 24' | 75° 45' | 14° 57' | 15° 17' | 949.2 | 1,597 | 168 |
| 18. | ಹುಧಾಮನ | - | - | - | - | - | - | - | - | - | 190.9 | 6,483 | - |
| | ಒಟ್ಟು | 44 | 1,322 | 40 | 22 | 19 | 74° 43' | 76° 02' | 14° 17' | 15° 50' | 13,738.0 | 35,032 | 255 |

ಹುಧಾಮನ - ಹುಬ್ಬಳ್ಳಿ ಧಾರವಾಡ ಮಹಾ ನಗರ ಸಭೆ ಇದು ಹುಬ್ಬಳ್ಳಿ ಮತ್ತು ಧಾರವಾಡ ತಾಲೂಕುಗಳೆರಡರಲ್ಲೂ ವಿಸ್ತರಿಸಿರುವುದರಿಂದ ಪ್ರತ್ಯೇಕವಾಗಿ ಕೊಟ್ಟಿದೆ.

ಆಧಾರ : ಧಾರವಾಡ ಜಿಲ್ಲಾ ಅಂಕಿ ಅಂಶಗಳ ನೋಟ, 1991-92

ಒದಗಿಸಿದ ಮಾಹಿತಿಯಿಂದ ದೊರಕಿಸಿಕೊಳ್ಳಲಾಗಿದೆ. ಆದುದರಿಂದ, ಎಲ್ಲಾ ತಾಲೂಕುಗಳ ಒಟ್ಟು ವಿಸ್ತೀರ್ಣವು ಜಿಲ್ಲಾ ವಿಸ್ತೀರ್ಣಕ್ಕೆ ಸರಿಹೊಂದುವುದಿಲ್ಲ.

## ಹೆಸರಿನ ಮೂಲ

'ಧಾರವಾಡ' ಎಂಬ ಹೆಸರು ಕನಿಷ್ಠ ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ. ಈ ನಗರದಲ್ಲಿಯ ದುರ್ಗಾ ದೇವಾಲಯದಲ್ಲಿರುವ ಕ್ರಿ.ಶ.1117ರ ಕನ್ನಡ ಶಾಸನದಲ್ಲಿ 'ದಾರವಾಡ' ಎಂಬ ಹೆಸರಿದೆ[1]. ಇದು ಅಂದಿನ ಕುಂದೂರು 500 ಎಂಬ ಆಡಳಿತ ಘಟಕದಲ್ಲಿತ್ತು. ಇದರಲ್ಲಿ ಧಾರವಾಡವು ಸೇರಿದಂತೆ ಇತರ ಕೆಲವು ಗ್ರಾಮಗಳು ಇದ್ದವೆಂಬುದು ಶಾಸನಗಳಿಂದ ತಿಳಿಯುತ್ತದೆ. ಈ ಹೆಸರು ಹೇಗೆ ಬಂದಿತು ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಒಂದು ಊಹೆಯ ಪ್ರಕಾರ ಪ್ರಾಚೀನ ಕಾಲದಿಂದಲೂ ಈಗಿನ ಧಾರವಾಡ, ಮಲೆನಾಡು ಮತ್ತು ಬಯಲು ಸೀಮೆಯ ನಡುವೆ ಸಾಗುತ್ತಿದ್ದ ವ್ಯಾಪಾರಿ ಸರಕುಗಳ ಸುಂಕ ಸಂಗ್ರಹಕ್ಕೆ 'ದ್ವಾರ'ದಂತಿದ್ದ ಮುಖ್ಯ ಪಟ್ಟಣವಾಗಿತ್ತು.[2] ಧಾರವಾಡವು ಪ್ರವೇಶದಾರಿಯ ಅಥವಾ 'ದ್ವಾರದ ವಸಾಹತು (ದಾರ-ದ್ವಾರ, ವಾಡ-ಬಾಡ, ಗ್ರಾಮ) ಎಂಬುದರಿಂದ ಬಂದಿರಬಹುದು.[1] ಕ್ರಿ.ಶ.1216 ರ ಶಾಸನದಲ್ಲಿ ಧಾರವಾಡವನ್ನು ಪಟ್ಟಣವೆಂದು ವರ್ಣಿಸಿರುವುದು ಧಾರವಾಡದ ಪ್ರಾಮುಖ್ಯತೆಯು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ. ಇದೇ ಕಾಲದ ಕಲತೂರಿನ (ಹುಬ್ಬಳ್ಳಿ ತಾ:) ಶಾಸನದಲ್ಲಿ ಈ ಊರನ್ನು ಧಾರವಾಡ ಕಂಪಣಕ್ಕೆ ಸೇರಿದ್ದೆಂದು ವರ್ಣಿಸಿದೆ. ವಿಜಯನಗರ ಕಾಲದ ಸ್ತಂಭ ಶಾಸನವೊಂದರ ಪ್ರಕಾರ ಧಾರವಾಡವು ಆಡಳಿತ ಕೇಂದ್ರವಾಗಿದ್ದುದು ತಿಳಿದುಬರುತ್ತದೆ[2]. ಧಾರವಾಡವು ದಾರಿಯ ಪಕ್ಕದ ಊರು ಆದುದರಿಂದ ಅದು ದಕ್ಷಿಣ ಮತ್ತು ಉತ್ತರ ಕರ್ನಾಟಕದ ಭಾಗಗಳನ್ನು ಜೋಡಿಸುವ ಕೊಂಡಿ(ಮಾರ್ಗ)ಯಾಗಿದೆ. ಧಾರವಾಡವು ನೂಲಿನ ವಸಾಹತು ಎಂಬ ಅರ್ಥವನ್ನು ಹೊಂದಿದ್ದು ಅದಕ್ಕೆ ತಂತುಪುರ (ದಾರ-ತಂತು, ನೂಲು) ಎಂಬ ಹೆಸರು ಇದ್ದಿತೆಂದೂ ಒಂದು ಹೇಳಿಕೆ ಇದೆ. ಧಾರವಾಡವು ಬೆಳವಲ(ಬಯಲುಸೀಮೆ) ಮತ್ತು ಮಲೆನಾಡುಗಳ ಮಧ್ಯೆ ಇದ್ದು ಬೆಳವಲದಿಂದ ಮಲೆನಾಡಿಗೆ ಹೋಗಬೇಕಾದರೆ ಧಾರವಾಡವೇ ಮಾರ್ಗವಾದುದರಿಂದ 'ದ್ವಾರವಾಟ' ಎಂಬ ಹೆಸರು ಬಂದಿದ್ದು ಇದೇ 'ದಾರವಾಡ್' ಆಗಿ ಮುಂದೆ 'ಧಾರವಾಡ' ಆಯಿತು. ಬ್ರಿಟೀಷರ ಕಾಲದಲ್ಲಿ ಧಾರವಾಡವು 'ಧಾರವಾರ್' ಆಗಿ ನಂತರ 'ಧಾರವಾಡ'ವೆಂದೇ ಪ್ರಸಿದ್ಧಿಯಾಗಿದೆ. (ಕರ್ನಾಟಕ ಸರ್ಕಾರದ ಆದೇಶ ದಿನಾಂಕ 31.1.1977 ರ ಪ್ರಕಾರ). ಕರ್ನಾಟಕ ರಾಜ್ಯದ ಬಹುತೇಕ ಜಿಲ್ಲೆಗಳಂತೆ ಧಾರವಾಡ ಜಿಲ್ಲೆಯು ತನ್ನ ಜಿಲ್ಲಾ ಕೇಂದ್ರದ ಹೆಸರಿನಲ್ಲೆ ಪ್ರಸಿದ್ಧಿಯಾಗಿದೆ.

## ಪ್ರಾದೇಶಿಕ ಬದಲಾವಣೆಗಳು

ಕರ್ನಾಟಕದ ಪ್ರದೇಶ ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದಾಗ ಧಾರವಾಡವೂ ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದಿರಬಹುದೆಂದು ಊಹಿಸಲಾಗಿದೆ. ಸಾತವಾಹನರು ಕರ್ನಾಟಕದಲ್ಲಿ ಆಳಿದಾಗ ಧಾರವಾಡ ಪ್ರದೇಶ ಅವರ ಅಧೀನಕ್ಕೆ ಒಳಪಟ್ಟಿತ್ತು. ಕದಂಬರ ಕಾಲಕ್ಕೆ ಜಿಲ್ಲೆಯು ಕದಂಬ ರಾಜ್ಯದ ಒಂದು ಭಾಗವಾಗಿತ್ತೆಂದು ಖಚಿತವಾಗಿ ತಿಳಿದುಬಂದಿದೆ. ದೇವಗಿರಿ ಊರು ಅವರ ಉಪರಾಜಧಾನಿ ತ್ರಿಪರ್ವತವೆಂದು ಅಭಿಪ್ರಾಯವಿದೆ. ಬಾದಾಮಿಯಲ್ಲಿ ಚಾಳುಕ್ಯ ಅರಸರು ಕದಂಬರ ನಂತರ ಆಳತೊಡಗಿದಾಗ ಧಾರವಾಡ ಜಿಲ್ಲೆ ಅವರ ಅಧೀನವಾಯಿತು. ಇದೇ ಅವಧಿಯಲ್ಲಿ ಸೇಂದ್ರಕ ಕುಲದ ಹಲವರು ಬಾದಾಮಿಯ ಚಾಳುಕ್ಯರ ಸಾಮಂತರಾಗಿ ಜಿಲ್ಲೆಯ ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಾಷ್ಟ್ರಕೂಟರು ಬಾದಾಮಿ ಚಾಲುಕ್ಯರ ನಂತರ ರಾಜ್ಯಭಾರ ಮಾಡಿದರು. ಇವರ ಆಳ್ವಿಕೆಯ ವೇಳೆಗೆ ಆಡಳಿತಕ್ಕೆ ಸಂಬಂಧಿಸಿದ ವಿಭಾಗಗಳು ರೂಪುಗೊಂಡು ಹಲವಾರು ಬಾಡಗಳನ್ನು (ಗ್ರಾಮ) ಒಳಗೊಂಡ ಪ್ರಾಂತ್ಯಗಳು ಕಾಣಿಸಿಕೊಂಡವು. ಧಾರವಾಡ ಜಿಲ್ಲೆಯ ಭಾಗಗಳು ಸೇರಿದ್ದ ದೊಡ್ಡ ಪ್ರಾಂತ್ಯ ಬನವಾಸಿ-12,000, ಬಾಸವೂರ-140 (ಹಾವೇರಿ ತಾಲೂಕಿನ ಭಾಗಗಳನ್ನೊಳಗೊಂಡ ಪ್ರದೇಶ), ಬೆಳಹುಗೆ-70, ಗುತ್ತವೂಳಲು, ನೀರಲಗಿ ಮುಂತಾದ ಗ್ರಾಮಗಳನ್ನುಳ್ಳ ಅದೇ ತಾಲೂಕಿನ ಭಾಗ. ಬೆಣ್ಣೆವೂರ-12 ಎಂಬುದು ರಾಣೆಬೆನ್ನೂರು ತಾಲೂಕಿನ ಮೋಟೆ ಬೆನ್ನೂರು ಗ್ರಾಮದ ಸುತ್ತಲ ಪ್ರದೇಶ. ಬೆಂಚಿಲಗಿ-50 ರ ಮುಖ್ಯ ಗ್ರಾಮ ಗದಗ ತಾಲೂಕಿನ ಬೆಂಚಲಿ. ಹಿಚಗೆನಾಡು ಹಾವೇರಿ ತಾಲೂಕಿನ ಹಿರಿಯ ಕಿತ್ತೂರು ಮತ್ತು ಇಚ್ಚಂಗಿಗಳನ್ನೊಳಗೊಂಡ ಭಾಗ. ರಾಣೆಬೆನ್ನೂರಿನ ಇಟಗಿ, ಹಿರೇಕೆರೂರಿನ ರಟ್ಟೀಹಳ್ಳಿ ಗ್ರಾಮಗಳು ಕ್ರಮವಾಗಿ ಇಟ್ಟಗೆ-30 ಮತ್ತು ರಟ್ಟಪಳ್ಳಿ-70 ಭಾಗಗಳನ್ನೊಳಗೊಂಡು ಒಟ್ಟಾಗಿ ನೂರುಂಬಾಡವೆನಿಸಿತ್ತು. ಕಾಗಿನೆಲೆ-12 ಹಿರೇಕೆರೂರು ತಾಲೂಕಿನ

---

1. ಡಾ: ವರದರಾಜ ಉಮರ್ಜಿ, 'ದಾ'ರವಾಡದಿಂದ 'ಧಾ'ರವಾಡಕ್ಕೆ, ಧಾರವಾಡ ಮಾರ್ಗದರ್ಶಿ, ಅಭಿಜಾತ ಪ್ರಕಾಶನ, ಧಾರವಾಡ, 1985, ಪು.3-23.
2. ಅ.ಸುಂದರ, ಧಾರವಾಡ ನಗರ ಸಾಂಸ್ಕೃತಿಕ ಪರಂಪರೆ, ಹಚ್ಚೇವು ಕನ್ನಡದ ದೀಪ, ಪು.19, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಾಗಿನೆಲ್ಲಿ ಗ್ರಾಮದ ಸುತ್ತಲಿನ ಪ್ರಾಂತ್ಯ. ಕೊಳನೂರು-30 ರ ಮುಖ್ಯ ಗ್ರಾಮ ನವಲಗುಂದ ತಾಲೂಕಿನ ಕೊಣ್ಣೂರು. ಪಾನುಂಗಲ್ಲು-500, ಬೆಳ್ವೊಲ-300, ಪುಲಿಗೆರೆ-300 ಇವು ಜಿಲ್ಲೆಯ ಬಹುಭಾಗದಲ್ಲಿ ಹಬ್ಬಿದ್ದ ಪ್ರಾಂತ್ಯಗಳು. ಧಾರವಾಡದ ಸಮೀಪದ ಗ್ರಾಮವಾದ ನರೇಂದ್ರವು ಕುಂದೂರು-500 ರ ಒಂದು ಕೇಂದ್ರ. ನರಯಂಗಲ್ಲು-12 ಈಗಿನ ರೋಣ ತಾಲೂಕಿನ ಭಾಗ. ಈ ಪ್ರಾಂತ್ಯಗಳಲ್ಲಿ ಸಣ್ಣ ದೊಡ್ಡ ಸಾಮಂತರು, ಮಂಡಲೇಶ್ವರರು ಕ್ರಮೇಣ ವಂಶಪಾರಂಪರ್ಯವಾಗಿ ಹಲವಾರು ಭಾಗಗಳನ್ನು ಆಳತೊಡಗಿದರು.

ಧಾರವಾಡ ಜಿಲ್ಲೆ 10-12ನೆ ಶತಮಾನಗಳಲ್ಲಿ ರಾಷ್ಟ್ರಕೂಟರ ಕಲ್ಯಾಣದ ಚಾಳುಕ್ಯರ ರಾಜ್ಯಗಳ ಭಾಗವಾಗಿತ್ತು. ಹಾನಗಲ್ಲಿನ ಕದಂಬರು, ಗುತ್ತಲದ ಗುತ್ತರು, ರಟ್ಟಿಹಳ್ಳಿಯ ಸಿಂದರು, ಗೋವೆಯ ಕದಂಬರು, ಯಲಬುರ್ಗಿಯ ಸಿಂದರು, ನೂರುಂಬಾಡದ ಕದಂಬರು, ಕಲ್ಯಾಣಿ ಚಾಳುಕ್ಯರ ಮಾಂಡಳಿಕರಾಗಿ ಜಿಲ್ಲೆಯ ಭಾಗಗಳಲ್ಲಿ ಆಳಿದರು. ಕಲ್ಯಾಣಿ ಚಾಳುಕ್ಯರ ಅನಂತರ ಆರಂಭದಲ್ಲಿ ಕಳಚೂರಿ ಬಿಜ್ಜಳನಿಗೆ ಇಲ್ಲಿನ ಕೆಲವು ಮಾಂಡಲಿಕರು ಬೆಂಬಲ ನೀಡಿದರು. ನಂತರ ಹೊಯ್ಸಳ ಮತ್ತು ಸೇವುಣರ ಆಡಳಿತಕ್ಕೊ ಜಿಲ್ಲಾ ಪ್ರದೇಶ ಒಳಪಟ್ಟಿತ್ತು. ಇಬ್ಬರ ನಡುವೆ ಆಗಾಗ ವಿಭಜಿತವಾಗುತ್ತಲಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಾಗ ಮತ್ತೊಮ್ಮೆ ಈ ಜಿಲ್ಲಾ ಪ್ರದೇಶದ ಆಳ್ವಿಕೆಗಾಗಿ ಸ್ಪರ್ಧೆಗಳೇರ್ಪಟ್ಟವು. ಜಿಲ್ಲೆಯ ಬಂಕಾಪುರ ಪರಿಸರದ ಪ್ರದೇಶಗಳು ಆಗಾಗ್ಗೆ ಕೈಬದಲಾಯಿಸುತ್ತಿದ್ದವು. ಬಿಜಾಪುರದ ಯೂಸುಫ್ ಆದಿಲ್ ಷಹ ಸ್ವತಂತ್ರವಾಗಿ ಆಳತೊಡಗಿದಾಗ (1489) ಜಿಲ್ಲೆಯ ಬಹಳ ಭಾಗಗಳು ಆತನ ವಶವಾದವು. ಆದರೂ ಕೃಷ್ಣದೇವರಾಯ ಹಾಗೂ ಅವನ ಅನಂತರದ ಅರಸರ ಕಾಲದಲ್ಲಿ ಜಿಲ್ಲೆಯ ದಕ್ಷಿಣದ ಪ್ರದೇಶಗಳು ಅವರ ಅಧೀನದಲ್ಲಿ ಇದ್ದವು. ಸುಮಾರು 1573 ರಿಂದ ಒಂದು ಶತಮಾನದ ಕಾಲ ಜಿಲ್ಲೆ ಬಿಜಾಪುರ ಸುಲ್ತಾನನ ಅಧೀನದಲ್ಲಿತ್ತು. ಈ ಜಿಲ್ಲೆಯ ಕೆಲವು ಪ್ರದೇಶಗಳು ಶಿವಾಜಿ ಮತ್ತು ಅವನ ಮಗ ಸಂಬಾಜಿಯ ಆಳ್ವಿಕೆಗೆ ಒಳಪಟ್ಟಿದ್ದು ನಂತರ ಮುಗಲರ ವಶಕ್ಕೆ 1586ರಲ್ಲಿ ಬದಲಾವಣೆಯಾಯಿತು. 1686 ರಲ್ಲಿ ಬಿಜಾಪುರ ಮುಗಲ್ ಸಾಮ್ರಾಜ್ಯಕ್ಕೆ ಸೇರಿದಾಗ ಸವಣೂರನ್ನು ಆಡಳಿತ ಕೇಂದ್ರವನ್ನಾಗಿ ಮಾಡಲಾಯಿತು. ಇದೇ ಅವಧಿಯಲ್ಲಿ ನವಲಗುಂದ, ಶಿರಹಟ್ಟಿ, ಹಾವನೂರು, ಡಂಬಳ ಮೊದಲಾದೆಡೆಗಳಲ್ಲಿ ದೇಸಾಯರ ಮನೆತನಗಳು ಅಧಿಕಾರದಲ್ಲಿ ಇದ್ದವು. 1719ರಲ್ಲಿ ಮುಗಲ್ ಚಕ್ರವರ್ತಿಯಿಂದ ಮರಾಠರು ಚೌತಾಯಿ ಮತ್ತು ಸರ್ದೇಶಮುಖಿಯನ್ನು ವಸೂಲು ಮಾಡುವ ಅಧಿಕಾರವನ್ನು ಹಲವಾರು ಪ್ರದೇಶಗಳ ಸ್ವರಾಜ್ಯವನ್ನು ಪಡೆದರು. ಈ ಜಿಲ್ಲೆ ಹೀಗೆ ಮರಾಠರ ಚಟುವಟಿಕೆಗೆ ಸದಾ ತೆರವಾಯಿತು. 1720 ರಿಂದ 1818 ರ ಅವಧಿಯಲ್ಲಿ ಅನೇಕ ಮರಾಠಾ ಸರದಾರರು ಮರಾಠಾ ಪೇಶ್ವೆಗಳ ಅಧೀನದಲ್ಲಿ ಆಡಳಿತ ನಿರ್ವಹಿಸುತ್ತಿದ್ದರು. ಈ ಮಧ್ಯದಲ್ಲಿ ಜಿಲ್ಲೆಯ ಹಲವು ಭಾಗಗಳು ನಾಮತಃ ಹೈದರಾಬಾದಿನ ನಿಜಾಮನ ಅಧೀನದಲ್ಲಿದ್ದವು. ಈ ಕಾಲದಲ್ಲಿ ಸವಣೂರು ನವಾಬರು ಮುಗಲರ ಅಧೀನವಾದ ಮುಖ್ಯ ಪ್ರಭುತ್ವಶಕ್ತಿಯಾಗಿ ತಲೆಯೆತ್ತಿದ್ದರು. ಇದೇ ಕಾಲದಲ್ಲಿ ಹೈದರ್ ಅಲಿ ಮತ್ತು ಟಿಪ್ಪುಸುಲ್ತಾನ್ ಸಹ ಜಿಲ್ಲೆಯ ಪ್ರಾಂತ್ಯದ ಮೇಲೆ ಆಗಾಗ್ಗೆ ದಾಳಿ ನಡೆಸಿ ಸವಣೂರು ಮೊದಲಾದ ಕೆಲವು ಭಾಗಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದರು. 1791 ರಲ್ಲಿ ಟಿಪ್ಪುವಿನ ಸೋಲಿನ ನಂತರ ಜಿಲ್ಲೆಯ ಪ್ರದೇಶ ಮರಾಠರ ಅಧೀನಕ್ಕೆ ಬಂದಿತು. 1818 ರಿಂದ ಬ್ರಿಟಿಷರ ಆಳ್ವಿಕೆ ಮೊದಲಿಟ್ಟಿತು. ಆದರೆ ನರಗುಂದ, ಸಾಂಗಲಿ, ಮಿರ್ಜಿ, ಜಮಖಂಡಿ ಹಾಗೂ ಸವಣೂರುಗಳಂಥ ಬ್ರಿಟಿಷರ ಅಧೀನ ಸಂಸ್ಥಾನಿಕರ ವಶದಲ್ಲಿ ಹಲವು ಪ್ರದೇಶಗಳು ಇದ್ದವು.

ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳ ತೀರ್ಮಾನದಂತೆ 1830 ರಲ್ಲಿ ಧಾರವಾಡ ಜಿಲ್ಲೆಯನ್ನು ರಚಿಸಿ ಮುಂಬಯಿ ಪ್ರಾಂತ್ಯಕ್ಕೆ ಸೇರಿಸಲಾಯಿತು. ಅಂದಿನ ಧಾರವಾಡ ಜಿಲ್ಲೆ ಈಗಿನ ಜಿಲ್ಲಾ ಪ್ರದೇಶವಲ್ಲದೆ ಇಂದಿನ ಬೆಳಗಾವಿ, ಬಿಜಾಪುರ, ಸೊಲ್ಲಾಪುರ ಜಿಲ್ಲೆಗಳ ಹಲವು ಪ್ರದೇಶಗಳನ್ನು ಒಳಗೊಂಡಿತ್ತು. 1836 ರಲ್ಲಿ ಬೆಳಗಾವಿ ಜಿಲ್ಲೆ ಪ್ರತ್ಯೇಕಗೊಂಡಿತು. 1857-58 ರಲ್ಲಿ ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾವ್ ಇವರುಗಳ ನೇತೃತ್ವದಲ್ಲಿ ಕ್ರಾಂತಿ ನಡೆಯಿತು. ನಂತರ ಜಿಲ್ಲೆಯಲ್ಲಿ ಬ್ರಿಟೀಷರ ಆಳ್ವಿಕೆ ಸ್ಥಿರವಾಗಿ ನೆಲೆಸಿ ನರಗುಂದಕ್ಕೆ ಸೇರಿದ್ದ ಹಳ್ಳಿಗಳು ಬ್ರಿಟಿಷರ ವಶವಾದವು. ಬ್ರಿಟೀಷ್ ರೀತಿಯ ಆಡಳಿತ ಕ್ರಮ, ಇಂಗ್ಲೀಷ್ ವಿದ್ಯಾಭ್ಯಾಸ ಮೊದಲಾದ ಹಲವು ಚಟುವಟಿಕೆಗಳು ಪ್ರಾರಂಭಗೊಂಡವು. ಧಾರವಾಡ ಜಿಲ್ಲೆಯು ಪೂರ್ಣವಾಗಿ ಮುಂಬಯಿ ಪ್ರಾಂತ್ಯದ ಭಾಗವಾಗಿದ್ದ ಆಡಳಿತ ಘಟಕವಾಗಿದ್ದರೂ ಸವಣೂರು ಅಲ್ಲದೆ ಹಲವು ಮರಾಠಾ ಸಂಸ್ಥಾನಗಳ ಭಾಗಗಳು ಇದರಲ್ಲಿ ಸೇರಿದ್ದವು. 1949 ರ ಆಗಸ್ಟ್ ಒಂದರಂದು ಸಂಸ್ಥಾನಗಳಿಗೆ ಸೇರಿದ ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಿದ ವಿವರಗಳು ಹೀಗಿವೆ: ಜಮಖಂಡಿ ಸಂಸ್ಥಾನದಿಂದ 17 ಗ್ರಾಮಗಳು ಮತ್ತು ಮೂರು ಪಟ್ಟಣಗಳು, ಹಿರಿಯ ಮೀರಜ ಸಂಸ್ಥಾನದ 15 ಗ್ರಾಮಗಳು ಮತ್ತು ಎರಡು ಪಟ್ಟಣಗಳು, ಕಿರಿಯ ಮೀರಜ ಸಂಸ್ಥಾನದ 14 ಗ್ರಾಮಗಳು ಮತ್ತು ಒಂದು ಪಟ್ಟಣ, ಸಾಂಗ್ಲಿ ಸಂಸ್ಥಾನದಿಂದ 72 ಗ್ರಾಮಗಳು ಮತ್ತು ಒಂದು ಪಟ್ಟಣ,

ರಾಮದುರ್ಗ ಸಂಸ್ಥಾನದ ಏಳು ಗ್ರಾಮಗಳು ಮತ್ತು ಇಡೀ ಸವಣೂರು ಸಂಸ್ಥಾನ. ಅದೇ ಕಾಲದಲ್ಲಿ ರಾಮದುರ್ಗ ತಾಲೂಕಿಗೆ ಧಾರವಾಡ ಜಿಲ್ಲೆಯ ಮೂರು ಗ್ರಾಮಗಳನ್ನು ಮತ್ತು ಹೈದರಾಬಾದು ರಾಜ್ಯಕ್ಕೆ ನಾಲ್ಕು ಗ್ರಾಮಗಳನ್ನು ವರ್ಗಾಯಿಸಲಾಯಿತು. ಹೈದರಾಬಾದು ರಾಜ್ಯದಿಂದ 12 ಗ್ರಾಮಗಳನ್ನು ಧಾರವಾಡ ಜಿಲ್ಲೆಗೆ ಸೇರಿಸಲಾಯಿತು. 1962ರಲ್ಲಿ ಧಾರವಾಡ ಹುಬ್ಬಳ್ಳಿ ಪಟ್ಟಣಗಳನ್ನು ಸೇರಿಸಿ ಮಹಾನಗರವೆಂದು ಪರಿಗಣಿಸಲಾಯಿತು. 1969ರಲ್ಲಿ ಹಾವೇರಿ ತಾಲೂಕಿನ 26ಗ್ರಾಮಗಳನ್ನು ಮತ್ತು ಶಿಗ್ಗಾಂವಿ ತಾಲೂಕಿನ 37 ಗ್ರಾಮಗಳನ್ನು ಸೇರಿಸಿ ಸವಣೂರು ತಾಲೂಕನ್ನು ರಚಿಸಲಾಯಿತು. ಈಗಿನ ಧಾರವಾಡ ಜಿಲ್ಲೆಯು ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಒಂದಾಗಿ ಬೆಳಗಾವಿ ವಿಭಾಗಕ್ಕೆ ಸೇರಿದೆ. 1981 ರ ಜನಗಣತಿಯಂತೆ ಕೋಷ್ಟಕ 1.2 ರಲ್ಲಿ ಧಾರವಾಡ ಜಿಲ್ಲೆಯ ಹೋಬಳಿವಾರು ಗ್ರಾಮಗಳ ಸಂಖ್ಯೆಯನ್ನು ಕೊಟ್ಟಿದೆ.

**ಕೋಷ್ಟಕ 1.2 ಧಾರವಾಡ ಜಿಲ್ಲೆಯ ಹೋಬಳಿವಾರು ಗ್ರಾಮಗಳ ಪಟ್ಟಿ-1981**

| ಕ್ರಮ ಸಂಖ್ಯೆ | ತಾಲೂಕು | ಗ್ರಾಮಗಳ ಸಂಖ್ಯೆ ಕಂದಾಯ ಮತ್ತು ಭೂದಾಖಲೆ ಪ್ರಕಾರ | 1981ರ ಜನಗಣತಿ ಮೇರೆಗೆ | ಹೋಬಳಿ: (ಕಂದಾಯ ವೃತ್ತಗಳು) | ಗ್ರಾಮಗಳ ಸಂಖ್ಯೆ | ಪಟ್ಟಣಗಳ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಬ್ಯಾಡಗಿ | 63 | 63 | ಬ್ಯಾಡಗಿ | 28 | 1 |
| | | | | ಕಾಗಿನೆಲ್ಲಿ | 35 | |
| 2 | ಧಾರವಾಡ | 133 | 111 | ಧಾರವಾಡ | 22 | 1 |
| | | | | ಅಳ್ನಾವರ | 29 | |
| | | | | ಗರಗ | 36 | |
| | | | | ಅಮ್ಮಿನಬಾವಿ | 24 | |
| 3 | ಗದಗ | 57 | 55 | ಗದಗ | 26 | 2 |
| | | | | ಬೆಟಗೇರಿ | 29 | |
| 4 | ಹಾನಗಲ್ | 146 | 145 | ಹಾನಗಲ್ | 46 | 1 |
| | | | | ಬೊಮ್ಮನಹಳ್ಳಿ | 48 | |
| | | | | ಅಕ್ಕಿ ಆಲೂರು | 51 | |
| 5 | ಹಾವೇರಿ | 88 | 88 | ಹಾವೇರಿ | 27 | 1 |
| | | | | ಕರಜಗಿ | 30 | |
| | | | | ಗುತ್ತಲ | 31 | |
| 6 | ಹಿರೇಕೆರೂರು | 128 | 127 | ಹಿರೇಕೆರೂರು | 44 | 1 |
| | | | | ಹಂಸಬಾವಿ | 36 | |
| | | | | ರಟ್ಟಿಹಳ್ಳಿ | 47 | |
| 7 | ಹುಬ್ಬಳ್ಳಿ | 66 | 58 | ಹುಬ್ಬಳ್ಳಿ | 14 | 1 |
| | | | | ಶಿರಗುಪ್ಪ | 44 | |
| 8 | ಕಲಘಟಗಿ | 86 | 82 | ಕಲಘಟಗಿ | 25 | 1 |
| | | | | ದುಮ್ಮವಾಡ | 31 | |
| | | | | ತಬಕದಹೊನ್ನಹಳ್ಳಿ | 26 | |
| 9 | ಕುಂದಗೋಳ | 57 | 57 | ಕುಂದಗೋಳ | 31 | 1 |
| | | | | ಸಂಶಿ | 26 | |
| 10 | ಮುಂಡರಗಿ | 51 | 48 | ಮುಂಡರಗಿ | 23 | 1 |
| | | | | ಡಂಬಳ | 25 | |
| 11 | ನರಗುಂದ | 35 | 35 | ನರಗುಂದ | 20 | 1 |
| | | | | ಕೊಣ್ಣೂರು | 15 | |
| 12 | ನವಲಗುಂದ | 59 | 58 | ಮೊರಬ | 27 | 2 |
| | | | | ಅಣ್ಣಿಗೇರಿ | 31 | |
| 13 | ರಾಣೆಬೆನ್ನೂರು | 106 | 106 | ರಾಣೆಬೆನ್ನೂರು | 33 | 1 |
| | | | | ಕುಪ್ಪೇಲೂರು | 41 | |
| | | | | ಮೆಡ್ಲೇರಿ | 32 | |
| 14 | ರೋಣ | 95 | 91 | ರೋಣ | 32 | 3 |
| | | | | ನರೇಗಲ್ | 32 | |
| | | | | ಹೊಳೆ ಆಲೂರು | 27 | |
| 15 | ಸವಣೂರು | 62 | 62 | ಸವಣೂರು | 33 | 1 |
| | | | | ಹತ್ತಿಮತ್ತೂರು | 29 | |
| 16 | ಶಿಗ್ಗಾಂವಿ | 91 | 93 | ಶಿಗ್ಗಾಂವಿ | 22 | 1 |
| | | | | ಬಂಕಾಪುರ | 38 | |
| | | | | ದುಂಡಶಿ | 33 | |
| 17 | ಶಿರಹಟ್ಟಿ | 83 | 83 | ಶಿರಹಟ್ಟಿ | 44 | 2 |
| | | | | ಲಕ್ಷ್ಮೇಶ್ವರ | 39 | |
| | ಧಾರವಾಡ ಜಿಲ್ಲೆ | 1,406 | 1,362 | 43 | | 22 |

ಸಂಸ್ಥಾನಗಳ ವಿಲೀನೀಕರಣ ಆದಾಗ ವಿಲೀನಗೊಳಿಸಲ್ಪಟ್ಟ ಕಂದಾಯ ಗ್ರಾಮಗಳ ವಿವರ ಹೀಗಿವೆ.

1. ಜಮಖಿಂಡಿ ಸಂಸ್ಥಾನದಿಂದ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿಗೆ ವಿಲೀನಗೊಳಿಸಿದ ಗ್ರಾಮಗಳು: 1) ಕುಂದಗೋಳ 2) ಮಾಜಿಪುರ 3) ಮಾಜಿಕಡಪಟ್ಟಿ 4) ಮಾಜಿ ಅಲ್ಲಾಪುರ 5) ಬೆಟದೂರ 6) ದೇವನೂರ 7) ಕೂಬಿಹಾಳ 8) ಯಲಿವಾಳ 9) ವಿಠಲಾಪುರ 10) ಶಿರೂರ 11) ಕಮಡೊಳ್ಳಿ 12) ಮನಸಾಲಿ (ಬೆಚರಾಕ್ ಗ್ರಾಮ) 13) ನೆಲಗುಡ್ಡ 14) ಹಂಚಿನಾಳ 15) ಇನಾಂಕೊಪ್ಪ ಮತ್ತು 16) ಗುಡೇನಕಟ್ಟಿ.

2. ಸಾಂಗಲಿ ಸಂಸ್ಥಾನದಿಂದ ಶಿರಹಟ್ಟಿ ತಾಲೂಕಿನಲ್ಲಿ ವಿಲೀನಗೊಳಿಸಲ್ಪಟ್ಟ ಗ್ರಾಮಗಳ ಯಾದಿ: 1) ಶಿರಹಟ್ಟಿ 2) ಖಾನಾಪುರ 3) ರಣತೂರ 4) ದೇವಿಹಾಳ 5) ತೆಗ್ಗಿನಭಾವನೂರ 6) ನವೇಭಾವನೂರ 7) ಭಾವನೂರ 8) ಮಾಚೇನಹಳ್ಳಿ 9) ನಾಗರಮಡವು 10) ತಂಗೋಡ 11) ಮಜ್ಜೂರ 12) ಕುಸಲಾಪುರ 13) ಛಬ್ಬಿ 14) ಕಡಕೋಳ 15) ಜಲ್ಲಿಗೇರಿ 16) ವಡವಿ 17) ಬೆಳ್ಳಟ್ಟಿ 18) ನಾರಾಯಣಪುರ 19) ಚಿಕ್ಕಸವಣೂರ 20) ಸಾಸರವಾಡ 21) ತೊಳಲಿ 22) ಕಲ್ಲಿಗನೂರ 23) ಚೌಡಾಳ 24) ಕನಕವಾಡ 25) ಇಟಗಿ 26) ಬಸಾಪೂರ 27) ಕೆರೆಹಳ್ಳಿ 28) ತಾರಿಕೊಪ್ಪ 29) ಅಲಗಿಲವಾಡ 30) ಬೆಳಗಟ್ಟಿ 31) ಹೊಸೂರು 32) ಹುಲ್ಲೂರು 33) ನೆಲೋಗಲ್ 34) ಅಮರಾಪುರ 35) ಬನ್ನಿಕೊಪ್ಪ 36) ಸುಗ್ಗನಹಳ್ಳಿ 37) ಹಡಗಲಿ 38) ಯಳವತ್ತಿ 39) ಮಾಡಳ್ಳಿ 40) ಯತ್ನಳ್ಳಿ 41) ಗೊಜನೂರ 42) ಅಕ್ಕಿಗುಂದ 43) ಮಾಗಡಿ 44) ಹೊಳಲಾಪುರ 45) ಪರಸಾಪೂರ 46) ಅದ್ರಕಟ್ಟಿ 47) ಹರದಗಟ್ಟಿ 48) ಹಿರೇಮಲ್ಲಾಪುರ 49) ಬಟ್ಟೂರ 50) ಶೆಟ್ಟಿಗೇರಿ 51) ಸಂಕದಾಳ 52) ನಾದಿಗಟ್ಟಿ 53) ಆದ್ರಳ್ಳಿ 54) ನೋಗಿವಾಳ 55) ಕೊಕ್ಕರಗುಂದಿ ಮತ್ತು 56) ಬೂದಿಹಾಳ.

3. ಹಿರೇ ಮಿರ್ಜಿ ಸಂಸ್ಥಾನಕ್ಕೆ ಸೇರಿದ್ದು ಶಿರಹಟ್ಟಿ ತಾಲೂಕಿನಲ್ಲಿ ವಿಲೀನಗೊಂಡ ಕಂದಾಯ ಗ್ರಾಮಗಳು: 1) ಹಿರೇಬಣ 2) ಪೇಠಾಬಣ 3) ಬಸ್ತಿಬಣ 4) ಹುಲಿಗೇರಿಬಣ 5) ದೇಸಾಯಿ ಬಣ 6) ಒಡೆಯರ್ ಮಲ್ಲಾಪುರ 7) ಶಿಗ್ಲಿ 8) ದೊಡ್ಡೂರ 9) ಉಳ್ಳಟ್ಟಿ 10) ಶ್ಯಾಬಾಳ 11) ಉಂಡೇನಹಳ್ಳಿ 12) ರಾಮಗೇರಿ ಮತ್ತು 13) ಅಂಕಲಿ.

4. ಕಿರಿಮಿರ್ಜಿ ಅಥವಾ ಬುಧಗಾಂವ ಸಂಸ್ಥಾನಕ್ಕೆ ಸೇರಿದ್ದು ಶಿರಹಟ್ಟಿ ತಾಲೂಕಿನಲ್ಲಿ ವಿಲೀನಗೊಂಡ ಕಂದಾಯ ಗ್ರಾಮಗಳು: 1) ಹೆಬ್ಬಾಳ 2) ಯಲ್ಲಾಪುರ 3) ಬಾಲೆ ಹೊಸೂರು 4) ಗೋವನಾಳ ಮತ್ತು 5) ಗುಲಗಂಜಿಕೊಪ್ಪ.

5. ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ಈ ಕೆಳಗಿನ ಗ್ರಾಮಗಳನ್ನು ರೋಣ ತಾಲೂಕಿಗೆ ವರ್ಗಾಯಿಸಿದೆ 1) ಇಟಗಿ 2) ಮುಳಗಿ 3) ಶಾಂತಗೇರಿ 4) ಹೊನ್ನಿಗನೂರ ಮತ್ತು 5) ತಳ್ಳೀಹಾಳ 6) ಗೂಳಗುಳಿ 7) ಹಿರೆಅಳಗುಂಡಿ 8) ಚಿಕ್ಕ ಅಳಗುಂಡಿ 9) ಬೊಮ್ಮಸಾಗರ 10) ಸರ್ಜಾಪುರ 11) ಬೆಳಗೋಡ ಮತ್ತು 12) ಯರೇಕದಂಬನಹಾಳ (ಬೇರೆ ಮೂಲಗಳಿಂದ ಗುಡ್ಡದ ಮಲ್ಲಾಪುರ ಎಂಬ ಇನ್ನೊಂದು ಹಳ್ಳಿಯ ಹೆಸರು ಬಂದಿದೆ. ಇದನ್ನು ಬೇರೆ ಕಂದಾಯ ಗ್ರಾಮಕ್ಕೆ ಸೇರಿಸಿರಬಹುದು).

ಸವಣೂರು ಸಂಸ್ಥಾನದಲ್ಲಿದ್ದ 25 ಹಳ್ಳಿಗಳ ಪೈಕಿ ಶಿಗ್ಗಾಂವಿ ತಾಲೂಕಿಗೆ 1949 ರಲ್ಲಿ ಬಸವನಕೊಪ್ಪ, ಚಿಲ್ಲೂರು, ಚಿಕ್ಕಮಣಕಟ್ಟಿ, ಸವಣೂರು, ಜೇಕಿನಕಟ್ಟಿ, ಮಾದಾಪುರ, ನಂದೀಹಳ್ಳಿ, ನೀರಲಕಟ್ಟೆ, ತೊರೂರು, ಹೋತನಹಳ್ಳಿ, ತೊಂಡೂರು, ವಡ್ಡಿನಕೊಪ್ಪ, ನಾಯಿಕೆರೂರು, ಗಬ್ಬೂರು, ಕಬನೂರು, ಸುರಪಗಟ್ಟಿ, ಯಕ್ಕಿಕೊಪ್ಪ, ಮಣ್ಣೂರು, ಚಂದಾಪುರ, ಮುಳಗೇರಿ, ಹೂಲಿಕಟ್ಟೆ ಮತ್ತು ಹೊನ್ನಿಕೊಪ್ಪ ಗ್ರಾಮಗಳನ್ನು ಸೇರಿಸಲಾಯಿತು. ಇನ್ನುಳಿದ ಡೊಂಬರಮತ್ತೂರು, ಸಿದ್ಧಾಪುರ ಮತ್ತು ಕಲಿನಾಳ ಗ್ರಾಮಗಳನ್ನು ಹಾವೇರಿ ತಾಲೂಕಿಗೆ ಸೇರಿಸಲಾಯಿತು.

1969 ರಲ್ಲಿ ಸವಣೂರು ತಾಲೂಕು ರಚನೆಯಾದಾಗ (4 ನೇ ಡಿಸೆಂಬರ್ 1969) ಶಿಗ್ಗಾಂವಿ ತಾಲೂಕಿನಿಂದ 37 ಗ್ರಾಮಗಳನ್ನು (ಸವಣೂರು ಪೇಟೆ, ಸವಣೂರು ಗ್ರಾಮೀಣ, ಸವಣೂರು ನಗರ, ಯಲವಿಗಿ, ಚಿಲ್ಲೂರು, ಚವಡಾಳ, ಚಿಲ್ಲೂರುಬಡಣಿ, ಅಲ್ಲಿಪುರ, ಹುರಳಿಕೊಪ್ಪ, ಚಲ್ಲಾಳ, ತೊಂಡೂರು, ಕುರುಬರ ಮಲ್ಲೂರು, ಮನ್ನಂಗಿ, ನೆಲ್ಲಿಗಟ್ಟಿ, ಹಲಸೂರು, ಕುಣಿಮೆಳ್ಳಿಹಳ್ಳಿ, ಮೆಳ್ಳಿಗಟ್ಟಿ,

ಕಲ್ಲಮಡವು, ಬರದೂರು, ಚಿಕ್ಕಬೂದಿಹಾಳ, ಮಾಹೂರು, ತೆವರ ಮೆಳ್ಳಳ್ಳಿ, ಫಕೀರನಂದೀಹಳ್ಳಿ, ಸವೂರು, ನಂದಿಹಳ್ಳಿ, ಮಣ್ಣೂರು, ತೆಗ್ಗಿಹಳ್ಳಿ, ನೀರಲಗಿ ಎಂ ಕಾರಡಗಿ, ಗುಂಡೂರು, ಮಂತ್ರೋಡಿ, ಜೇಕಿನಕಟ್ಟೆ, ಕಾರಡಗಿ, ಮಾದಾಪುರ, ಗೋನಾಳ, ಹೂವಿನಶಿಗ್ಲಿ, ಹೊನ್ನೀಕೊಪ್ಪ, ವಡ್ಡಿನಕೊಪ್ಪ, ಬಸವನಕೊಪ್ಪ ಮತ್ತು ನಾಯಿಕೆರೂರು) ಮತ್ತು ಹಾವೇರಿ ತಾಲೂಕಿನಿಂದ 26 ಗ್ರಾಮಗಳನ್ನು (ಬೇವಿನಹಳ್ಳಿ, ತಳ್ಳಿಹಳ್ಳಿ, ಹೊಸಹಳ್ಳಿ ಎಂ. ಕಾರಡಗಿ, ಹತ್ತಿಮತ್ತೂರು, ಕಡಕೋಳ, ಹೆಸರೂರು, ಶಿದ್ದಾಪುರ, ಕಲಿವಾಳ, ಭೈರಾಪುರ, ಇಚ್ಚಂಗಿ, ಕೃಷ್ಣಾಪುರ, ಈಚಲ ಯಲ್ಲಾಪುರ, ಚಿಕ್ಕಮರಳಿಹಳ್ಳಿ, ಹಿರೇಮರಳಿಹಳ್ಳಿ, ಕಮಾಲಬಂಗಡಿ, ತಿಮ್ಮಾಪುರ, ಡೊಂಬರ ಮತ್ತೂರು, ಹಿರೇಮಗದೂರು, ನೀರಲಗಿ ಎಂ ಕಾರಡಗಿ, ಕಳ್‌ಕೋಟೆ, ಅರಳಿಹಳ್ಳಿ, ಚಿಕ್ಕಮುಗದೂರು, ಮಂಟಗಣಿ, ಕಳಸೂರು, ಜಲ್ಲಾಪುರ, ಕಳಲಕೊಂಡ ಮತ್ತು ಶಿರಬಡಗಿ) ಹೊಸ ತಾಲೂಕಿಗೆ ಸೇರಿಸಲಾಯಿತು.

1951 ರ ಜನಗಣತಿಯ ಮೇರೆಗೆ ಪಟ್ಟಣಗಳಾಗಿದ್ದ ಜಮಖಂಡಿ ಸಂಸ್ಥಾನಕ್ಕೆ ಸೇರಿದ್ದ ಕಮಡೊಳ್ಳಿ, ಕುಂದಗೋಳ ಹಾಗೂ ಸಂಶಿ ಮತ್ತು 1911 ಜನಗಣತಿಯಂತೆ ಪಟ್ಟಣವಾಗಿದ್ದ ಯಲವಾಳಗಳು ಕುಂದಗೋಳ ತಾಲೂಕಿನಲ್ಲಿವೆ. 1951 ರವರೆಗೆ ಪಟ್ಟಣವಾಗಿದ್ದ ಕಿರೇ ಮಿರ್ಜಿಯಲ್ಲಿದ್ದ ಗುಡಗೇರಿಯು ಸಹ ಕುಂದಗೋಳ ತಾಲೂಕಿಗೆ ಸೇರಿದೆ. ಹಿರೇ ಮಿರ್ಜಿ ಸಂಸ್ಥಾನಕ್ಕೆ ಸೇರಿದ್ದ 1951 ರವರೆಗೆ ಪಟ್ಟಣವಾಗಿದ್ದ ಶಿಗ್ಲಿ ಮತ್ತು ಈಗಲೂ ಪಟ್ಟಣವಾಗಿರುವ ಲಕ್ಷ್ಮೇಶ್ವರ ಮತ್ತು ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ಶಿರಹಟ್ಟಿ ಪಟ್ಟಣಗಳು ಶಿರಹಟ್ಟಿ ತಾಲೂಕಿನಲ್ಲಿವೆ.

## ಸ್ವಾಭಾವಿಕ ಲಕ್ಷಣಗಳು

ಈ ಜಿಲ್ಲೆಯು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಇದನ್ನು ಸ್ಥೂಲವಾಗಿ ಪಶ್ಚಿಮದ ಮಲೆನಾಡು ಮತ್ತು ಪೂರ್ವದ ಬಯಲುನಾಡು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಇವೆರಡರ ನಡುವೆ ಇರುವ ಅಗಲ ಕಿರಿದಾದ ಪ್ರದೇಶವೇ ಗಡಿನಾಡು.

**ಮಲೆನಾಡು:** ಮಲೆನಾಡು ಅತ್ಯಂತ ವಿಚ್ಛಿನ್ನವಾದ ಪಶ್ಚಿಮ ಘಟ್ಟಗಳ ಪ್ರದೇಶ. ಈ ಪ್ರದೇಶವು ಜಿಲ್ಲೆಯ ವಿಸ್ತೀರ್ಣದ ಸುಮಾರು ಮೂರನೇ ಒಂದರಷ್ಟು ಭಾಗವನ್ನು ಒಳಗೊಂಡಿದೆ. ಮಲೆನಾಡು ಅಥವಾ ಸಹ್ಯಾದ್ರಿ ಪ್ರದೇಶವು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಸುಮಾರು 25 ರಿಂದ 30 ಕಿ.ಮೀ. ಅಗಲವಾಗಿದ್ದು ಧಾರವಾಡ, ಕಲಘಟಗಿ, ಶಿಗ್ಗಾಂವಿ, ಹಾನಗಲ್, ಹಿರೇಕೆರೂರು ಮತ್ತು ರಾಣೆಬೆನ್ನೂರು ತಾಲೂಕಿನ ಪ್ರದೇಶಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿರುವ ಗುಡ್ಡಗಳಲ್ಲಿ ಅಳಣಾವರದ ಪೂರ್ವಕ್ಕಿರುವ ತೇಗೂರು ಗುಡ್ಡ, ದಕ್ಷಿಣದಲ್ಲಿರುವ ಕಡೂರು ಗುಡ್ಡಗಳು, ಧಾರವಾಡ ಮತ್ತು ಕಲಘಟಗಿಗಳ ನಡುವೆ ಇರುವ ಬೂದನಗುಡ್ಡ, ಅದರ ಪಶ್ಚಿಮದ ಗಣೇಗುಡ್ಡ ಮುಖ್ಯವಾದವು. ಬೂದನಗುಡ್ಡ ಸುಮಾರು 13 ಕಿ.ಮೀ. ಉದ್ದ ಮತ್ತು 1.6 ಕಿ.ಮೀ. ಅಗಲ ಇದೆ. ಇದು ದಕ್ಷಿಣೋತ್ತರವಾಗಿ ಹಬ್ಬಿದೆ. ಇದು ಸುತ್ತಲಿನ ಪ್ರದೇಶಕ್ಕಿಂತ ಸುಮಾರು 152 ಮೀ. ಎತ್ತರವಾಗಿದೆ. ಇಲ್ಲಿ ಅನುಕ್ರಮವಾಗಿ ಸಮುದ್ರಮಟ್ಟದಿಂದ 745 ಮೀ. ಮತ್ತು 719 ಮೀ. ಎತ್ತರದ ಎರಡು ಶಿಖರಗಳುಂಟು. ಧುಂಡಸಿ ಮತ್ತು ಹಾನಗಲ್ಲು ಗುಡ್ಡಗಳು ಚಿಕ್ಕವು. ಆಕಾರದಲ್ಲಿ ಅವುಗಳು ದುಂಡಗಿವೆ. ದಕ್ಷಿಣದಲ್ಲಿ ಕಡೂರ ಗುಡ್ಡವಲ್ಲದೆ ಮಾಸೂರು ಮತ್ತು ಮಾರವಳ್ಳಿ ಗುಡ್ಡಗಳೂ ಇವೆ. ಇವು ಕಡಿದಾಗಿವೆ; ಪೂರ್ವ ಪಶ್ಚಿಮವಾಗಿ ಹಬ್ಬಿವೆ. ಇವುಗಳ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ 732 ಮೀ. ಅತ್ಯುನ್ನತ ಶಿಖರ 825 ಮೀ. ಎತ್ತರವಾಗಿದೆ.

**ಗಡಿನಾಡು:** ಮಲೆನಾಡಿಗೂ (ಸಹ್ಯಾದ್ರಿ) ಬಯಲುನಾಡಿಗೂ ಮಧ್ಯೆ ಇರುವ ಗಡಿನಾಡಿನ (ತೋಟ) ಅಗಲ ಸುಮಾರು 32 ಕಿ.ಮೀ. ಇದರ ಪಶ್ಚಿಮ ಮೇರೆಗಳು ತೇಗೂರು, ತಡಸ, ಶಿಗ್ಗಾಂವಿ ಮತ್ತು ಕೋಡ; ಪೂರ್ವ ಮೇರೆ ಧಾರವಾಡ, ಹುಬ್ಬಳ್ಳಿ, ಕರಜಗಿ ಮತ್ತು ರಾಣೆಬೆನ್ನೂರು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಇದರ ಮಧ್ಯದಲ್ಲಿ ಹಾಯ್ದಿದೆ. ಈ ಪ್ರದೇಶದಲ್ಲಿ ರಾಣೆಬೆನ್ನೂರಿನ ಹತ್ತಿರ ಐರಣಿಗುಡ್ಡವೂ, ಬ್ಯಾಡಗಿಯ ಪೂರ್ವಕ್ಕೆ ದೇವರಗುಡ್ಡವೂ ಇವೆ. ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ, ಸವಣೂರು, ಶಿಗ್ಗಾಂವಿ, ಹಾವೇರಿ, ಬ್ಯಾಡಗಿ, ಹಿರೇಕೆರೂರು ಮತ್ತು ರಾಣೆಬೆನ್ನೂರು ತಾಲೂಕುಗಳ ಬಹುಭಾಗಗಳು ಈ ಪ್ರದೇಶದಲ್ಲಿ ಸಮಾವೇಶವಾಗುತ್ತವೆ.

**ಬೆಳವಲನಾಡು :** ಗಡಿನಾಡಿನ ಪೂರ್ವಕ್ಕಿರುವ ಬಯಲುನಾಡು ಅಥವಾ ಬೆಳವಲನಾಡು ತಗ್ಗುದಿನ್ನೆಗಳಿಂದ ಕೂಡಿದ ಬಯಲು ಪ್ರದೇಶ. ಇಲ್ಲಿ ಗಜೇಂದ್ರಗಡ ಗುಡ್ಡ, ನರಗುಂದ ಗುಡ್ಡ, ನವಲಗುಂದ ಗುಡ್ಡ ಮತ್ತು ಕಪ್ಪತಗುಡ್ಡಗಳು ಮುಖ್ಯವಾದವು. ಕಪ್ಪತಗುಡ್ಡ ಗದಗದ ಆಗ್ನೇಯದಲ್ಲಿ 48 ಕಿ.ಮೀ. ಉದ್ದವಾಗಿ ಹಬ್ಬಿದೆ. ಅದು ಎರಡೂ ತುದಿಗಳಲ್ಲಿ ಸುಮಾರು ಆರು ಕಿ.ಮೀ. ಮತ್ತು ಮಧ್ಯದಲ್ಲಿ ಸುಮಾರು 16 ಕಿ.ಮೀ. ಅಗಲವಾಗಿದೆ. ಅದರಲ್ಲಿ ಅನೇಕ ಅಡ್ಡಶ್ರೇಣಿಗಳೂ ಸಮಾಂತರ ಕಣಿವೆಗಳೂ ಇವೆ. ಕಪ್ಪತಗುಡ್ಡ ಸುತ್ತಲಿನ ಪ್ರದೇಶಕ್ಕಿಂತ ಸರಾಸರಿಯಾಗಿ 122 ಮೀ. ಎತ್ತರವಾಗಿದೆ. ಅದರಲ್ಲಿ ಅತ್ಯುನ್ನತ ಶಿಖರ ಸಮುದ್ರ ಮಟ್ಟದಿಂದ 937 ಮೀ. ಎತ್ತರವಾಗಿದೆ. ಈ ಗುಡ್ಡ ಒಂದೇ ಶ್ರೇಣಿಯಾಗಿ ಆರಂಭವಾಗಿ, ಮಧ್ಯದಲ್ಲಿ ಡಂಬಳದ ಹತ್ತಿರ 3-4 ಸಮಾಂತರ ಶ್ರೇಣಿಗಳಾಗಿ ಕವಲೊಡೆದು ಮುಂದೆ ತುಂಗಭದ್ರಾ ನದಿಯ ಕಡೆಗೆ ಮತ್ತೆ ಒಂದೇ ಶ್ರೇಣಿಯಾಗಿ ಹಬ್ಬಿದೆ. ಬೆಳವಲನಾಡನ್ನು ಎರೆನಾಡು ಪ್ರದೇಶವೆಂದು ಕರೆಯುತ್ತಾರೆ. ಧಾರವಾಡ, ಹಾವೇರಿ, ಹುಬ್ಬಳ್ಳಿ, ರಾಣೆಬೆನ್ನೂರು ತಾಲೂಕುಗಳ ಪೂರ್ವ ಭಾಗಗಳು, ಕುಂದಗೋಳ, ನವಲಗುಂದ, ನರಗುಂದ, ರೋಣ, ಗದಗ, ಮುಂಡರಗಿ, ಶಿರಹಟ್ಟಿ ತಾಲೂಕುಗಳು ಬಯಲು ಸೀಮೆಯಲ್ಲಿ ಸಮಾವೇಶವಾಗುತ್ತವೆ.

**ಬೆಟ್ಟಗಳು :** ಜಿಲ್ಲೆಯಲ್ಲಿ ಐದು ಪ್ರಮುಖ ಬೆಟ್ಟಗಳ ಶ್ರೇಣಿಗಳಿವೆ. ಪಶ್ಚಿಮದಲ್ಲಿರುವ ಬೂದನಗುಡ್ಡ ಶ್ರೇಣಿ, ಈಶಾನ್ಯದಲ್ಲಿರುವ ಐರಣಿ ಶ್ರೇಣಿ, ಪೂರ್ವದಲ್ಲಿರುವ ಕಪ್ಪತಗುಡ್ಡ ಶ್ರೇಣಿ ಮತ್ತು ಉಳಿದ ಎರಡು ಹೆಸರಿಸಿಲ್ಲದ ಶ್ರೇಣಿಗಳು. ಇವುಗಳಲ್ಲದೆ ಜಿಲ್ಲೆಯಲ್ಲಿ ಅಲ್ಲಲ್ಲಿ ಹರಡಿದಂತೆ ಇರುವ ಗುಡ್ಡಗಳು ಅನೇಕ. ಉತ್ತರ ಭಾಗದಲ್ಲಿ ನವಲಗುಂದದ ಮರಳು ಕಲ್ಲಿನ ಗುಡ್ಡ, ನರಗುಂದ ಮತ್ತು ಚಿಕ್ಕನರಗುಂದ ಗುಡ್ಡಗಳು ಪ್ರಮುಖವಾದವು.

## ಭೂ ರಚನೆ

ಜಿಲ್ಲೆಯ ಈಶಾನ್ಯ ಭಾಗದಲ್ಲಿ ಕಲಾದಗಿ ಶಿಲಾ ಶ್ರೇಣಿಗೆ ಸೇರಿದ ಮರಳುಗಲ್ಲು ಹರಡಿದೆ. ಅದು ನರಗುಂದ ಮತ್ತು ನವಲಗುಂದ ಗುಡ್ಡಗಳ ನೆತ್ತಿಯ ಮೇಲೂ ಕಂಡು ಬರುತ್ತದೆ. ಲ್ಯಾಟರೈಟ್ (ಜಂಬಿಟ್ಟಿಗೆ) ಶಿಲೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಹರಡಿದೆ. ಆದರೆ ಅದು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ವಿಶೇಷ. ಧಾರವಾಡ ಶಿಲಾ ಶ್ರೇಣಿಗೆ ಸೇರಿದ ಶಿಲೆಗಳು ಮುಖ್ಯವಾಗಿ ಜಿಲ್ಲೆಯ ಮಧ್ಯ, ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲಿವೆ. ಡೋಣಿ ಗ್ರಾಮದ ಹತ್ತಿರ ವಿಸ್ತಾರವಾದ ಸುಣ್ಣಕಲ್ಲಿನ ಪ್ರದೇಶವಿದೆ. ಗ್ರಾನೈಟ್ ಮತ್ತು ನೈಸ್ ಶಿಲೆಗಳು ಸಾಮಾನ್ಯವಾಗಿ ಬಯಲು ಪ್ರದೇಶಗಳಲ್ಲಿ ಹರಡಿವೆ.

## ಧಾರವಾಡ ಶಿಲಾವರ್ಗ

ಧಾರವಾಡದ ಬಳಿ ಇರುವ ಸ್ಫಟಿಕಾತ್ಮಕ ಪದರು ಶಿಲೆಗಳ (ಕ್ರಿಸ್ಟಲೈನ್ ಶಿಸ್ಟ್) ಭೂ ವೈಜ್ಞಾನಿಕ ನಾಮಧೇಯ 'ಧಾರ್ವಾರ್ ಸಿಸ್ಟಮ್'. ರಾಬರ್ಟ್ ಬ್ರೂಸ್ ಫೂಟ್ ಎಂಬಾತ ನೀಡಿದ (1886) ಹೆಸರಿದು. ಇದು ಶಿಲಾರಸ, ಶಿಲಾದೂಳು ಮುಂತಾದ ಜ್ವಾಲಾಮುಖಿಜ ವಸ್ತು ವಿಶೇಷಗಳಿಂದ ಮಿಶ್ರಿತವಾದ ಪ್ರಸ್ತರೀ (ಪದರು) ಶಿಲಾಸಮುದಾಯ ಎಂದು ಹೆಸರಿಸಲ್ಪಟ್ಟಿದೆ. ಈ ಪದರು ಶಿಲಾವರ್ಗ ಗ್ರಾನಿಟಾಯ್ಡ್ ನೈಸ್‌ಗಳು ಭೂ ಸಮರ್ದದಿಂದ ಮಡಚಿ ಛಿದ್ರಗೊಂಡು ಬಯಲಿಗೆ ತೆರೆದುಕೊಂಡ ಬಳಿಕ ಅವುಗಳ ಮೇಲೆ ಸ್ತರಭಂಗವಾಗಿ ಉತ್ಪನ್ನವಾದ ಜಲಜ ಶಿಲೆಗಳ ರೂಪಾಂತರಗಳೆಂದೂ ಭಾವಿಸಲಾಗಿತ್ತು. ನಂತರ ಈ ವಿಚಾರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆದು ಇಲ್ಲಿನ ಪೆಂಟೆಕಲ್ಲು (ಕಾಂಗ್ಲೊಮೆರೇಟ್), ಸಿಕತಶಿಲೆ (ಮರಳುಗಲ್ಲು, ಸ್ಯಾಂಡ್‌ಸ್ಟೋನ್) ಗೋಡುಕಲ್ಲು, ಸುಣ್ಣಕಲ್ಲು ಮತ್ತು ಕೆಲವು ವಿಧವಾದ ಪದರು ಶಿಲೆಗಳು ನಿರ್ದಿಷ್ಟವಾಗಿ ಜಲಜ ಶಿಲೆಗಳ ರೂಪಾಂತರಗಳೆಂದು ನಿರ್ಧಾರಿತವಾಯಿತು. ಈ ಶಿಲಾವರ್ಗದಲ್ಲಿ ಮುಖ್ಯವಾಗಿ ನಾಲ್ಕು ಬಗೆಯ ಶಿಲಾ ಪ್ರಕಾರಗಳಿವೆ. 1. ಜ್ವಾಲಾಮುಖಿಜ ಶಿಲೆಗಳು 2. ಸ್ಫಟಿಕಾಕೃತಿಯ ಪದರು ಶಿಲೆಗಳು, 3. ರೂಪಗೆಟ್ಟ ಪ್ರಸ್ತರೀ ಶಿಲೆಗಳು ಹಾಗೂ 4. ಅಂತಸ್ಸರಿತ ಅಥವಾ ಒಳನುಗ್ಗಿದ ಅಗ್ನಿ ಶಿಲೆಗಳು. ಧಾರವಾಡ ಪದರ ಶಿಲೆಗಳು ಬೇರೆ ಬೇರೆ ವಿಸ್ತೀರ್ಣದ ಉದ್ದಪಟ್ಟೆಗಳಲ್ಲಿ ಉತ್ತರ ದಕ್ಷಿಣವಾಗಿ ಹಬ್ಬಿವೆ. ಇವುಗಳ ಸುತ್ತಲೂ ಗ್ರಾನೈಟ್ ಮತ್ತು ನೈಸ್ ಶಿಲೆಗಳೂ ಹರಡಿಕೊಂಡಿವೆ.

ಪಶ್ಚಿಮ ಪದರಶಿಲಾ ಸ್ತೋಮದಲ್ಲಿ ಒಂದು ತಂಡವು ಧಾರವಾಡಕ್ಕೆ ಸ್ವಲ್ಪ ಉತ್ತರದಲ್ಲಿ ಕಾಣಿಸಿಕೊಂಡು ದಕ್ಷಿಣಾಭಿಮುಖವಾಗಿ ಕಾವೇರಿ ತೀರದವರೆಗೂ ಹಬ್ಬಿದೆ. ಧಾರವಾಡ ಶಿಲಾವರ್ಗದ ರಾಣೆಬೆನ್ನೂರು ವರ್ಗ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯ

ಭಾಗಗಳಲ್ಲಿ ಚೆನ್ನಾಗಿ ಬೆಳವಣಿಗೆಯಾಗಿದ್ದು ಹೆಚ್ಚಾಗಿ ಗ್ರೇವೆಕ್ಸ್ ಮತ್ತು ಕ್ಲೋರೈಟ್ ಫೈಲ್ಲೈಟ್‌ಗಳನ್ನು ಹೊಂದಿದೆ. ಈ ಶಿಲೆಗಳ ಅಡಿಭಾಗವು ಬಹಳ ಕಡಿಮೆ ಕದಡಲ್ಪಟ್ಟಿದ್ದು, ಸಣ್ಣಪುಟ್ಟ ಸಂದುಗಳನ್ನು ಹೊಂದಿದೆ.

**ಕಲಾದಗಿ ವರ್ಗ:** ರಾಜ್ಯದ ಉತ್ತರದಲ್ಲಿ ವಿಶಾಲವಾಗಿ ಸಮತಟ್ಟಾಗಿ ಹರಡಿರುವ ಲಾವಾರಸ ಪ್ರದೇಶದ ಮತ್ತು ಧಾರವಾಡ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳ ನೈಸ್ ಪ್ರದೇಶಗಳ ನಡುವೆ ಇರುವ ಜಲಜ ಶಿಲೆಯ ವರ್ಗ. ಅರ್ಷೇಯ ನೈಸುಗಳು ಮತ್ತು ಧಾರವಾಡ ಪದರು ಶಿಲೆಗಳ ಮೇಲೆ ಹೊಂದಿಕೆಯಿಲ್ಲದೆ ಹರಡಿರುವ ಕಬ್ಬಿಣ ಮಿಶ್ರಿತ, ಪಳೆಯುಳಿಕೆಗಳಿಲ್ಲದ ಒಂದು ಗುಂಪು ಇದಾಗಿದೆ. ಜಿಲ್ಲೆಯ ನರಗುಂದ ಮತ್ತು ನವಲಗುಂದ ತಾಲೂಕುಗಳಲ್ಲಿ ಈ ವರ್ಗ ಕಂಡುಬಂದಿದ್ದು ಇದರಲ್ಲಿ ಬೆಣಚುಕಲ್ಲು, ಸುಣ್ಣಕಲ್ಲು ಮತ್ತು ಜೇಡಿಯ ಚಿಪ್ಪುಕಲ್ಲುಗಳು ಕಂಡುಬಂದಿವೆ.

**ಖನಿಜ ನಿಕ್ಷೇಪಗಳು** : ಜಿಲ್ಲೆಯ ಪೂರ್ವಭಾಗ ಪ್ರಾಚೀನ ಬೆಣಚುಕಲ್ಲು ಮತ್ತು ಪದರ ಶಿಲೆಗಳಿಂದ ಕೂಡಿದೆ. ಜಿಲ್ಲೆಯ ಮಧ್ಯಭಾಗದಲ್ಲಿ ಮೇಲೆದ್ದಿರುವ ಎರಡು ಸಮಾನಾಂತರ ಬಂಡೆಯ ದಿಂಡುಗಳಿಂದಾಗಿ ಪ್ರಸಿದ್ಧ ಧಾರವಾಡ ಪದರ ಶಿಲೆ ವ್ಯವಸ್ಥೆ ರೂಪುಗೊಂಡಿದೆ. ಇವು ಪ್ರಾರಂಭದ ಅಗ್ನಿ ಮತ್ತು ಜಲ ಶಿಲೆಗಳ ಸಂಯೋಗದಿಂದ ರೂಪಾಂತರ ಹೊಂದಿ ಪಸರಿಸಿವೆ. ಈ ಶಿಲಾಭಾಗವನ್ನು ಭೇದಿಸಿಕೊಂಡು ಕಣಶಿಲೆ (ಗ್ರಾನೈಟ್) ಮತ್ತು ನೀಸ್‌ಕಲ್ಲುಗಳು ಹರಡಿವೆ. ಈ ವ್ಯವಸ್ಥೆಯ ಭೂಗರ್ಭರಚನೆ ಬಹು ಸಂಕೀರ್ಣವಾದದ್ದು; ಧಾರವಾಡ ಪದರ ಶಿಲೆ, ಗ್ರಾನೈಟ್, ಬೆಣಚುಕಲ್ಲು, ಸುಣ್ಣಕಲ್ಲುಗಳನ್ನೊಳಗೊಂಡು ಎಲ್ಲಾ ದಿಕ್ಕುಗಳಲ್ಲಿಯೂ ಡಾಲರೈಟ್ ದಿಂಡುಗಳು ಹರಡಿವೆ. ಕಲಾದಗಿ ಶಿಲಾಶ್ರೇಣಿಗೆ ಸೇರಿದ ಮರಳುಗಲ್ಲು ಜಿಲ್ಲೆಯ ಈಶಾನ್ಯ ಭಾಗದಲ್ಲಿ ಹರಡಿದೆ.

ಮ್ಯಾಂಗನೀಸ್ ಅತಿ ಮುಖ್ಯವಾದ ಲೋಹಗಳಲ್ಲಿ ಒಂದು. ಮ್ಯಾಂಗನೀಸ್ ಅದಿರನ್ನು ಮುಖ್ಯವಾಗಿ ಕಬ್ಬಿಣ ಮತ್ತು ಉಕ್ಕುಗಳ ತಯಾರಿಕೆಯಲ್ಲಿ ಗಂಧಕ ಮತ್ತು ರಂಜಕಗಳನ್ನು ಆಮ್ಲೀಕರಿಸಿ ನಿರ್ಮಲ ಮಾಡುವುದಕ್ಕೂ ಮತ್ತು ವಿವಿಧ ದರ್ಜೆಯ ಮ್ಯಾಂಗನೀಸ್ ಉಕ್ಕನ್ನು ತಯಾರಿಸುವುದಕ್ಕೂ ಉಪಯೋಗಿಸಲಾಗುತ್ತಿದೆ. ಮ್ಯಾಂಗನೀಸ್ ಅದುರಿನ ನಿಕ್ಷೇಪಗಳೆಲ್ಲವೂ ರಾಜ್ಯದ ಮಧ್ಯ ಹಾಗೂ ಉತ್ತರ ಭಾಗದ ಧಾರವಾಡ ಪದರ ಶಿಲಾ ಹರವು ಪ್ರದೇಶದಲ್ಲಿ ಹರಡಿವೆ. ಜಿಲ್ಲೆಯಲ್ಲಿ ಶೇಕಡ 20 ರಿಂದ 38 ರವರೆಗೆ ಮ್ಯಾಂಗನೀಸ್ ಇರುವ ಕೆಳದರ್ಜೆಯ ಅದುರಿನ ಚಿಕ್ಕ ಚಿಕ್ಕ ನಿಕ್ಷೇಪಗಳಿವೆ. ಇದರ ನಿಕ್ಷೇಪ ಚಿಕ್ಕವಡವಟ್ಟಿ ಕಣಿವೆಯಲ್ಲಿ ಕಂಡುಬಂದಿದೆ. ಕಪ್ಪತಗುಡ್ಡ ಪ್ರದೇಶದಲ್ಲೂ ಹೆಮ್ಮಿಗ್ರೆಯ ದಕ್ಷಿಣ ಭಾಗದಲ್ಲೂ ನಿಕ್ಷೇಪಗಳು ಇರುವ ದಾಖಲೆಗಳಿವೆ. ಕೊರಟೂರು ಮತ್ತು ಜಿಲ್ಲಿಗೇರಿಗಳಲ್ಲಿ ಪೈರೈಟ್ಸ್ ಇದೆ.

ಕಪ್ಪತಗುಡ್ಡಗಳ ಶ್ರೇಣಿಯಲ್ಲಿ ಹೆಚ್ಚಿನ ಕಬ್ಬಿಣದ ಅದುರು ಕಂಡುಬರುತ್ತದೆ. ಕಪ್ಪತಗುಡ್ಡಗಳ ಶ್ರೇಣಿಯಲ್ಲಿ ಚಿನ್ನದ ಅದಿರು ಕಂಡು ಬಂದರೂ ಅದು ಬಹು ತೆಳುವಾಗಿದ್ದು ಆರ್ಥಿಕವಾಗಿ ಅಷ್ಟು ಲಾಭಕರವಾಗಿಲ್ಲ. ಇಲ್ಲಿನ ಹೆಮಟೈಟ್ ನಿಕ್ಷೇಪಗಳು ಪದರ ಶಿಲಾ ರೂಪದಲ್ಲಿಯೂ ಮತ್ತು ಕಬ್ಬಿಣ ಬೆಣಚು ಮಿಶ್ರಿತ ಪದರ ಶಿಲಾ ರೂಪದಲ್ಲಿಯು ಸಣ್ಣ ಸಣ್ಣ ನಿಕ್ಷೇಪಗಳಾಗಿವೆ. ಆದರೆ ಆ ನಿಕ್ಷೇಪಗಳು ಆರ್ಥಿಕ ದೃಷ್ಟಿಯಿಂದ ಲಾಭಕರವಾಗಿ ಕಂಡುಬರುವುದಿಲ್ಲ. ಕಪ್ಪತಗುಡ್ಡ ಪ್ರದೇಶದಿಂದ ಹರಿಯುವ ಡೋಣಿ ಹೊಳೆಯಲ್ಲಿ ತಾಮ್ರದ ಅದುರಿನ ಚೂರುಗಳು ಕಂಡುಬಂದಿವೆ. ಆದರೆ ತಾಮ್ರದ ಅದುರು ಹೊರತೆಗೆದು ಲೋಹ ಬೇರ್ಪಡಿಸಿ ಲಾಭದಾಯಕವಾಗಿ ಪಡೆಯುವಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ.

ಗ್ರಾನೈಟ್ ಮತ್ತು ನೈಸ್ ಶಿಲೆಗಳನ್ನು ಸ್ಥಳೀಯ ಉಪಯೋಗಕ್ಕೆ ಹಾಸುಗಲ್ಲು, ಚಪ್ಪಡಿ ಕಲ್ಲುಗಳು, ನಿರ್ದಿಷ್ಟ ಪ್ರಮಾಣದ ಪಾಯ(ಬುನಾದಿ)ಕಲ್ಲುಗಳು, ಜಲ್ಲಿ, ಕಂಬಗಲ್ಲು ಮುಂತಾದ ರೂಪಗಳಲ್ಲಿ ಕಲ್ಲು ಗಣಿಗಳಿಂದ ಎಬ್ಬಿಸಿ ತೆಗೆದು ತಯಾರಿಸಲಾಗುತ್ತಿದೆ. ಈ ಶಿಲಾವರ್ಗದ ಬಂಡೆಗಳಲ್ಲಿ ದೂರದವರೆಗೆ ಹಬ್ಬಿರುವ ವ್ಯವಸ್ಥಿತ ಸ್ವಾಭಾವಿಕ ಬಿರುಕುಗಳ ರಚನಾಕ್ರಮಗಳಿಂದ ಗ್ರಾನೈಟ್ ಮತ್ತು ನೈಸ್ ಶಿಲೆಗಳನ್ನು ಬೇಕಾದ ರೂಪ ಪ್ರಮಾಣಗಳಲ್ಲಿ ಬೆಂಕಿಯಿಟ್ಟು ಸುಲಭವಾಗಿ ಸೀಳಿ ತೆಗೆಯಬಹುದು. ಜಿಲ್ಲೆಯ ಮುಂಡರಗಿ, ಬರದೂರು, ಮಾಗಡಿ ಮುಂತಾದ ಸ್ಥಳಗಳಲ್ಲಿ ಕಣಶಿಲೆಯನ್ನು (ಗ್ರಾನೈಟ್) ಕಲ್ಲುಗಣಿಯಿಟ್ಟು ಹೊರತೆಗೆಯಲಾಗುತ್ತಿದೆ. ಕಟ್ಟಡ ಶಿಲೆಗಳಾಗಿ ಅಲ್ಲದೆ ಉರುಳುಗುಂಡು, ಗಾರೆ ಅರೆಯುವ ಕಲ್ಲು ಒರಳು ಮತ್ತು ರುಬ್ಬುವಗುಂಡು ಮುಂತಾದವುಗಳ ತಯಾರಿಕೆಯಲ್ಲೂ, ಭರ್ತಿ ಹಾಕುವ ಜಲ್ಲಿಕಲ್ಲುಗಳಾಗಿ ರಸ್ತೆ ರಚನೆಯಲ್ಲೂ ಉಪಯೋಗವಾಗುತ್ತವೆ. ಮೇಲ್ಛಾವಣಿ ಮತ್ತು ಹಾಸುಗಲ್ಲುಗಳಿಗೆ ಉಪಯೋಗವಾಗುವ ಚಪ್ಪಡಿ ರೂಪದಲ್ಲಿ ತೆಗೆಯಬಹುದಾದ ವಿವಿಧ ವಿಧದ ಪದರ ಶಿಲೆಗಳು ಜಿಲ್ಲೆಯ ಬಿಂಕದಕಟ್ಟೆ, ಮಲ್ಲಸಂದ್ರ, ಮಲ್ಲೋಟಿ, ಬೆಡಗಟ್ಟ, ಮಂದವಾಡಗಳ ಸಮೀಪ ಸಿಗುತ್ತವೆ.

ಜಿಲ್ಲೆಯ ಡೋಣಿ ಗ್ರಾಮದ ಹತ್ತಿರ ಬೂದು ಮತ್ತು ಹಸರು ಛಾಯೆಯ ಬೂದು ಬಣ್ಣಗಳ ಸುಣ್ಣ ಶಿಲೆಗಳು ಸುಮಾರು ಒಂದೂವರೆ ಕಿ.ಮೀ. ಉದ್ದ ಮತ್ತು 15 ಮೀ. ಅಗಲದ ಪ್ರದೇಶದಲ್ಲಿ ಹರಡಿವೆ. ಇದೇ ರೀತಿಯ ಸ್ತರಗಳು ದಿಂಡೂರಿನ ಹತ್ತಿರವೂ ಇವೆ. ಈ ನಿಕ್ಷೇಪಗಳಲ್ಲೆಲ್ಲ ಒಟ್ಟು ಸುಮಾರು 2.5 ಲಕ್ಷ ಟನ್‌ಗಳಷ್ಟು ಸುಣ್ಣ ಶಿಲೆ ಸಿಗುವುದೆಂದು ಅಂದಾಜು ಮಾಡಲಾಗಿದೆ. ಮಾಸೂರಿನ ಸಮೀಪ ಕೆಲವು ಹಳದಿ ಕಾವಿಮಣ್ಣಿನ ನಿಕ್ಷೇಪಗಳಿದ್ದರೂ ಅವು ಆರ್ಥಿಕ ದೃಷ್ಟಿಯಿಂದ ಉಪಯೋಗವಾದವುಗಳಲ್ಲ.

**ಅಂತರ್ಜಲ ನಿಕ್ಷೇಪಗಳು**

ಅಂತರ್ಜಲವು ಭೂಮಿಯಲ್ಲಿ ಉತ್ಪತ್ತಿಯಾಗುವಂತಹುದಲ್ಲ. ಇದು ಮಳೆ ಬಂದಾಗ ಭೂಮಿಯ ಮೇಲೆ ಬಿದ್ದ ನೀರಿನಲ್ಲಿ ಶೇಕಡಾ 4ರಿಂದ 20ಭಾಗದವರೆಗೆ ಮಣ್ಣಿನ ಪದರದಿಂದ ಒಳಕ್ಕೆ ಜಿನುಗಿ ಶಿಲಾಸ್ತರಗಳ ಮಧ್ಯದಲ್ಲಿರುವ ಬಿರುಕು, ಸೀಳು, ಸಂದುಗಳು ಹಾಗೂ ರಂಧ್ರಗಳಲ್ಲಿ ಶೇಖರಗೊಂಡಿದ್ದು ಅವುಗಳೆಲ್ಲಾ ತುಂಬಿದ ಮೇಲೆ ಹೊರಕ್ಕೆ ಹರಿದು ಬರುವ ನೀರನ್ನು ಪಾತಾಳಗಂಗೆ, ಅಂತರಗಂಗೆ ಅಥವಾ ಅಂತರ್ಜಲ ಎನ್ನುತ್ತಾರೆ. ಶಿಥಿಲೀಕರಣವಾಗಿರುವ ಅಗ್ನಿಶಿಲೆ (ಇಗ್ನೇಯಸ್) ಮತ್ತು ರೂಪಾಂತರ (ಮೆಟಮಾರ್ಫಿಕ್) ಶಿಲೆ ಮತ್ತು ಶಿಥಿಲೀಕರಣವಾಗದಿರುವ ಶಿಲೆಗಳ ಬಿರುಕುಗಳ ಮತ್ತು ಸಂದುಗಳ ಪ್ರದೇಶದಲ್ಲಿ ಅಂತರ್ಜಲವು ದೊರೆಯುತ್ತದೆ. ಹೆಚ್ಚಿನ ಪ್ರಮಾಣದ ಅಂತರ್ಜಲ ಸಂಗ್ರಹಣೆಗೆ ಸಹಾಯಕವಾಗಿರುವ ನದೀ ಮುಖಜ ಭೂಮಿಯ ಮೆಕ್ಕಲು ಮಣ್ಣು ಜಿಲ್ಲೆಯಲ್ಲಿ ಬಹಳ ಕಡಿಮೆ ಇದೆ. ಬಸಾಲ್ಟ್ ಪ್ರವಾಹ (ಡೆಕ್ಕನ್ ಟ್ರ್ಯಾಪ್) ಮುಚ್ಚಿರುವ ನೆಲೆಗಳಲ್ಲಿ, ಶಿಥಿಲೀಕರಣದ ಪ್ರದೇಶದ ಮೇಲ್ಭಾಗದಲ್ಲಿ ಮತ್ತು ಹರಿವುಗಳ ನಡುವಣ ಪ್ರವಾಹ ಸಾಧ್ಯ ನೆಲೆಗಳಲ್ಲಿ ಅಂತರ್ಜಲ ಸಿಗುತ್ತದೆ. ಭೂಮಿಯಲ್ಲಿ ಅಂತರ್ಜಲವು ಆಯಾ ಪ್ರದೇಶದ ಶಿಲಾಸ್ತೋಮಗಳ ರಚನೆ, ಶಿಥಿಲೀಕರಣ ಮತ್ತು ಛಿದ್ರತೆಗಳ ಪ್ರಮಾಣವನ್ನು ಅನುಸರಿಸಿ ಮೆದು ಶಿಲೆಗಳಿರುವ ಪ್ರದೇಶಗಳಲ್ಲಿ ಯಥೇಚ್ಛವಾಗಿಯೂ ಗಡಸು ಶಿಲೆಗಳಿರುವಲ್ಲಿ ಅಲ್ಪ ಪ್ರಮಾಣದಲ್ಲೂ ಶೇಖರಗೊಂಡಿರುತ್ತದೆ. ಭೂಮಿಯಲ್ಲಿ ಅಂತರ್ಜಲ ಇಂತಹ ಕಡೆಯಲ್ಲಿ ಶೇಖರಗೊಂಡಿರಬಹುದೆಂಬುದನ್ನು ಭೂ ವೈಜ್ಞಾನಿಕ ಮತ್ತು ಭೂ ಭೌತ ವಿಜ್ಞಾನ ಸರ್ವೇಕ್ಷಣಗಳ ಸಹಾಯದಿಂದ ಪತ್ತೆ ಹಚ್ಚಲಾಗುತ್ತದೆ. ಅಂತರ್ಜಲ ಶೋಧನೆಗೆ ಪ್ರಾಚೀನ ಸಂಪ್ರದಾಯ ಪದ್ಧತಿಗಳನ್ನೂ ಅನುಸರಿಸಲಾಗುತ್ತಿದೆ. ಉದಾಹರಣೆಗೆ ಬೇವಿನಮರ, ಹತ್ತಿಮರ, ಕಣಗಿಲಮರ ಮತ್ತು ಗೆದ್ದಲು(ಹುತ್ತ)ಗಳ ಸಹಾಯದಿಂದ ಸಮೃದ್ಧ ಅಂತರ್ಜಲವಿರುವ ಜಾಗಗಳನ್ನು ಶೋಧಿಸುವಲ್ಲಿ ಯಶಸ್ವಿಯಾಗಿರುವುದಕ್ಕೆ ನಿದರ್ಶನಗಳಿವೆ.

ಧಾರವಾಡ ಜಿಲ್ಲೆಯು ಪ್ರತಿ ವರ್ಷ ಮತ್ತೆ ಮರಳಿ ಪಡೆಯಬಹುದಾದ ಸುಮಾರು 1,24,822 ಹೆ. ಮೀ. ಅಂತರ್ಜಲ ಸಂಪನ್ಮೂಲವನ್ನು ಹೊಂದಿದ್ದು 1.1.1991 ರವರೆಗೆ ಶೇ 20 ರಷ್ಟು ಭಾಗವನ್ನು (24,395 ಹೆ.ಮೀ.) ಮಾತ್ರ ಬಳಸಿಕೊಳ್ಳಲು ಸಾಧ್ಯವಾಗಿದ್ದು, ಇನ್ನೂ ಶೇ 80 ರಷ್ಟು ಅಂತರ್ಜಲ ಸಂಪನ್ಮೂಲವನ್ನು ಬಳಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬಹುತೇಕ ಬಾವಿ ಕಾಮಗಾರಿಗಳನ್ನು ಸ್ವಂತ ಬಂಡವಾಳದಿಂದ ರೈತರೇ ನಿರ್ಮಿಸಿಕೊಳ್ಳುತ್ತಿದ್ದು, ಅವುಗಳಿಂದ ನೀರನ್ನು ಮೇಲೆತ್ತಲು ಸಾಂಪ್ರದಾಯಿಕ ವಿಧಾನಗಳಾದ ಏತ, ಕಪಿಲೆ (ಮಟ್ಟಿ), ಪರ್ಷಿಯನ್ ವೀಲ್ ಮುಂತಾದ ನೀರೆತ್ತುವ ಸಾಧನಗಳನ್ನು ಬಳಸುತ್ತಿದ್ದರು. ಸ್ವಾತಂತ್ರ್ಯಾನಂತರ ಬಾವಿ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು ಜಿಲ್ಲೆಯಲ್ಲಿ ಬಾವಿಗಳ ನಿರ್ಮಾಣ ಹಾಗೂ ವಿದ್ಯುತ್ ಪಂಪುಸೆಟ್ಟುಗಳನ್ನು ಬಳಸಲಿಚ್ಛಿಸುವ ರೈತರಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವತಿಯಿಂದ ಉಚಿತ ತಾಂತ್ರಿಕ ಮಾರ್ಗದರ್ಶನವನ್ನು ದೊರಕಿಸಿಕೊಡಲಾಗುತ್ತಿದೆ. ಇದಕ್ಕಾಗಿ ಸಹಕಾರಿ ಮತ್ತು ಬ್ಯಾಂಕಿಂಗ್ ಕ್ಷೇತ್ರದಿಂದ ಸಾಲ ಒದಗಿಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸಾಂಪ್ರದಾಯಿಕ ನೀರೆತ್ತುವ ಸಾಧನಗಳ ಮತ್ತು ಡೀಸಲ್ ಪಂಪುಸೆಟ್ಟುಗಳ ಪ್ರಾಮುಖ್ಯತೆ ಗಣನೀಯವಾಗಿ ಕುಂದಿದ್ದು, ವಿದ್ಯುಚ್ಛಕ್ತಿ ಚಾಲಿತ ನೀರೆತ್ತುವ ಪಂಪುಗಳ ಪ್ರಾಮುಖ್ಯತೆ ಹೆಚ್ಚಾಗುತ್ತಿದೆ. ರಾಜ್ಯದ ಭೂವಿಜ್ಞಾನ ಇಲಾಖೆಯು ಅಂತರ್ಜಲ ಶೋಧನೆಗೆ ಸಾಕಷ್ಟು ಸಮೀಕ್ಷೆಗಳನ್ನು ಕೈಗೊಂಡು ಈ ಸಂಪನ್ಮೂಲದ ಲಭ್ಯತೆಯ ಬಗ್ಗೆ ವರದಿಗಳನ್ನು ಪ್ರಕಟಿಸುತ್ತಿದೆ. ಪ್ರಸ್ತುತ ಬಳಕೆಯ ಆಧಾರದ ಮೇಲೆ ತಾಲೂಕುಗಳನ್ನು ಬಿಳಿ ಪ್ರದೇಶ (ಶೇ 65 ಕ್ಕೂ ಕಡಿಮೆ ಪ್ರಮಾಣದಲ್ಲಿರುವ ಬಳಕೆಯ ಮಟ್ಟ), ಬೂದು ಪ್ರದೇಶ (ಶೇ 65 ರಿಂದ 85 ರ ಪರಿಮಿತಿಯೊಳಗೆ ಬಳಕೆಯಲ್ಲಿರುವ ಪ್ರದೇಶ) ಮತ್ತು ಕಪ್ಪು ಪ್ರದೇಶ (ಶೇ 85 ಕ್ಕಿಂತ ಹೆಚ್ಚಿಗೆ ಬಳಕೆಯ ಮಟ್ಟ) ವೆಂದು ವರ್ಗೀಕರಿಸಲಾಗಿದೆ. ಕೋಷ್ಟಕ 1.3 ರಲ್ಲಿ ತಾಲೂಕುವಾರು ಒಟ್ಟು ವಾರ್ಷಿಕ ಅಂತರ್ಜಲ ಉತ್ಕರ್ಷ (ಹೆ.ಮೀ), ನಿವ್ವಳ ವಾರ್ಷಿಕ ಅಂತರ್ಜಲ ಉತ್ಕರ್ಷ (ಹೆ.ಮೀ), ಬಳಕೆಯ ಮಟ್ಟ ಮತ್ತು ವರ್ಗೀಕರಣದ ವಿವರಗಳನ್ನು ಕೊಟ್ಟಿದೆ.

## ಕೋಷ್ಟಕ-1.3 ಧಾರವಾಡ ಜಿಲ್ಲೆಯ ಅಂತರ್ಜಲ ನಿಕ್ಷೇಪ ಮತ್ತು ಬಳಕೆಯ ವಿವರ.

| ಕ್ರ.ಸಂ. | ತಾಲೂಕು | ಒಟ್ಟು ವಾರ್ಷಿಕ ಅಂತರ್ಜಲ ಉತ್ಕರ್ಷ (ಹೆ.ಮೀ) | ನಿವ್ವಳ ವಾರ್ಷಿಕ ಅಂತರ್ಜಲ ಉತ್ಕರ್ಷ (ಹೆ.ಮೀ) | ನಿವ್ವಳ ವಾರ್ಷಿಕ ಬಳಕೆ 1.1.83 ರಲ್ಲಿದಂತೆ | ಬಳಕೆಯ ಮಟ್ಟ 1.1.83 ರಲ್ಲಿದ್ದಂತೆ ಶೇ. | ವಾರ್ಷಿಕ ಬೆಳವಣಿಗೆಯ ಪ್ರಮಾಣ ಶೇ. | 1.1.87 ರಲ್ಲಿನ ಬಳಕೆಯ ಪ್ರಮಾಣ (ಹೆ.ಮೀ) | ಬಳಕೆಯ ಮಟ್ಟ 1.1.87 ರಲ್ಲಿ ಶೇ. | 1.1.91 ರಲ್ಲಿನ ಬಳಕೆಯ ಪ್ರಮಾಣ (ಹೆ.ಮೀ) | ಬಳಕೆಯ ಮಟ್ಟ 1.1.91 ರಲ್ಲಿ ಶೇ. | ತಾಲೂಕಿನ ವರ್ಗೀಕರಣ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಬ್ಯಾಡಗಿ | 4,738 | 4,027 | 753 | 20 | 2 | 1,075 | 28 | 1,383 | 34 | ಬಿಳಿ |
| 2 | ಧಾರವಾಡ | 12,134 | 10,314 | 323 | 03 | 2 | 1,148 | 11 | 1,458 | 14 | ಬಿಳಿ |
| 3 | ಗದಗ | 8,322 | 7,074 | 694 | 10 | 2 | 1,260 | 18 | 1,308 | 18 | ಬಿಳಿ |
| 4 | ಹಾನಗಲ್ | 14,679 | 12,477 | 141 | 1 | 0.5 | 391 | 3 | 1,602 | 13 | ಬಿಳಿ |
| 5 | ಹಾವೇರಿ | 8,361 | 7,107 | 572 | 8 | 2 | 1,141 | 16 | 2,470 | 35 | ಬಿಳಿ |
| 6 | ಹಿರೇಕೆರೂರು | 10,131 | 8,611 | 1,093 | 13 | 2 | 1,782 | 21 | 2,449 | 29 | ಬಿಳಿ |
| 7 | ಹುಬ್ಬಳ್ಳಿ | 4,302 | 3,657 | 245 | 7 | 2 | 538 | 15 | 935 | 26 | ಬಿಳಿ |
| 8 | ಕಲಘಟಗಿ | 10,122 | 8,604 | 68 | 1 | 0.5 | 240 | 3 | 779 | 9 | ಬಿಳಿ |
| 9 | ಕುಂದಗೋಳ | 6,409 | 5,448 | 69 | 1 | 0.5 | 178 | 3.5 | 110 | 2 | ಬಿಳಿ |
| 10 | ಮುಂಡರಗಿ | 4,541 | 3,860 | 697 | 18 | 2 | 1,006 | 26 | 1,610 | 42 | ಬಿಳಿ |
| 11 | ನವಲಗುಂದ | 5,698 | 4,843 | 30 | 1 | 0.5 | 127 | 3 | 407 | 18 | ಬಿಳಿ |
| 12 | ನರಗುಂದ | 2,697 | 2,292 | 112 | 5 | 2 | 295 | 13 | 499 | 10 | ಬಿಳಿ |
| 13 | ರಾಣೆಬೆನ್ನೂರು | 6,610 | 5,619 | 1,352 | 24 | 2 | 1,801 | 32 | 3,647 | 65 | ಬೂದು |
| 14 | ರೋಣ | 7,800 | 6,630 | 835 | 13 | 2 | 1,365 | 21 | 2,584 | 39 | ಬಿಳಿ |
| 15 | ಸವಣೂರು | 3,980 | 3,383 | 501 | 15 | 2 | 772 | 23 | 915 | 27 | ಬಿಳಿ |
| 16 | ಶಿಗ್ಗಾಂವಿ | 5,540 | 4,709 | 360 | 8 | 2 | 737 | 16 | 793 | 17 | ಬಿಳಿ |
| 17 | ಶಿರಹಟ್ಟಿ | 8,818 | 7,495 | 498 | 7 | 2 | 1,098 | 15 | 1,443 | 19 | ಬಿಳಿ |
| | ಜಿಲ್ಲಾ ಮೊತ್ತ | 1,24,822 | 1,06,150 | 8,344 | 8 | 2 | 14,954 | 14 | 24,392 | 20 | |

ಆಧಾರ: ಗಣಿ ಮತ್ತು ಭೂವಿಜ್ಞಾನ ಇಲಾಖೆ, ಅಂತರ್ಜಲ ವಿಭಾಗ ಬೆಂಗಳೂರು 1987; ಬರಪರಿಹಾರ ಉಸ್ತುವಾರಿ ಕೋಶ, ಬೆಂಗಳೂರು.

## ಜಲಸಂಪತ್ತು

ಧಾರವಾಡ ಜಿಲ್ಲೆಯ ಮುಖ್ಯ ನದಿಗಳೆಂದರೆ ತುಂಗಭದ್ರಾ, ಮಲಪ್ರಭಾ, ವರದಾ, ಕುಮುದ್ವತಿ ಮತ್ತು ಬೆಣ್ಣೆಹಳ್ಳ. ಈ ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದ ಮಳೆ ಬಿದ್ದರೂ ಪಶ್ಚಿಮ ಘಟ್ಟಗಳಲ್ಲಿ ಹುಟ್ಟುವ ನದಿಗಳು ಇಲ್ಲಿ ಹರಿದು ಬರುತ್ತಿರುವುದರಿಂದ ಇಲ್ಲಿನ ಜಲಸಂಪತ್ತು ಹೆಚ್ಚಿದ್ದು ನದೀ ಬಯಲುಗಳು ಫಲವತ್ತಾಗಿವೆ.

**ತುಂಗಭದ್ರಾ:** ರಾಜ್ಯದ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳು ಕೂಡುವುದು ಶಿವಮೊಗ್ಗದ ಈಶಾನ್ಯದಲ್ಲಿ ಸುಮಾರು 16 ಕಿ.ಮೀ. ದೂರದಲ್ಲಿರುವ ಕೂಡಲಿಯಲ್ಲಿ, ಇಲ್ಲಿಂದ ಪ್ರಾರಂಭವಾಗುವ ತುಂಗಭದ್ರಾ ಶಿವಮೊಗ್ಗ ಜಿಲ್ಲೆಯನ್ನು ಬಿಡುವವರೆಗೂ ಉತ್ತರಗಾಮಿನಿಯಾಗಿದೆ. ಕರ್ನಾಟಕ ರಾಜ್ಯವನ್ನು ಬಿಡುವವರೆಗೂ ಎಡಭಾಗದಲ್ಲಿ

ಧಾರವಾಡ ಮತ್ತು ರಾಯಚೂರು ಜಿಲ್ಲೆಗಳೂ ಬಲಭಾಗದಲ್ಲಿ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳು ಮತ್ತು ಸ್ವಲ್ಪ ದೂರ ಆಂಧ್ರಪ್ರದೇಶ ಇವುಗಳ ನಡುವೆ ಗಡಿರೇಖೆಯಾಗಿ ನದಿ ಹರಿಯುತ್ತದೆ. ಶಿವಮೊಗ್ಗ ಜಿಲ್ಲೆಯನ್ನು ಬಿಟ್ಟು ಈ ನದಿಯು ಶಂಕರನಹಳ್ಳಿಯ ಬಳಿ ಧಾರವಾಡ ಜಿಲ್ಲೆಯ ಸಂಪರ್ಕ ಪಡೆದು ಸ್ವಲ್ಪ ದೂರ ಈಶಾನ್ಯಕ್ಕೆ ಸಾಗಿ, ಅಲ್ಲಿಂದ ಬಹುತೇಕ ಜಿಲ್ಲೆಯ ಪೂರ್ವ ಗಡಿಯಾಗಿ ಹರಿದು ಈ ಜಿಲ್ಲೆಯನ್ನು ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಬೇರ್ಪಡಿಸುವುದು. ಮೊದಲು ಶಂಕರನಹಳ್ಳಿಯಿಂದ ಉತ್ತರಕ್ಕೆ ಹಾವಿನಂತೆ ಸುತ್ತಿ ಹರಿದು ಹಾವೇರಿ ತಾಲೂಕಿನ ಪೂರ್ವದಲ್ಲಿ ಸ್ವಲ್ಪ ದೂರ ಮಾತ್ರ ಜಿಲ್ಲೆಯ ಒಳಗೆ ಪ್ರವೇಶಿಸಿ ಹಾವನೂರು ಮುಖಾಂತರ ಉತ್ತರಕ್ಕೆ ಹರಿಯುವುದು. ಮುಂದೆ ಶಿರಹಟ್ಟಿ ತಾಲೂಕಿನ ಎಲ್ಲೆಯಾಗಿ ಅದರ ಆಗ್ನೇಯ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಸ್ವಲ್ಪ ದೂರ ಹರಿದು ಅನಂತರ ಮುಂಡರಗಿ ತಾಲೂಕಿನ ದಕ್ಷಿಣದಲ್ಲಿ ಈಶಾನ್ಯಾಭಿಮುಖವಾಗಿ ಸಾಗಿ ಹೆಸರೂರಿನ ದಕ್ಷಿಣದಲ್ಲಿ ಪೂರ್ವಾಭಿಮುಖವಾಗಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಭದ್ರಾ ನದಿಯನ್ನು ಮುಂಡರಗಿ ತಾಲೂಕಿನಲ್ಲಿ ಹಿರೇಹಳ್ಳವೂ ಮತ್ತು ಕಪ್ಪತಗುಡ್ಡದ ನೈರುತ್ಯದ ಅಂಚಿನಲ್ಲಿ ಶಿರಹಟ್ಟಿಹಳ್ಳವೂ ಕೂಡಿಕೊಳ್ಳುತ್ತವೆ. ಅಲ್ಲಿಂದ ಮುಂದೆ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಸಾಗಿ ಕರ್ನೂಲು ಪಟ್ಟಣದಿಂದ ಸ್ವಲ್ಪ ಮುಂದೆ ಕೃಷ್ಣಾ ನದಿಯಲ್ಲಿ ಸಂಗಮವಾಗುತ್ತದೆ.

ಧಾರವಾಡ ಜಿಲ್ಲೆಯ ಗಡಿಯಲ್ಲಿ ಸುಮಾರು 150ಕಿ.ಮೀ. ದೂರ ಹರಿಯುವ ಈ ನದಿಯು ತನ್ನ ಎಡದಂಡೆಯ ರಾಣೆಬೆನ್ನೂರು, ಹಾವೇರಿ, ಶಿರಹಟ್ಟಿ ಮತ್ತು ಮುಂಡರಗಿ ತಾಲೂಕುಗಳ ವ್ಯವಸಾಯಕ್ಕೆ ಸಹಕಾರಿಯಾಗಿದೆ. ಕರ್ನಾಟಕದಲ್ಲಿ ತುಂಗಭದ್ರಾ ನದಿಯ ಹರಿವಿನ ಒಟ್ಟು ಉದ್ದ 403 ಕಿ.ಮೀ. ಕೂಡಲಿಯಿಂದ ಬಳ್ಳಾರಿ ಜಿಲ್ಲೆಯಂಚನ್ನು ತಲುಪುವವರೆಗೂ ಕಡಿದಾದ ಎತ್ತರ ದಂಡೆಗಳ ಮಧ್ಯೆ ಹರಿದು ಬರುತ್ತದೆ. ನದಿಯ ಪಾತ್ರ ಸುಮಾರು 100 ರಿಂದ 200 ಮೀ.ಗಳಷ್ಟು ಅಗಲವಾಗಿದ್ದು ಬಹುತೇಕ ಬಂಡೆಗಳಿಂದ ಕೂಡಿದೆ. ಅಲ್ಲಲ್ಲಿ ಮಡುಗಳು, ಸುಳಿಗಳು ಸಾಮಾನ್ಯ. ತುಂಗಭದ್ರಾ ಜೀವನದಿಯಾಗಿದ್ದು ವರ್ಷದ ಎಲ್ಲಾ ಕಾಲದಲ್ಲಿ ನೀರು ಹರಿಯುವುದಾದರೂ ಬೇಸಿಗೆಯಲ್ಲಿ ಹರಿಯುವ ನೀರಿನ ಪ್ರಮಾಣ ಕಡಿಮೆ. ಈ ನದಿಯ ನೀರನ್ನು ಸಾಕಷ್ಟು ಮಟ್ಟಿಗೆ ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದ್ದರೂ ಬಳ್ಳಾರಿ ಜಿಲ್ಲೆಗೆ ಬರುವವರೆಗೆ ಕಡಿದಾದ ದಂಡೆಗಳಿರುವುದರಿಂದ ಈ ಭಾಗದಲ್ಲಿ ಯಾವ ಅಣೆಕಟ್ಟುಗಳೂ ಇಲ್ಲ. ಈ ನದಿಗೆ ಅಡ್ಡಲಾಗಿ ಹುಬ್ಬಳ್ಳಿ-ಬೆಂಗಳೂರು ಮಾರ್ಗದ ರೇಲು ಸೇತುವೆ ಹಾಗೂ ರಸ್ತೆ ಸೇತುವೆ ಹರಿಹರದ ಹತ್ತಿರವೂ, ಹಾವೇರಿ ಹರಪನಹಳ್ಳಿ ಮಾರ್ಗದಲ್ಲಿ ರಸ್ತೆ ಸೇತುವೆಯನ್ನು ಹಾವನೂರ ಬಳಿಯೂ ನಿರ್ಮಿಸಲಾಗಿದೆ. ಈ ಜಿಲ್ಲೆಯ ಗಳಗನಾಥ ಮತ್ತು ಚೌಡದಾನಪುರಗಳು ತುಂಗಭದ್ರಾ ನದಿಯ ದಂಡೆಯಲ್ಲಿರುವ ಪವಿತ್ರ ಕ್ಷೇತ್ರಗಳಾಗಿವೆ.

**ಮಲಪ್ರಭಾ** : ಮಲಪ್ರಭಾ ನದಿಯು ಧಾರವಾಡ ಜಿಲ್ಲೆಯ ಉತ್ತರದಲ್ಲಿ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳನ್ನು ಸುಮಾರು 32 ಕಿ.ಮೀ. ದೂರದವರೆಗೆ ವಿಂಗಡಿಸುವ ಗಡಿಯಾಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಮಲಪ್ರಭಾ ನದಿಯು ಕೃಷ್ಣಾ ನದಿಯ ಉಪನದಿ. ಈ ನದಿಗೆ ಮಲಾಪಹಾರಿಣಿ, ಮಲಾಪಹಾರಿ, ಮಾಲಿನಿ ಎಂಬ ಹೆಸರುಗಳು ಇವೆ. ಬೆಳಗಾವಿ ಜಿಲ್ಲೆಯ ಸಹ್ಯಾದ್ರಿಯ ಶಿಖರದ ಕಣಕುಂಬಿಯಲ್ಲಿ ಉಗಮಿಸುವ ಈ ನದಿಯು ಬೆಳಗಾವಿ ಜಿಲ್ಲೆಯಲ್ಲಿ ಹರಿದು, ನಂತರ ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಎಲ್ಲೆಯಾಗಿ ಪ್ರವಹಿಸಿ ನಂತರ ಬಿಜಾಪುರ ಜಿಲ್ಲೆಯಲ್ಲಿ ಕೂಡಲಸಂಗಮದ ಬಳಿ ಕೃಷ್ಣಾ ನದಿಯನ್ನು ಸೇರುತ್ತದೆ. ನರಗುಂದ ತಾಲೂಕಿನ ಲಕಾಪುರದ ಬಳಿ ಜಿಲ್ಲೆಗೆ ತಾಗಿ ಹರಿದು ರೋಣ ತಾಲೂಕಿನ ಹಡಗಲಿ ಗ್ರಾಮದ ಹತ್ತಿರ ಈಶಾನ್ಯಾಭಿಮುಖವಾಗಿ ಬಿಜಾಪುರ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ನದಿಗೆ ಹೊಳೆ ಆಲೂರಿನ ಬಳಿ ಸೇರುವ ಬೆಣ್ಣೆಹಳ್ಳವು ಶಿಗ್ಗಾಂವಿ ತಾಲೂಕಿನ ಧುಂಡಸಿ ಗ್ರಾಮದ ಹತ್ತಿರ ಹುಟ್ಟಿ, ಹುಬ್ಬಳ್ಳಿ, ನವಲಗುಂದ ಮತ್ತು ರೋಣ ತಾಲೂಕುಗಳಲ್ಲಿ ಉತ್ತರಾಭಿಮುಖವಾಗಿ ಒಟ್ಟು 192 ಕಿ.ಮೀ. ದೂರ ಹರಿದು ಮೆಣಸಗಿ ಹತ್ತಿರ ಮಲಪ್ರಭಾ ನದಿಯನ್ನು ಸೇರುತ್ತದೆ. ನವಲಗುಂದ ತಾಲೂಕಿನಲ್ಲಿ ತುಪರಿಹಳ್ಳ, ತಾಲೂಕಿನ ಪಶ್ಚಿಮ ಭಾಗದಲ್ಲಿ ಮೊರಬದ ಹತ್ತಿರ ಪಶ್ಚಿಮದೆಡೆಯಿಂದ ಪ್ರವೇಶಿಸಿ ಸುಮಾರು ದೂರ ಪೂರ್ವಾಭಿಮುಖವಾಗಿ ಹರಿದು ಅಳಗವಾಡಿಯ ಬಳಿ ದಕ್ಷಿಣಕ್ಕೆ ತಿರುಗಿ ಆಗ್ನೇಯಾಭಿಮುಖವಾಗಿ ಹರಿದು ನವಲಗುಂದದ ವಾಯವ್ಯದಲ್ಲಿ ಬೆಣ್ಣೆಹಳ್ಳವನ್ನು ಕೂಡುವುದು. ಹಂದಿಗನಹಳ್ಳ ನವಲಗುಂದ ತಾಲೂಕಿನ ಆಗ್ನೇಯದಲ್ಲಿ ಕಿತ್ತೂರಿನ ಹತ್ತಿರ ಪ್ರವೇಶಿಸಿ ತಾಲೂಕಿನ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿ ಹರಿದು ತಡಹಾಳ ಗ್ರಾಮದ ಹತ್ತಿರ ಬೆಣ್ಣೆಹಳ್ಳವನ್ನು ಸೇರಿಕೊಳ್ಳುತ್ತದೆ. ಹಂದಿಗನಹಳ್ಳಕ್ಕೆ ಪಿಂಜರಹಳ್ಳವು ತುಪ್ಪದಕುರಹಟ್ಟಿ ಬಳಿ ಸೇರಿಕೊಳ್ಳುವುದು. ಈ ಹಳ್ಳಗಳಿಗೆ ಮಳೆಗಾಲದಲ್ಲಿ ಸುತ್ತಲಿನಿಂದ ಅನೇಕ ತೊರೆಗಳು ಬಂದು ಸೇರುತ್ತವೆ. ಹಿರೇಹಳ್ಳ ಉತ್ತರಾಭಿಮುಖವಾಗಿ ಗದಗ ಹಾಗೂ ರೋಣ ತಾಲೂಕುಗಳಲ್ಲಿ ಹರಿದು ಬೇಲೇರಿಯ ಹತ್ತಿರ ಮಲಪ್ರಭಾ ನದಿಯನ್ನು ಸೇರುತ್ತದೆ. ಮಲಪ್ರಭಾ ನದಿಯ ಒಟ್ಟು ಉದ್ದ ಸುಮಾರು 330 ಕಿ.ಮೀ. ಇದರ ನವಿಲುತೀರ್ಥ ಜಲಾಶಯದಿಂದ ನವಲಗುಂದ, ನರಗುಂದ, ರೋಣ ತಾಲೂಕುಗಳಿಗೆ

ವ್ಯವಸಾಯಕ್ಕಾಗಿ ನೀರನ್ನು ಬಳಸುತ್ತಾರೆ. ಹೊಳೆ ಆಲೂರಿನ ಬಳಿ ಗದಗ-ಬಿಜಾಪುರ ರೈಲು ಮಾರ್ಗದಲ್ಲಿ ಮಲಪ್ರಭಾ ನದಿಗೆ ಸೇತುವೆ ಇದೆ.

**ಕುಮುದ್ವತಿ :** ಶಿಕಾರಿಪುರ ತಾಲೂಕಿನ ಹುಮಚದ ಹತ್ತಿರ ಅಗಸ್ತ್ಯಪರ್ವತದಲ್ಲಿ (ಬಿಲ್ಲೇಶ್ವರ ಬೆಟ್ಟ) ಹುಟ್ಟಿ ಕುಂಸಿ ಮತ್ತು ಶಿಕಾರಿಪುರಗಳ ಮೂಲಕ ಉತ್ತರಕ್ಕೆ ಹರಿದು ಹಿರೇಕೆರೂರು ತಾಲೂಕನ್ನು ಪ್ರವೇಶಿಸಿ ಹರಿಹರದಿಂದ ಸ್ವಲ್ಪ ಮೇಲೆ ಮುದೇನೂರು ಗ್ರಾಮದ ಹತ್ತಿರ ತುಂಗಭದ್ರಾ ನದಿಯನ್ನು ಸೇರುತ್ತದೆ. ಇದಕ್ಕೆ ಜೊರಾಡಿ ಎಂಬ ಹೆಸರೂ ಇದೆ. ನದಿಯ ಒಟ್ಟು ಉದ್ದ ಸುಮಾರು 96 ಕಿ.ಮೀ.ಗಳು. ಧಾರವಾಡ ಜಿಲ್ಲೆಯಲ್ಲಿ ಹಿರೇಕೆರೂರು ಮತ್ತು ರಾಣೆಬೆನ್ನೂರು ತಾಲೂಕುಗಳಲ್ಲಿ ಸುಮಾರು 32 ಕಿ.ಮೀ. ದೂರ ಪೂರ್ವಕ್ಕೆ ಹರಿದು ತುಂಗಭದ್ರಾ ನದಿಯನ್ನು ಸೇರುತ್ತದೆ. ಮಾಸೂರು ಮದಗಕೆರೆಗೆ ಈ ನದಿಯೇ ಜೀವನಾಡಿ.

**ವರದಾ ನದಿ :** ತುಂಗಭದ್ರಾ ನದಿಯ ಉಪನದಿಯಾದ ವರದಾ ನದಿಯು ಇಕ್ಕೇರಿ ಸಮೀಪದ ಮೂಲದಲ್ಲಿ ಉಗಮಿಸಿ ಸೊರಬ ತಾಲೂಕಿನ ಮೂಲಕ ಹರಿದು ಹಾನಗಲ್ ತಾಲೂಕಿನ ದಕ್ಷಿಣದಲ್ಲಿ ಸ್ವಲ್ಪ ದೂರ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ಗಡಿಯಾಗಿ ಹರಿದು, ಹೊಂಕಣದ ಬಳಿ ಧಾರವಾಡ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ನದಿಯು ಹಾನಗಲ್ ತಾಲೂಕಿನಲ್ಲಿ ಈಶಾನ್ಯ ದಿಕ್ಕಿಗೆ ಹರಿದು ಮುಂದೆ ಹಾವೇರಿ ಮತ್ತು ಸವಣೂರು ತಾಲೂಕುಗಳ ಗಡಿಯಾಗಿ ಮತ್ತೆ ಪೂರ್ವಾಭಿಮುಖವಾಗಿ ಹಾವೇರಿ ತಾಲೂಕಿನ ಉತ್ತರಭಾಗದಲ್ಲಿ ಹರಿದು ಹಾವನೂರಿನ ಉತ್ತರದಲ್ಲಿ ಗಳಗನಾಥ ಗ್ರಾಮದ ಹತ್ತಿರ ತುಂಗಭದ್ರಾ ನದಿಯನ್ನು ಕೂಡಿಕೊಳ್ಳುತ್ತದೆ. ನದಿಯ ಹರಿವಿನ ಒಟ್ಟು ಉದ್ದ ಸುಮಾರು 185 ಕಿ.ಮೀ. ಧಾರವಾಡ ಜಿಲ್ಲೆಯಲ್ಲಿ ಈ ನದಿಯ ಹರಿವಿನ ಉದ್ದ ಸುಮಾರು 101 ಕಿ.ಮೀ. ಧರ್ಮಾ ಈ ನದಿಯ ಮುಖ್ಯ ಉಪನದಿ. ಇದು ಉತ್ತರಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಸುಮಾರು 32 ಕಿ.ಮೀ. ದೂರ ಹರಿದು ಮುಂದೆ ಧಾರವಾಡ ಜಿಲ್ಲೆಯಲ್ಲಿ ಹಾನಗಲ್ ತಾಲೂಕಿನಲ್ಲಿ ಸುಮಾರು 56 ಕಿ.ಮೀ. ದೂರಸಾಗಿ ಆ ತಾಲೂಕಿನ ಈಶಾನ್ಯದ ಅಂಚಿನಲ್ಲಿ ಕೂಡಲ ಬಳಿ ವರದಾ ನದಿಯನ್ನು ಕೂಡಿಕೊಳ್ಳುತ್ತದೆ. ಇದಲ್ಲದೆ ಮಳೆಗಾಲದಲ್ಲಷ್ಟೆ ಪ್ರವಹಿಸುವ ಅನೇಕ ಸಣ್ಣ ಹಳ್ಳಗಳೂ ವರದಾ ನದಿಯನ್ನು ಸೇರುತ್ತವೆ. ವರದಾ ಜೀವನದಿ. ನದಿಯಲ್ಲಿ ಪ್ರವಹಿಸುವ ನೀರಿನ ಪ್ರಮಾಣ ಹೆಚ್ಚಿಲ್ಲದಿದ್ದರೂ ಇದಕ್ಕೆ ಹಾಗೂ ಇದರ ಉಪನದಿ ಧರ್ಮಾಗೆ ಅನೇಕ ಒಡ್ಡುಗಳನ್ನು ಕಟ್ಟಿ ಸಾಕಷ್ಟು ನೀರಾವರಿ ಸೌಕರ್ಯವನ್ನು ಒದಗಿಸಿಕೊಳ್ಳಲಾಗಿದೆ. ಬನವಾಸಿ, ಕೂಡಲ ಮತ್ತು ಗಳಗನಾಥ ಈ ನದಿಯ ದಂಡೆಯಲ್ಲಿರುವ ಪುಣ್ಯಕ್ಷೇತ್ರಗಳು. ಶಿವ ತನ್ನ ಬ್ರಹ್ಮಹತ್ಯಾ ಪಾಪವನ್ನು ಕಳೆದುಕೊಳ್ಳಲು ಶೃಂಗ ಋಷಿಯ ಆಶ್ರಮವಿದ್ದ ವರದಾಮೂಲ ಪ್ರದೇಶದ ಬಳಿ ತಪೋನಿರತನಾಗಿದ್ದ. ಆಗ ಉದ್ಭವಿಸಿದ ಅವನ ತಪೋಜ್ವಾಲೆ ದೇವತೆಗಳನ್ನು ಸುಡುವಷ್ಟು ಹೆಚ್ಚಾಯಿತು. ಅದನ್ನು ಪರಿಹರಿಸಲು ನಾರಾಯಣ ಭಾಗೀರಥೀ ನದಿಯ ನೀರನ್ನು ತನ್ನ ಶಂಖದಿಂದ ಶಿವನ ತಲೆಯ ಮೇಲೆ ಸುರಿದ ಪರಿಣಾಮವಾಗಿ ವರದಾ ನದಿಯ ಉಗಮವಾಯಿತು ಎಂದು ಪುರಾಣದ ಕಥೆ.

**ಬೇಡ್ತಿ :** ಧಾರವಾಡ ಜಿಲ್ಲೆಯ ಎಲ್ಲಾ ನದಿ ತೊರೆಗಳು ಪೂರ್ವಕ್ಕೆ ಹರಿದು ಬಂಗಾಳ ಕೊಲ್ಲಿಯನ್ನು ಸೇರಿದರೆ ಬೇಡ್ತಿ ನದಿ ಮಾತ್ರ ಪಶ್ಚಿಮಕ್ಕೆ ಹರಿಯುತ್ತದೆ. ಧಾರವಾಡದ ಸಮೀಪದಲ್ಲಿ ಸೋಮೇಶ್ವರ ಎಂಬಲ್ಲಿ ಹುಟ್ಟುವ ಶಾಲ್ಮಲಾ ಬೇಡ್ತಿ ನದಿಯ ಉಪನದಿಯಾಗಿದೆ. ಬೇಡ್ತಿಯು ಧಾರವಾಡ ತಾಲೂಕಿನಲ್ಲೇ ಉಗಮಿಸುತ್ತದೆ. ಕಲಘಟಗಿ ಬಳಿ ಸಂಗೇದೇವರ ಕೊಪ್ಪದಲ್ಲಿ ಇವುಗಳು ಕೂಡುತ್ತವೆ. ಉತ್ತರ ಕನ್ನಡದಲ್ಲಿ ಇದನ್ನು ಗಂಗಾವಳಿ ನದಿಯೆಂದು ಕರೆಯುತ್ತಾರೆ. ಬೇಡ್ತಿಗೆ ದುಮ್ಮವಾಡದ ಹತ್ತಿರ ಒಡ್ಡು ಹಾಕಿ ನೀರಸಾಗರವೆಂಬ ದೊಡ್ಡ ಕರೆ ಕಟ್ಟಿದ್ದಾರೆ. ಈ ಕೆರೆಯ ನೀರನ್ನು ಕುಂದಗೋಳ, ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಕುಡಿಯಲು ಪೂರೈಸಲಾಗುತ್ತಿದೆ.

ಧಾರವಾಡ ಜಿಲ್ಲೆಯ ಮೂರನೆಯ ಎರಡರಷ್ಟು ಪ್ರದೇಶದಲ್ಲಿ ಮಲಪ್ರಭಾ ನದಿ ಹಾಗೂ ಅದರ ಉಪನದಿಗಳ ಜಲಾನಯನ ಪ್ರದೇಶ ಹರಡಿದೆ. ಉಳಿದ ಪ್ರದೇಶ ತುಂಗಭದ್ರಾ ಹಾಗೂ ಅದರ ಉಪನದಿಗಳ ಜಲಾನಯನ ಪ್ರದೇಶ ಆಗಿದೆ. ಸ್ವಲ್ಪ ಭಾಗ ಮಾತ್ರ ಪಶ್ಚಿಮಕ್ಕೆ ಹರಿಯುವ ಬೇಡ್ತಿ ನದಿಯ ಮತ್ತು ಅದರ ಉಪನದಿಯಾದ ಶಾಲ್ಮಲಾ ಜಲಾನಯನ ಪ್ರದೇಶವಾಗಿದೆ.

### ಕೆರೆಗಳು

ಕಂದಾಯ ದಾಖಲೆಗಳಂತೆ ಧಾರವಾಡ ಜಿಲ್ಲೆಯಲ್ಲಿ 1858 ರಲ್ಲಿ 3,150 ಕ್ಕೂ ಅಧಿಕ ನೀರಾವರಿ ಕೆರೆಗಳಿದ್ದು ಇವುಗಳಲ್ಲಿ 535 ನೀರಾವರಿ ಕೆರೆಗಳು ಪ್ರತಿಯೊಂದೂ 50 ಎಕರೆಗೂ ಮಿಗಿಲಾದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದ್ದವು. 500 ಎಕರೆಗಳಿಗೂ

ಅಧಿಕ ನೀರಾವರಿ ಸೌಲಭ್ಯವನ್ನು ಒದಗಿಸಿದ್ದ ಕೆರೆಗಳೆಂದರೆ ದೊಡ್ಡಕೆರೆ, ಬಿ.ಕೋಣನಕೇರಿ, ಬಂಕಾಪುರ ತಾಲೂಕು-654 ಎಕರೆಗಳು, ಹಾವೇರಿ ಬಳಿಯ ಹೆಗ್ಗೆರೆ-515ಎ, ಹಿರೆಕೇರೂರು ಬಳಿಯ ದೊಡ್ಡಕೆರೆ-765ಎ, ಕಲಘಟಗಿ ತಾಲೂಕಿನ ದೇವಿಕೊಪ್ಪದ ಬಳಿಯ ದೊಡ್ಡಕೆರೆ-433ಎ, ಧಾರವಾಡ ತಾಲೂಕಿನ ಮುಗವಾಡದ ಬಳಿಯ ಹೊನ್ನವ್ವನ ಕೆರೆ-603ಎ, ಹಾನಗಲ್ ತಾಲೂಕಿನ ಹೊಳಿಕೋಟಿ ಬಳಿಯ ಆನಿಕೆರೆ-537 ಎ, ನರೇಗಲ್ ಬಳಿಯ ಹಿರೇಕೆರೆ-602 ಎ ಮತ್ತು ತಿಳುವಳ್ಳಿ ಬಳಿಯ ಹಿರೇಕೆರೆ-862 ಎ. ಇವುಗಳಲ್ಲದೆ ಗದಗ ತಾಲೂಕಿನ ಡಂಬಳ ಬಳಿ ಮತ್ತು ಹಿರೆಕೇರೂರು ತಾಲೂಕಿನ ಮಾಸೂರು (ಮಗದ ಮಾಸೂರು) ಬಳಿ ಎರಡು ಪುರಾತನ ದೊಡ್ಡ ಕೆರೆಗಳಿದ್ದವು. ಧಾರವಾಡ ಜಿಲ್ಲೆಯಲ್ಲಿ 1884 ರಲ್ಲಿ 2,979 ಕೆರೆ ಕುಂಟೆಗಳು ಇದ್ದು ಸುಮಾರು 93,730 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಇದ್ದಿತು. 1903 ರಲ್ಲಿ ಜಿಲ್ಲೆಯಲ್ಲಿ 2,784 ನೀರಾವರಿ ಕೆರೆಗಳು ಇದ್ದವೆಂದು ಗ್ಯಾಸೆಟಿಯರ್‌ನ 1904 ರ ಪುರವಣಿ ಹೇಳಿದೆ. ಇದಲ್ಲದೆ 4,387 ಇತರ ಕೆರೆಗಳಿದ್ದವು. ಇನ್ನೊಂದು ಮೂಲದಂತೆ 1901 ರಲ್ಲಿ 2,404 ಕೆರೆಗಳಿಂದ ಸುಮಾರು 81,843 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಇದ್ದಿತು. ಇವುಗಳೊಂದಿಗೆ ಇಷ್ಟೇ ಸಂಖ್ಯೆಯ ನೀರಾವರಿಗೆ ಉಪಯೋಗಿಸದಿರುವ ಕೆರೆಗಳಿದ್ದವು. ಇವುಗಳಿಂದ ದನಕರುಗಳಿಗೆ ಮತ್ತು ಜನರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿತ್ತು. ಧಾರವಾಡ ಜಿಲ್ಲೆಯ ಬಹುತೇಕ ನೀರಾವರಿ ಕೆರೆಗಳು ಹರಿಹರ ಬೆಳಗಾವಿ ರಸ್ತೆಯ ಪಶ್ಚಿಮಭಾಗದಲ್ಲಿವೆ. ಇವುಗಳನ್ನು ವಿಜಯನಗರ ರಾಜರ ಕಾಲದಲ್ಲಿ ಕಟ್ಟಿಸಲಾಯಿತು ಎಂದು ತಿಳಿದು ಬಂದಿದೆ. 1936 ರ ವೇಳೆಗೆ ಧಾರವಾಡದಲ್ಲಿ 2,348 ನೀರಾವರಿ ಕೆರೆಗಳಿದ್ದು ಅವುಗಳ ಅಚ್ಚುಕಟ್ಟು ಪ್ರದೇಶ 90,393 ಎಕರೆಗಳಾಗಿತ್ತು. 1955-56 ನೇ ಸಾಲಿನಲ್ಲಿ ಕೆರೆಗಳಿಂದ ನೀರಾವರಿ ಆದ ಪ್ರದೇಶ 1,08,204 ಎಕರೆಗಳಿಗೆ ಏರಿತು. 1988-89 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 1,820 ಹೆ.ಅಚ್ಚುಕಟ್ಟು ಪ್ರದೇಶ ಹೊಂದಿರುವ 1,128 (4 ಹೆ.ವರೆಗೆ ಅಚ್ಚುಕಟ್ಟು ಪ್ರದೇಶ ಹೊಂದಿರುವ) ಕೆರೆಗಳು ಹಾಗೂ 63,229 ಹೆ.ಅಚ್ಚುಕಟ್ಟು ಪ್ರದೇಶ ಹೊಂದಿರುವ 2,024 (4 ಹೆ.ಗೂ ಅಧಿಕ ಅಚ್ಚುಕಟ್ಟು ಪ್ರದೇಶ ಹೊಂದಿರುವ) ಕೆರೆಗಳು ಇದ್ದವು. 1992-93ನೆ ಸಾಲಿನಲ್ಲಿ 40 ಹೆ. ಗೂ ಕಡಿಮೆ ಅಚ್ಚುಕಟ್ಟು ಪ್ರದೇಶ ಹೊಂದಿರುವ 276 ಕೆರೆಗಳೂ ಹಾಗೂ 40 ಹೆ.ಗೂ ಮಿಗಿಲಾದ ಅಚ್ಚುಕಟ್ಟು ಪ್ರದೇಶ ಹೊಂದಿರುವ 2,800 ಕೆರೆಗಳೂ ಇದ್ದವು.

**ಬಾವಿಗಳು :** ಜಿಲ್ಲೆಯಲ್ಲಿ 1903ರಲ್ಲಿ 4,671 ನೀರಾವರಿ ಬಾವಿಗಳು ಹಾಗೂ 10,306 ಇತರ ಬಾವಿಗಳು ಇದ್ದವು. 1951 ರಲ್ಲಿ ನೀರಾವರಿ ಬಾವಿಗಳ ಸಂಖ್ಯೆ 4,320 ಇದ್ದು, ಇತರ ಬಾವಿಗಳ ಸಂಖ್ಯೆ ತಿಳಿದಿಲ್ಲ. 1972 ರ ಬಾವಿಗಳ ಗಣತಿ ವರದಿಯಂತೆ ಜಿಲ್ಲೆಯಲ್ಲಿ 9,455 ನೀರಾವರಿ ಬಾವಿಗಳು ಮತ್ತು 225 ವಿವಿಧೋದ್ದೇಶ ಬಾವಿಗಳು ಇದ್ದವು. ನೀರಾವರಿ ಬಾವಿಗಳಿಂದ ನೀರನ್ನು ಉಪಯೋಗಿಸಿಕೊಂಡು ಜಿಲ್ಲೆಯಲ್ಲಿ ಜೋಳ, ಶೇಂಗಾ, ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಒಟ್ಟು ಬಾವಿಗಳಲ್ಲಿ 2,749 ಬಾವಿಗಳನ್ನು ಕಲ್ಲುಗಳನ್ನು ಉಪಯೋಗಿಸಿ ನಿರ್ಮಿಸಿದ್ದು, 6,843 ಬಾವಿಗಳು ಕೇವಲ ಮಣ್ಣಿನಲ್ಲೆ ನಿರ್ಮಿಸಿದ್ದ ಬಾವಿಗಳಾಗಿದ್ದವು. ಇವುಗಳಲ್ಲಿ 11 ರಿಂದ 20 ಅಡಿ ಆಳದ ಬಾವಿಗಳು 2,164; 21 ರಿಂದ 30 ಅಡಿ ಆಳದ ಬಾವಿಗಳು 3,832; 31 ರಿಂದ 40 ಅಡಿ ಆಳದ ಬಾವಿಗಳು 2,339; ಹಾಗೂ 40 ಅಡಿಗಳಿಗಿಂತಲೂ ಹೆಚ್ಚು ಆಳದ ಬಾವಿಗಳ ಸಂಖ್ಯೆ 937. 1974 ರ ಬಾವಿಗಳ ಗಣತಿಯಂತೆ ಜಿಲ್ಲೆಯಲ್ಲಿನ ನೀರಾವರಿ ಬಾವಿಗಳ ಸಂಖ್ಯೆ 10,538 ಕ್ಕೆ ಮುಟ್ಟಿತು. 1984-85 ರಲ್ಲಿ 16,653 ಬಾವಿಗಳಿದ್ದವು. ಇದು ರಾಜ್ಯದ ಒಟ್ಟು ಬಾವಿಗಳ ಸಂಖ್ಯೆಯ ಶೇಕಡಾ 3 ಆಗಿತ್ತು. (ವಿವರಗಳಿಗೆ ಅಧ್ಯಾಯ 4 ನೋಡಿ). 1992-93ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 13,764 ಕೊಳವೆ ಬಾವಿಗಳು, 13,071 ಇತರ ಬಾವಿಗಳು, 7,399 ಗೃಹಬಳಕೆ ಉಪಯೋಗಕ್ಕೆ ಇರುವ ಬಾವಿಗಳು ಮತ್ತು 2,802 ಉಪಯೋಗಿಸದಿರುವ ಬಾವಿಗಳು ಇದ್ದವೆಂದು ವಾರ್ಷಿಕ ಋತು ಮತ್ತು ಬೆಳೆ ವರದಿಯಲ್ಲಿ ದಾಖಲಿಸಿದೆ.

## ಪ್ರಾಣಿ ಸಂಪತ್ತು

ಈ ಜಿಲ್ಲೆಯು ಸಮೃದ್ಧವಾದ ವನ್ಯಜೀವಿ ಸಂಪತ್ತನ್ನು ಹೊಂದಿದೆ. ಪ್ರಾಣಿಗಳು ಆಹಾರಕ್ಕೆ ಪರಾವಲಂಬಿಗಳಾಗಿರುವುದರಿಂದ ಸಸ್ಯಗಳ ಹಾಗೂ ಪ್ರಾಣಿಗಳ ವೈವಿಧ್ಯವಿರುವ ಸೂಕ್ತ ಪರಿಸರದಲ್ಲಿ ಪ್ರಾಣಿಗಳಲ್ಲಿ ವೈವಿಧ್ಯ ಕಾಣಬರುತ್ತದೆ. ಆಹಾರ ಸಾಧ್ಯತೆಯ ಬಗ್ಗೆ ಪರಿಶೀಲಿಸಿದರೆ ನಿತ್ಯಹರಿದ್ವರ್ಣದ ಕಾಡುಗಳು ಹೆಚ್ಚಾಗಿ ಕೋತಿಗಳಂಥ ವೃಕ್ಷವಾಸಿಗಳಿಗೆ ತೀರ ಅನುಕೂಲ. ಉದುರೆಲೆ ಕಾಡುಗಳು ಹಿರಿ ಗಾತ್ರದ ಸಸ್ಯಾಹಾರಿ ಪ್ರಾಣಿಗಳಾದ ಕಾಡೆಮ್ಮೆ ಆನೆ, ಜಿಂಕೆ ಇತ್ಯಾದಿಗಳಿಗೆ ಸೂಕ್ತ. ಕ್ಷಾಮದಂಥ ಸನ್ನಿವೇಶವನ್ನು ತಾಳಬಲ್ಲ ಚಿಗರೆಯಂಥ ಪ್ರಾಣಿಗಳು ಒಣ ಕುರುಚಲು ಕಾಡಿಗೆ ಬಹುಮಟ್ಟಿಗೆ ತಕ್ಕವುಗಳಾಗಿವೆ.

**ಸಸ್ತನಿ ವರ್ಗ :** ಮಾನವನನ್ನು (ಹೋಮೋ ಸೇಪಿಯನ್ಸ್ *Homo sapiens*) ಒಳಗೊಂಡಂತೆ ಈ ವರ್ಗದ ಪ್ರೈಮೇಟ್ ಗಣದಲ್ಲಿ ನಾಲ್ಕು ಬಗೆಯ ಪ್ರಾಣಿಗಳು ಜಿಲ್ಲೆಯಲ್ಲಿ ಕಾಣಬರುತ್ತವೆ. ಎಲ್ಲರಿಗೂ ಚಿರಪರಿಚಿತವಾಗಿರುವ ಬಾನೆಟ್ ಕೋತಿ (ಮಕಾಕ ರೇಡಿಯೇಟ, *Macaca radiata*), ಸಿಂಗಲೀಕ ಅಥವಾ ಸಿಂಹದ ಬಾಲದ ಕೋತಿ (ಮಕಾಕ ಸೈಲೆನೆಸ್ *Macaca silenus*), ಹನುಮಾನ್ ಲ್ಯಾಂಗೂರ್ (ಪ್ರೆಸ್‌ಬೈಟಿಸ್ ಎಂಟೆಲಸ್ *Presbytis entellus*) ಮತ್ತು ಕಾಡುಪಾಪ ಅಥವಾ ಕಾಡುಮನುಷ್ಯ (ಲೋರಿಸ್ ಟಾರ್ಡಿಗ್ರೇಡಸ್ *Loris tordigradus*).

ಮಾಂಸಾಹಾರಿ ಗಣ (ಕಾರ್ನಿವೊರ)ಕ್ಕೆ ಸೇರಿದ ಹಲವು ಪ್ರಾಣಿಗಳು ಜಿಲ್ಲೆಯಲ್ಲಿವೆ. ಫೆಲಿಡೀ ಕುಟುಂಬದ ಹುಲಿ (ಪ್ಯಾಂತರ ಟೈಗ್ರಿಸ್ *Panthera tigris*), ಚಿರತೆ (ಪ್ಯಾಂತರ ಪಾರ್ಡಸ್ *Panthera pardus* ), ಚಿರತೆ ಬೆಕ್ಕು ಅಥವಾ ಕಾಡುಬೆಕ್ಕು (ಫೆಲಿಸ್ ಬೆಂಗಾಲೆನ್ಸಿಸ್ *Felis benghalensis*), ಕಾಡುಬೆಕ್ಕು (ಫೆಲಿಸ್ ಕೇಯಸ್ *Felis caeus*), ಬೇಟೆಯ ಚಿರತೆ (ಅಸಿನೋನಿಕ್ಸ್ ಜೂಬೇಟಸ್ *Acinonyx jubatus*) ಮುಖ್ಯವಾದವು. ಇವುಗಳಲ್ಲಿ ಬೇಟೆಯ ಚಿರತೆಯು ಸಾಕಷ್ಟು ಸಂಖ್ಯೆಯಲ್ಲಿ ಹಿಂದೆ ಇದ್ದ ವರದಿಗಳಿದ್ದು, ಈಗ ಬಹುಶಃ ಅವು ಕಣ್ಮರೆಯಾಗಿರಬಹುದೆಂದು ತಿಳಿದುಬಂದಿದೆ. ವೈವೆರಿಡೀ ಕುಟುಂಬಕ್ಕೆ ಸೇರಿದ ಪುನುಗು ಬೆಕ್ಕು (ವೈವರಿಕ್ಯುಲ ಇಂಡಿಕ *Vivericula indica*) ಮತ್ತು ಕೇರ ಬೆಕ್ಕು (ಪಾರಡಕ್ಸೂರಸ್ ಹರ್ಮಾಫ್ರೊಡೈಟಸ್ *Paradoxurus hermaphroditus*) ಕಾಡುಗಳಲ್ಲಿ ಮತ್ತು ಸಮೀಪದ ಗ್ರಾಮಗಳ ಹೊರವಲಯದಲ್ಲಿ ಕಂಡು ಬರುತ್ತವೆ. ಎರಡು ಜಾತಿಯ ಮುಂಗುಸಿಗಳು (ಕೀರಗಳು) ಜಿಲ್ಲೆಯಲ್ಲಿವೆ. ಹರ್ಪೆಸ್ಟಿಡೀ ಕುಟುಂಬಕ್ಕೆ ಸೇರಿರುವ ಸಾಮಾನ್ಯ ಕೀರ (ಹರ್ಪಸ್ಟಿಸ್ ಎಡ್ವರ್ಸಿ *Herpestes edwardsi*) ಮತ್ತು ಕೆಂಪುಕೀರ (ಹರ್ಪಸ್ಟಿಸ್ ವಿಟಿಕಾಲಿಸ್ *Herpestes viticolis*) ಕಾಡು ಪ್ರದೇಶಗಳಲ್ಲಿ ಕಂಡುಬರುತ್ತವೆ.

ನಾಯಿಗಳ ಕುಟುಂಬ ಕೇನಿಡೀಗೆ ಸೇರಿದ ಪ್ರಾಣಿಗಳು ತೋಳ (ಕೆನಿಸ್ ಲೂಪಸ್ *Canis lupus*), ನರಿ (ಕೆನಿಸ್ ಆರಿಯಸ್) *Canis aureus*), ಸಣ್ಣನರಿ (ವುಲ್ಪೆಸ್ ಬೆಂಗಾಲೆನ್ಸಿಸ್ *Vulpes bengalensis* ) ಮತ್ತು ಸೀಳುನಾಯಿ ಅಥವಾ ಕಾಡುನಾಯಿ (ಕ್ಯೂಆನ್ ಅಲ್ಪೈನಸ್ *Cuon alpinus*). ಕತ್ತೆಕಿರುಬ ಅಥವಾ ನಾಯಿಹುಲಿ ಹೈನಿಡೀ ಕುಟುಂಬದ ಪ್ರತಿನಿಧಿಯಾಗಿದೆ. ಕರಡಿಗಳು (ಮೆಲರ್ಸಸ್ ಆರ್ಸಿನಸ್ *Melursis arsinus*) ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಕಾಣಬರುತ್ತವೆ.

ಕೀಟಭಕ್ಷಿ ಗಣಕ್ಕೆ ಸೇರಿದ ಮರದ ಮುಳ್ಳಿಲಿ (ಅನತಾನ ಎಲಿಯಟಿ *Anathana ellioti*), ಕಂದು ಮೂಗಿಲಿ (ಪ್ಯಾರಎಕೈನಸ್ ಮೈಕ್ರೋಪಸ್ *Paraechinus micropus*) ಮತ್ತು ಸುಂಡಿಲಿಗಳು (ಸಂಕಸ್ ಮ್ಯುರಿನಸ್ *Suncus murinus*) ಜಿಲ್ಲೆಯಲ್ಲಿವೆ. ಬಾವಲಿ ಗಣಕ್ಕೆ ಸೇರಿದ ತೊಗಲ ಬಾವಲಿ (ಟೆರೋಪಸ್ ಎಡ್ವರ್ಸಿ *Pteropus edwardsii*), ಅಗಲಗಿವಿಯ ಬಾವಲಿ (ರೈನೋಲೋಪಸ್ *Rhinolophus*), ಹಣ್ಣುಬಾವಲಿ ಮೊದಲಾದವು ಇವೆ.

ದಂಶಕ ಗಣ (ರಾಡೆಂಶಿಯ)ದ ಪ್ರತಿನಿಧಿಗಳು ದವಸಧಾನ್ಯ ಹಣ್ಣು ಹಂಪಲು ಮೊದಲಾದುವನ್ನು ತಿಂದು ನಾಶಪಡಿಸುತ್ತವೆ. ಅಳಿಲು (ಫ್ಯುನಾಂಬುಲಸ್ ಪಾಮೇರಮ್ *Funambulus palmarum*), ಪಟ್ಟೆ ಅಳಿಲು (ಫ್ಯುನಾಂಬುಲಸ್ ರಪ್ಟೋನಿ *Funambulus raptoni*), ಕಾಡು ಅಳಿಲು (ಫ್ಯುನಾಂಬುಲಸ್ ನ್ಯೂಮೇರಿಯನ್ *Funambulus pneumorian*), ಬೂದು ಅಳಿಲು (ಸೈಯೂರಸ್ ಇಂಡಿಕಸ್ *Siurus indicus*), ಬಯಲಿನ ಇಲಿ (ನಿಕೋಸಿಯ ಬೆಂಗಾಲೆನ್ಸಿಸ್ *Nicosia benghalensis*), ಹೆಗ್ಗಣ (ಸೆಸೋಸಿಯ ಬ್ಯಾಂಡಿಕೋಟ್ *Sesonia bandicoot*), ಮನೆ ಇಲಿ (ಮಸ್ ಡೆಕುಮಾನಸ್ *Mus decumanus*), ಮನೆ ಬುರ್ಗಿಲಿ (ಮಸ್ ಮಸ್ಕುಲಸ್ *Mus musculus*), ಕರಿ ಇಲಿ (ಮಸ್ ರ್‍ಯಾಟಸ್ *Mus rattus*), ಬೂದಿಬಣ್ಣದ ಕೌಲಿಲಿ (ಮಸ್ ಪ್ಲಾಟಿಥ್ರಿಕ್ಸ್ *Mus playthrix*), ಮರದ ಇಲಿ (ಮಸ್ ಒಲೆರೇಸಿಯಸ್ *Mus oleracea*), ಮುಳ್ಳು ಹಂದಿ (ಹಿಸ್ಟ್ರಿಕ್ಸ್ ಲ್ಯೂಕೂರ *Hystrix lucura*), ಸಾಮಾನ್ಯ ಮೊಲ (ಲೀಪಸ್ ರುಫಿಕಾಡೇಟಸ್ *Lepus ruficaudatus*) ಮತ್ತು ಕರಿ ಮೊಲ (ಲೀಪಸ್ ನೈಗ್ರಿಕಾಲಿಸ್ *Lepus nigfricollis*) ಪ್ರಮುಖವಾಗಿ ಜಿಲ್ಲೆಯಲ್ಲಿ ಕಂಡುಬರುತ್ತವೆ.

ಗೊರಸಿಗಳ ಗಣಕ್ಕೆ ಸೇರಿದ ಆನೆ (ಎಲಿಫಾಸ್ ಮ್ಯಾಕ್ಸಿಮಸ್ *Elephas maximus*), ದನಕರುಗಳು (ಬಾಸ್ ಇಂಡಿಕಸ್ *Bos indicus)* ಕುರಿ (ಓವಿಸ್ *Ovis*), ಆಡು, ಕಾಡೆಮ್ಮೆ (ಬೈಬಾಸ್ ಗೌರುಸ್ *Bibos gaurus*), ಕಾಡು ಆಡು, ಕೊಂಡ ಕುರಿಗಳು (ಟ್ರಾಸೆರಸ್ ಕ್ವಾಡ್ರಿಕಾರ್ನಿಸ್ *Tetracerus quadricornis*), ಸಾಂಬಾರ್ ಅಥವಾ ಕಡವೆಗಳು (ಸೆರ್ವಸ್ ಯೂನಿಕಲರ್ *Cervus unicolor*), ಸಾರಂಗ ಅಥವಾ ಚಿತ್ರಾಂಗ ಜಿಂಕೆಗಳು (ಆಕ್ಸಿಸ್ ಆಕ್ಸಿಸ್ *Axis axis*), ಬೊಗಳುವ ಜಿಂಕೆಗಳು (ಮಂಟೈಯಕಸ್ ಮಂಟ್ಜಾಕ್ *Muntiacusmuntjac*), ಕಾಡುಹಂದಿ (ಸಸ್ ಕ್ರಿಸ್ಟೇಟಸ್ *Sus cristatus*), ಕೂರಹಂದಿ (ಟ್ರಾಗ್ಯುಲಸ್ ಮೆಮಿನ್ನ Tragulus meminna), ಚಿಪ್ಪು ಹಂದಿ (ಮೇನಿಸ್ ಕ್ರಾಸಿಕಾಡೇಟಸ್ *Manis crossicaudatus*) ಮುಖ್ಯವಾಗಿ ಕಾಣಬರುತ್ತವೆ.

**ಸರೀಸೃಪ ವರ್ಗ**

ಈ ವರ್ಗಕ್ಕೆ ಸೇರಿದ ದೊಡ್ಡ ಪ್ರಾಣಿ ಮೊಸಳೆ (ಕ್ರೋಕೊಡೈಲಸ್ ಪಾಲುಸ್ಟ್ರಿಸ್ *Crocodylus palustris*), ಮನೆಗಳಲ್ಲಿ ವಾಸಿಸುವ ಹಲ್ಲಿ (ಹೆಮಿಡ್ಯಾಕ್ಟೈಲಸ್ ಬ್ರೂಕಿ *Hemidactylus brooki*), ಮೈದಾನ ಪ್ರದೇಶಗಳಲ್ಲಿರುವ ಹೆಂಟೆಗೊದ್ದ (ಕ್ಯಾಲೋಟಿಸ್ ವರ್ಸಿಕೋಲಾರ್ *Calotes versicolor*), ದೊಡ್ಡಹಲ್ಲಿ (ಪ್ಯಾಮೋವಿಲಸ್ ಡಾರ್ಸಾಲಿಸ್ *Palmovilus dorsalis*), ಗೋಸುಂಬೆ (ಊಸರವಳ್ಳಿ, ಕ್ಯಾಮೆಲಿಯಾನ್ ಜಿಲಾನಿಕಸ್ *Chamaeleon zeylanicus*), ಹಾವುರಾಣಿ (ಮಬೂಯ ಲೈಗೊಸೋಮ, ಸಿಮೊಫಸ್ ಮತ್ತು ರಿಸ್ಸೆಲ್ಲ *Mabuya ligosoma* ), ಉಡ (ವೆರಾನಸ್ ಮಾನಿಟರ್ *Veranus monitor*), ಹಾರುವ ಓತಿ (ಡ್ರಾಕೊ ಡಸ್ಸಿಮೆಯರಿ *Draco dossimeari*) ಇವುಗಳು ಕಂಡುಬಂದಿವೆ. ಈ ವರ್ಗದ ಇತರ ಪ್ರಾಣಿಗಳಲ್ಲಿ ನೆಲದ ಆಮೆ (ಟೆಸ್ಟುಡೋ ಎಲೆಗಾನ್ಸ್ *Testudo elegans*), ನೀರಾಮೆ (ಟ್ರೈಯೊನಿಕ್ಸ್ ಲೆಯಿತಿ *Trionyx leithi*) ಚಿಕ್ಕಹಾವು(ಟೈಫ್ಲಾಸ್ ಬ್ರಾಮಿನಸ್ *Typhlos braminus*), ಹೆಬ್ಬಾವು (ಪೈಥಾನ್ ಮಾಲ್ಯುರಸ್ *Pythonmolurus*), ನೇತ್ರಗೊಡ್ಡಿ ಹಾವು (ಎರಿಕ್ಸ್ ಕೊನಿಕಸ್ *Eryx conicus*), ಕೇರೆ ಹಾವು (ಟಿಯಸ್ ಮ್ಯೂಕೋಸಸ್ *Ptyas mucosus*), ಪಟ್ಟೆ ಹಾವು (ಓಲಿಗೊಡಾನ್ ವೆನೂಸ್ಟಸ್ *Oligodon venustus*), ನರೂಲಿ ಹಾವು (ಆಕ್ರೋಕೊರ್ಡಸ್ ಗ್ರಾನುಲೇಟಸ್ *Acrochordus granulatus*), ತೋಟದ ಹಾವು (ಲೈಕೊಡಾನ್ ಆಲಿಕಸ್ *Lycodon aulicus*), ನೀರು ಹಾವು (ನಾಟ್ರಿಕ್ಸ್ ಸ್ಟೋಲಟ *Natrix stolata*), ಹಸಿರು ಕಟ್ಟಿಗೆ ಹಾವು (ಮ್ಯಾಕ್ರೋಪಿಸ್ಥೊದಾನ್ ಪ್ಲಂಬಿಕೊಲಾರ್ *Macropisthodon plumbicolor*), ಚಿಂಗಿಹಾವು (ಬೊಯ್ಗ ಟ್ರೈಗೋನೇಟ *Boiga trigonata*), ಎಲೆ ಹಾವು (ಡ್ರೈಯೋಫಿಸ್ ಸಾಸೂಟಸ್ *Dryophis sasutus*), ವಿಷಪೂರಿತ ಹಾವುಗಳಲ್ಲಿ ಕಟ್ಟುಹಾವು (ಕ್ರೈಟ್) ನಾಗರಹಾವು (ನಾಜ ನಾಜ *Naja naja*) ಕಾಳಿಂಗ ಸರ್ಪ ಅಥವಾ ಕೃಷ್ಣ ಸರ್ಪ (ನಾಜ ಹನ್ನ *Naja henna*), ಮಂಡಲದ . ಹಾವು (ರಸ್ಸೆಲ್ಸ್ ವೈಪರ್ *Vipera russelli*), ಕಲ್ಲು ಹಾವು (ಎಕಿಸ್ ಕ್ಯಾರಿನೇಟಸ್ *Echis carinatus*), ಹಸಿರು ಮಂಡಲದ ಹಾವು (ಟ್ರೈಮೆರೆಸುರಸ್ ಗ್ರಾಮಿನಿಯಸ್ *Trimeresurus gramineus*) ಮುಖ್ಯವಾದವು.

**ದ್ವಿಚರಿ ವರ್ಗ**

ಈ ವರ್ಗದ ಪ್ರತಿನಿಧಿಗಳಾಗಿ ಕಪ್ಪೆ, ನೆಲಗಪ್ಪೆ (ಬಫೊ ಮೆಲನೊಸ್ಟಿಕ್ಟಸ್ *Bufo melanostictus* ಬಫೊ ಫರಗ್ಯೂಸೊನ್ನೆ *Bufo fergusoni*), ರಾನ (ರಾನ ಟೈಗೆರಿನ, ರಾನ ಸಯನೊಫ್ಲಿಕ್ಟಿಸ್, ರಾನ ಟೆಂಪೊರಾಲಿಸ್, ರಾನ ಲಿಮ್ನೊಕಾರಿಸ್, ರಾನ ಕೆರಳೆನ್ಸಿಸ್, *Rana tigerina, Rana cyanophlyctis, Rana temporalis, Rana limnocharis, Rana keralensis*), ಹೈಲ, ಮೈಕ್ರೋಹೈಲ (ಮೈಕ್ರೋಹೈಲ ಆರ್ನೋಟ, ಮೈಕ್ರೋಹೈಲ ರುಬ್ರ, *Mycrohyla ornata, Microhyla rubra*), ಮಾಕ್ಸಿಕ್ಸಾಲಸ್ (ಮ್ಯಾಕ್ಸಿಕ್ಸಾಲಸ್ ಸಾಕ್ಸಿಕೊಲ, ಮ್ಯಾಕ್ಸಿಕ್ಸಾಲಸ್ ಒಪಿಸ್ತೊರೋಡಸ್, *Maxixalus saxicola, Maxixalus opistorodus*), ಪಾಲಿಪೆಡೇಟಸ್ ಮ್ಯಾಕುಲೇಟರ್ (*Polypedatus maculatur*), ರೋಮೋಫ್ರೈನ್ ಬ್ರೆವಿಸೆರ್ಪ್ಸ, ಯುಪೆರೆಡಾನ್ ಸಿಸ್ಟೋಮ (*Uperodon systoma*) ಮೊದಲಾದ ದ್ವಿಚರಿವರ್ಗದ (ಆಂಫೀಬಿಯ) ಪ್ರಾಣಿಗಳನ್ನು ಜಿಲ್ಲೆಯಲ್ಲಿ ನೋಡಬಹುದು.

**ಮತ್ಸ್ಯವರ್ಗ**

ಜಿಲ್ಲೆಯಲ್ಲಿ ನದಿ ಕಟ್ಟೆ ಕೆರೆ ಮೊದಲಾದವುಗಳಲ್ಲಿ ನಾನಾ ತರಹದ ಮೀನುಗಳು ದೊರಕುತ್ತವೆ. ನದಿಗಳಲ್ಲಿ ದೊರಕುವ ಮೀನುಗಳಲ್ಲಿ ಮುಖ್ಯವಾದವು ಕಾರ್ಪ, .ಕಟ್ಲ ಮೀನು (ಕಾಟ್ಲಾ) ರೋಹಮೀನು ಅಥವಾ ಮಂಡಕಾರ್ಲು(ಲೇಬಿಯೋ ರೋಹಿತ *Labeo rohita*), ಕೆಮ್ಮೀನು (ಲೇಬಿಯೋ ಫಿಂಬ್ರಿಯೇಟಸ್ *Labeo fimbriatus*), ಕುರಿಮೀನು (ಲೇಬಿಯೋ ಕಾಲ್ಬಸ್ *Labeo calbus*), ಕಮ್ಮಚ್ಚಲು (ಲೇಬಿಯೋ ಕಲ್ಬಾಸು *Labeo kalbasu*), ಮಹೀರ್ ಮೀನು (ಬಾರ್ಬಸ್), ಕನ್ನಡಿ ಮೀನು (ಮಿರರ್ ಕಾರ್ಪ), ಗಂಡೆಮೀನು (ಪಂಕ್ಟಿಯಸ್ ಕರ್ನಾಟಿಕಸ್) ಮತ್ತು ಕೂರಲ ಮೀನು (ಪಂಕ್ಟಿಯಸ್ ಡೂಬಿಯಸ್ *Punctius dubius*). ಬೆಟ್ಟಗುಡ್ಡಗಳ ಝರಿಗಳಲ್ಲಿ ಅರ್ಜಿಮೀನು (ಸಿರಿನ ರೇಬ Cirrhina reba) ಮತ್ತು ಸುರಾಯಿ ಅಥವಾ ಮೃಗಾಲ ಮೀನು (ಸಿರಿನ ಮೃಗಾಲ *Cirrhina mrigala*) ಸಿಗುತ್ತವೆ. ಮೀಸೆ ಮೀನು (ಕ್ಯಾಟ್ ಫಿಷ್), ಬಾಳೆ ಮೀನು (ವಲಾಗೊ ಅಟ್ಟು *Wallago attu*), ಕೆತ್ತಲು ಮೀನು (ಮಿಸ್ಟಸ್ ಜಾತಿ) ಮೊದಲಾದ ದೊಡ್ಡ ಗಾತ್ರದ ಮೀನುಗಳು, ಚೇಳುಮೀನು (ಹೆಟೆರೋನ್ಯೂಸ್ಟಸ್ ಫಾಸಿಲಿಸ್ *Heteropneustes fossilis*), ಅಣಿಮೀನು (ಕ್ಲೇರಿಯಸ್ ಜಾತಿ) ಮುಂತಾದ ಸಣ್ಣ ಗಾತ್ರದ ಮೀನುಗಳೂ ಕೆರೆಕಟ್ಟೆಗಳಲ್ಲಿ ಸಾಮಾನ್ಯ. ಸಣ್ಣ ಗಾತ್ರದ ಮೀನುಗಳು ತಮ್ಮಲ್ಲಿನ ಆನುಷಂಗಿಕ ಶ್ವಾಸಾಂಗಗಳ ಸಹಾಯದಿಂದ ಗಾಳಿಯನ್ನೇ ನೇರವಾಗಿ ಉಸಿರಾಡಬಲ್ಲವು. ಹರಿಯುವ ನದಿ ತೊರೆಗಳಲ್ಲೂ ಕೆರೆಕಟ್ಟೆಗಳಲ್ಲೂ ಜೀವಿಸುವ ಮೀನುಗಳು ಇವೆ.

**ಜಿಲ್ಲೆಯಲ್ಲಿ ದೊರಕುವ ಇತರ ಮೀನು ವರ್ಗಗಳು**

Cyprinidae : ಬೆರಿಲಿಯಸ್ ಬೆಂಡೆಲಿಸಿಸ್ *Barilius bendelis*, ಆಂಬ್ಲಿಫಾರಿಂಗೊಡಾನ್ ಮೊಲ *Amblypharyngodon mola*, ಆಸ್ಪಿಡೊಪಾರಿಯ ಮೊರಾರ್ *Aspidoparia morar*, ರಸಬೊರಾ ಡಾನಿಕೊನಿಯಸ್ *Rasbora daniconius*, ಡೆನಿಯೋ ಅಕ್ವಿಪಿನ್ನೇಟಸ್ *Danio acquipinnatus*, ಎಸೊಮಸ್ ಬಾರ್ಬೇಟಸ್ *Esomus barbatus*, ಬಾರ್ಬಸ್ ಚೊಳ *Barbus chola*, ಬಾರ್ಬಸ್ ಜೆರ್ಡೋನಿ *Barbus jerdoni*, ಬಾರ್ಬಸ್ ಮೆಲನೊಸ್ಟಿಗ್ಮ *Barbus melanostigma*, ಬಾರ್ಬಸ್ ಕೋಲಸ್ *Barbus colus*, ಬಾರ್ಬಸ್ ಆಂಫಿಬಿಯಸ್ *Barbus amphibius*, ಬಾರ್ಬಸ್ ಡಾರ್ಸಾಲಿಸ್ *Barbus dorsalis*, ಬಾರ್ಬಸ್ ಸ್ಟಿಗ್ಮ *Barbus stigma*, ಬಾರ್ಬಸ್ ಟಿಕ್ಟೊ *Barbus ticto*, ಬಾರ್ಬಸ್ ಡಾಬ್‌ಸೊನಿ *Barbus dobsoni*, ಗರ ಮಲ್ಲಯು *Garra mullaya*, ಸಿರೈನ್ ಫ್ಯೂಲಂಗಿ *Cirrhina fulungee*, ಸಿರೈನ ರೆಬ *Cirrina reba*, ರೋಹತಿ ವಿಗೋರ್ಸಿ *Rohtee vigorsi*, ರೋಹತಿ ಕೊಟಿಯೊ *Rahtee cotio*, ಮತ್ತು ರೋಹತಿ ನೈಲಿ *Rohtee neilli*.

Cobitidae : ಲೆಪಿಡೊಸಿಫಾಲಿಕ್‌ತಿಸ್ ಗಂಟಿಯ *Lepidocephalichthys guntea*, ಮತ್ತು ಲೆಪಿಡೊಸಿಫಾಲಿಕ್‌ತಿಸ್ ತರ್ಮಾಲಿಸ್ *Lepidocephalichthys thermalis*.

Siluridae : ಒಂಪೊಕ್ ಬೈಮಾಕುಲೇಟಸ್ *Ompok bimaculatus*.

Bagaridae : ಮಿಸ್ಟಸ್ ಕವಸಿಯಸ್ *Mystus cavasius*, ಮತ್ತು ಮಿಸ್ಟಸ್ ಮಲಬಾರಿಕಸ್ *Mystus malabaricus*.

Ophicephalidae : ಒಫಿಸೆಫಾಲಸ್ ಸ್ಟ್ರಯಿಟಸ್ *Ophicephalus striatus*, ಮತ್ತು ಒಫಿಸೆಫಾಲಸ್ ಪಂಕ್ಟೇಟಸ್ *Ophicephalus punctatus*.

Ambassidae : ಅಂಬಾಸಿಸ್ ರಂಗ *Ambassis ranga*.

**ಅಕಶೇರುಕಗಳು** : ಅಕಶೇರುಕ ಅಥವಾ ಬೆನ್ನೆಲುಬಿಲ್ಲದ ಪ್ರಾಣಿವಂಶದ ಪ್ರಾಣಿಗಳು ಜಿಲ್ಲೆಯಲ್ಲಿ ವಿಪುಲವಾಗಿವೆ. ಪ್ರೋಟೋಜೋವ ವಂಶದ ಅಮೀಬ(*Amoeba*), ಯೂಗ್ಲಿನ(*Euglena*), ಪ್ಯಾರಮೀಸಿಯಂ (*Paramecium*), ಯುಪ್ಲಾಟಿಸ್

**(*Uplatis*)** ಮೊದಲಾದ ಹಲವು ಜೀವಜಾತಿಗಳು ಕೆರೆ ಕೊಳ ಮೊದಲಾದ ಜಲಾಶಯಗಳಲ್ಲಿ ಕಂಡುಬರುತ್ತವೆ. ಪ್ಲಾಸ್ಮೋಡಿಯಂ **(*Plasmodium*)**, ಎಂಟಮೀಬ ಕೋಲಿ **(*Entamoeba coli*)**, ಬ್ಯಾಲಂಟೇಡಿಯಂ **(*Balantadium*)**, ನಿಕ್ಟೋಟೀರಸ್ **(*Nictoteres*)** ಮೊದಲಾದ ಪರತಂತ್ರ ಜೀವಿಗಳೂ ಕಂಡುಬರುತ್ತವೆ.

ವಲಯವಂತ ವಂಶದ ಹುಳುಗಳ ಪ್ರತಿನಿಧಿಗಳಲ್ಲಿ ಎರೆಹುಳುಗಳು, ಜಿಗಣೆಗಳು, ಮೃದ್ವಂಗಿಗಳು ಅಪರಿಮಿತವಾಗಿವೆ. ಕಪ್ಪೆಚಿಪ್ಪಿನ ಪ್ರಾಣಿಗಳು ನದಿ ಮತ್ತು ದೊಡ್ಡ ಕೆರೆಗಳಲ್ಲಿ ವಾಸಿಸುತ್ತವೆ. ಪೈಲ ಜಾತಿಯ ಹಾಗೂ ಇತರ ಬಗೆಯ ಬಸವನ ಹುಳುಗಳು ತೋಟಗಳಲ್ಲಿ ಕೆರೆ ಕಾಲುವೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ಕೀಟವರ್ಗದಲ್ಲಿ ಮನುಷ್ಯನ ದವಸಧಾನ್ಯಗಳಿಗೆ ಹಾಗೂ ಸಾಗುವಳಿ ಬೆಳೆಗಳಿಗೆ ಉಪದ್ರವವನ್ನುಂಟುಮಾಡುವ ಅಸಂಖ್ಯಾತ ಕೀಟಗಳಿವೆ. ಮಲೇರಿಯಾ, ಆನೆಕಾಲು ರೋಗ ಮೊದಲಾದ ಕಾಯಿಲೆಗಳನ್ನು ಹರಡುವ ಸೊಳ್ಳೆಗಳಿವೆ. ಮಿಡತೆ, ಮೊರೆವ, ಚಿಟ್ಟೆ ಮತ್ತು ಪತಂಗ, ಕೊಡತಿಹುಳು, ಜೀರುಂಡೆ ಮೊದಲಾದ ಕೀಟಗಳಲ್ಲಿ ಅನೇಕ ಬಗೆಯ ಜಾತಿಗಳಿವೆ. ಮನುಷ್ಯರಿಗೆ ಉಪಕಾರಿಯಾದ ಜೇನುನೊಣ ಮತ್ತು ರೇಷ್ಮೆಹುಳು ಈ ವರ್ಗಕ್ಕೆ ಸೇರಿವೆ. ನಿಶಾಚರಿಗಳಾದ ಜರಿ ಅಥವಾ ಶತಪದಿ (ಸ್ಕೊಲೋಪೆಂಡ್ರ), ಸಾವಿರಕಾಲು ಪ್ರಾಣಿಗಳು (ತಪ್ಪುರಸುಂಟೆ), ಬಯಲು ಜೀವಿಗಳು, ಉಣ್ಣೆ, ಚಿಗಟಗಳು, ನಾಯಿ ಹಸು ಮೊದಲಾದ ಸ್ತನಿಗಳ ಮೇಲೆ ಪರತಂತ್ರ ಜೀವನ ಸಾಗಿಸುವ ಜೀವಿಗಳು. ಜೇಡರ ಹುಳುಗಳ ಜೀವ ಜಾತಿಗಳಂತೂ ಅಧಿಕ ಸಂಖ್ಯೆಯಲ್ಲೇ ಕಂಡುಬರುತ್ತವೆ. ಕಪ್ಪು ಜಿಂಕೆ ಅಥವಾ ಕೃಷ್ಣಮೃಗಗಳ ಸಂತಾನವು ಇಂದು ಅಳಿದು ಹೋಗುವ ದುಃಸ್ಥಿತಿಯಲ್ಲಿದೆ. ಅವುಗಳನ್ನು ಸಂರಕ್ಷಿಸುವ ಸಲುವಾಗಿ ರಾಣೆಬೆನ್ನೂರು ತಾಲೂಕಿನಲ್ಲಿ ಸುಮಾರು 119 ಚ.ಕಿ.ಮೀ. ಪ್ರದೇಶವನ್ನು ಕೃಷ್ಣಮೃಗಗಳ ಅಭಯಾರಣ್ಯವೆಂದು ಸಾರಲಾಗಿದೆ.

**ಪಕ್ಷಿವರ್ಗ**

ಜಿಲ್ಲೆಯಲ್ಲಿ ಪಕ್ಷಿ ಸಂಕುಲ ವೈವಿಧ್ಯ ಹಾಗೂ ಸಾಂದ್ರತೆಯಿಂದ ಕೂಡಿ ಆಕರ್ಷಕವಾಗಿದೆ. ಇದಕ್ಕೆ ಕಾರಣ ಅರಣ್ಯ ಪ್ರದೇಶದಲ್ಲಿ ಇರುವ ಅತಿ ಹೆಚ್ಚು ಪ್ರಮಾಣದ ಗಿಡಮರಗಳೂ ಕ್ರಿಮಿಕೀಟಗಳೂ, ಹಾಗೂ ಅರೆಮಲೆನಾಡು ಮತ್ತು ಮಲೆನಾಡು ಪ್ರದೇಶಗಳು ಪಕ್ಷಿಗಳ ವಾಸಕ್ಕೆ ಅನುಕೂಲವಾಗಿರುವುದು. ಪಕ್ಷಿಗಳು ಅನೇಕ ವಿಧದಲ್ಲಿ ಮಾನವನಿಗೆ ಸಹಾಯಕಾರಿಯಾಗಿವೆ. ಪಕ್ಷಿಗಳಲ್ಲಿನ ಕೆಲ ಜಾತಿಗಳಿಗೆ ಮುಖ್ಯ ಆಹಾರ ಕೀಟಗಳು. ಪಕ್ಷಿಗಳು ಮಿಡತೆ ಇತ್ಯಾದಿಗಳ ದಂಡನ್ನು ನಿರ್ನಾಮ ಮಾಡುವುದೇ ಅಲ್ಲದೆ ಕೆಲವೊಮ್ಮೆ ಈ ಕೀಟಗಳ ಮೊಟ್ಟೆಗಳನ್ನು ಸಹ ತಿನ್ನುತ್ತವೆ. ಗೂಬೆ, ಕೆಸ್ಟ್ರೆಲ್, ಗಿಡುಗ ಇತ್ಯಾದಿ ಪಕ್ಷಿಗಳು ಇಲಿ, ಹೆಗ್ಗಣ ಇತ್ಯಾದಿ ಬೆಳೆ ವಿನಾಶಕಗಳ ನಿಯಂತ್ರಣವನ್ನು ಅತಿ ಸಮರ್ಥ ರೀತಿಯಲ್ಲಿ ಸಾಧಿಸುತ್ತವೆ. ಪರಿಸರ ಶುದ್ಧತೆಗೆ (ಕಾಗೆ, ವಲ್ಚರ್, ಕೈಟ್ ಇತ್ಯಾದಿ ಪಕ್ಷಿಗಳು), ಸಸ್ಯಗಳ ಪರಾಗಸ್ಪರ್ಶ ಕ್ರಿಯೆಯಲ್ಲಿ, ಬೀಜ ಪ್ರಸಾರದಲ್ಲಿ ಹಾಗೂ ಮನುಷ್ಯರಿಗೆ ಆಹಾರವಾಗಿಯೂ ಪಕ್ಷಿಗಳು ಉಪಯೋಗಕ್ಕೆ ಬರುತ್ತದೆ.

ಈ ಜಿಲ್ಲೆಯ ಪಕ್ಷಿಗಳೆಲ್ಲವೂ ಹಾರುವ ಗುಂಪಿಗೆ ಸೇರಿದವು. ಇಲ್ಲಿಯೇ ವಾಸಿಸುವ ಪಕ್ಷಿಗಳಿದ್ದರೂ ನೆರೆಹೊರೆಯ ಜಿಲ್ಲೆಗಳಿಗೆ ವಲಸೆ ಹೋಗುವ ಪಕ್ಷಿಗಳೂ ಇವೆ. ಅಲ್ಲದೆ ಹೊರ ದೇಶದಿಂದ ಬರುವ ಪಕ್ಷಿಗಳೂ ಇವೆ. ಭಾರತದ ರಾಷ್ಟ್ರ ಪಕ್ಷಿಯೆಂದು ಪರಿಗಣಿಸಲಾಗಿರುವ ನವಿಲು (ಪೀ ಫೌಲ್, ಪ್ಯಾವೊ ಕ್ರಿಸ್ಟೇಟಸ್) ಗಾಲಿಫೀಸ್ ಕುಟುಂಬದ ಪ್ರತಿನಿಧಿ. ಇದು ಕಾಡುಗಳಲ್ಲಿ ಸಾಮಾನ್ಯವಾಗಿ ನೀರಿರುವ ಕಡೆಗಳಲ್ಲಿ ಕಂಡುಬರುತ್ತದೆ. ನವಿಲಿಗೆ ಹೆಚ್ಚು ಹಾರಲು ಆಗದಿದ್ದರೂ ಮರದಿಂದ ಮರಕ್ಕೆ ಹಾರಬಲ್ಲದು. ಸಾಕು ಕೋಳಿಗಳಿಗೆ ಪೂರ್ವಜ ಎನ್ನಿಸಿಕೊಂಡಿರುವ ಕೆಂಗುಬ್ಬದ ಕೋಳಿ (ರೆಡ್‌ಸ್ಪರ್ ಫೌಲ್, ಗ್ಯಾಲೋಪೆರ್ಡಿಕ್ಸ್ ಸ್ಪಾಡಿಸಿಯ) ಮತ್ತು ಕಂದು ಕಾಡುಕೋಳಿ (ಗ್ರೆ ಜಂಗ್ಲ್ ಫೌಲ್, ಗ್ಯಾಲಸ್ ಸೊನೆರಾಟಿ)ಗಳು ಜಿಲ್ಲೆಯಲ್ಲಿ ಕಾಣಬರುತ್ತವೆ. ಇವುಗಳ ವಾಸ ಸಾಮಾನ್ಯವಾಗಿ ಕಾಡಿನ ಪೊದರು. ಸಾಗುವಳಿ ಪ್ರದೇಶಕ್ಕೆ ಲಾವಕ್ಕಿಗಳು ಚಳಿಗಾಲದಲ್ಲಿ ಭೇಟಿ ನೀಡುತ್ತವೆ. ಕಪ್ಪೆದೆಯ ಲಾವಕ್ಕಿಗಳು ಸಾಮಾನ್ಯವಾಗಿ ಹುಲುಸಾದ ಹುಲ್ಲುಗಾವಲುಗಳಲ್ಲಿ ಹಾಗೂ ಸಾಗುವಳಿ ಪ್ರದೇಶದ ಸನಿಹದಲ್ಲಿ ಕಂಡುಬರುತ್ತವೆ. ಪರ್ಪಲ್ ಮೂರಹೆನ್ (ಪಾರ್ಫಿರಿಯೋ ಪಾರ್ಫಿರಿಯೋ), ಬಿಳಿ ಎದೆಯ ನೀರಕ್ಕಿ (ವೈಟ್ ಬ್ರೆಸ್ಟೆಡ್ ವಾಟರ್ ಹೆನ್, ಆಮೋರಾರ್ನಿಸ್ ಮೋನಿಕ್ಯೂರಸ್) ಕೆರೆಕಾಲುವೆಗಳ ದಂಡೆಗಳಲ್ಲಿ ದಟ್ಟವಾಗಿ ಬೆಳೆವ ಜೊಂಡುಗಳ ನಡುವೆ ವಾಸಿಸುತ್ತವೆ.

ಪಾರಿವಾಳ ಮತ್ತು ಕಪೋತಗಳು ತೆಳುವಾದ ಹಾಗೂ ಹೆಚ್ಚು ಬಲಯುತವಲ್ಲದ ಕೊಕ್ಕುಗಳನ್ನುಳ್ಳವು. ಕಾಳುಕಡ್ಡಿ ಹಣ್ಣುಗಳೇ ಇವುಗಳ ಆಹಾರ. ಇವು ಕೊಲಂಬಿಫಾರ್ಮೀಸ್ ಗಣಕ್ಕೆ ಸೇರಿದವು. ಪಾರಿವಾಳ (ರಾಕ್‌ಪಿಜನ್, ಕೊಲಂಬಿಯ ಲೀವಿಯ) ಸಾಮಾನ್ಯವಾಗಿ

ಮನೆ ಮಠ ಮತ್ತು ಮರಗಳ ಮೇಲೆ ವಾಸಿಸುತ್ತದೆ. ಇದನ್ನು ಕೆಲವರು ಮನೆಗಳಲ್ಲಿ ಸಾಕುವುದೂ ಉಂಟು. ದಪ್ಪ ಕೊಕ್ಕು ದೊಡ್ಡದೇಹದ ಹಸಿರು ಪಾರಿವಾಳ (ಕ್ರೋಕೋಪಸ್ ಫಿನಿಕಾಪ್ಟರಸ್) ಕಾಡುಗಳ ಮರಗಳ ಮೇಲೆಯೇ ವಾಸಿಸುತ್ತದೆ. ಇವುಗಳ ಕಾಲುಗಳು ಭೂಮಿಯ ಮೇಲೆ ಓಡಾಡಲು ಪರಿಪೂರ್ಣತೆ ಪಡೆದಿಲ್ಲ, ಬಿಳಿಯ ಚುಕ್ಕೆಗಳಿಂದ ಕೂಡಿದ ಬೂದು ಬಣ್ಣದ ಕಪೋತಗಳು (ಲಿಟ್ಲ್ ಬ್ರೌನ್ ಡೋವ್, ಸ್ಟ್ರೆಪ್ಟೋಪೀಲಿಯ ಸೆನೆಗಾಲೆನ್ಸಿಸ್) ಸಾಮಾನ್ಯವಾಗಿ ಬಯಲು ಪ್ರದೇಶದ ವಾಸಿಗಳು. ಇವು ಸಾಮಾನ್ಯವಾಗಿ ಸಾಗುವಳಿ ಪ್ರದೇಶಗಳಲ್ಲಿ ಒಂಟೊಂಟಿಯಾಗಿ ಅಥವಾ ಗುಂಪು ಗುಂಪಾಗಿ ಕಂಡುಬರುವುದೂ ಉಂಟು. ಇದೇ ಗಣದ ಇತರೆ ಪಕ್ಷಿಗಳೆಂದರೆ, ರಿಂಗ್ ಡೋವ್ (ಸ್ಟ್ರೆಪ್ಟೊಪೆಲಿಯಾ ಡಕೊಕ್ಟೊ) ಸ್ಪಾಟೆಡ್ ಡೋವ್ (ಸ್ಟ್ರೆಪ್ಟೊಪೆಲಿಯ ಕೈನೆಸಿಸ್) ಮತ್ತು ರೆಡ್ ಟರ್ಟಲ್ ಡೋವ್ (ಸ್ಟ್ರೆಪ್ಟೊಪೇಲಿಯಾ ಟ್ರೌಂಕೆಬರಿಕ). ಜಿಲ್ಲೆಯಲ್ಲಿ ಊರುಕಾಗೆ (ಹೌಸ್ ಕ್ರೋ, ಕಾರ್ವಸ್ ಸ್ಪ್ಲೆಂಡೆನ್ಸ್) ಮತ್ತು ಕಾಡುಕಾಗೆ (ಜಂಗ್ಲ್ ಕ್ರೋ, ಕಾರ್ವಸ್ ಮ್ಯಾಕ್ರೋರಿಂಕಸ್) ಎಂಬ ಎರಡು ಬಗೆಯ ಕಾಗೆಗಳಿವೆ. ಕಾಡು ಕಾಗೆಗಳು ಸಾಮಾನ್ಯವಾಗಿ ಕಾಡುಗಳಲ್ಲಿ ಕಂಡು ಬಂದರೂ ಆಗಾಗ್ಗೆ ಕಾಡುಗಳ ಸಮೀಪದಲ್ಲಿರುವ ಹಳ್ಳಿ ಊರುಗಳಲ್ಲಿಯೂ ಕಂಡುಬರುತ್ತವೆ. ಊರು ಕಾಗೆಯ ಕಂಠ ಬೂದು ಬಣ್ಣದಾಗಿದ್ದರೆ ಕಾಡುಕಾಗೆಯಲ್ಲಿ ಅದು ಕಪ್ಪಾಗಿರುತ್ತದೆ. ಕವಿಗಳ ಗಮನವನ್ನು ಅನಾದಿಕಾಲದಿಂದಲೂ ಸೆಳೆದಿರುವ ಭಾರತದ ಕೋಗಿಲೆಗಳು (ಕೊಯೆಲ್, ಯುಡೈನಮಿಸ್ ಸ್ಕೋಲೋಪೇಸಿಯ) ಕಾಡು, ತೋಟಗಳಲ್ಲಿ ಇವೆ. ಇವು ಸಾಮಾನ್ಯವಾಗಿ ಕಾಗೆಗಳ ಗೂಡುಗಳಲ್ಲಿ ಮೊಟ್ಟೆಗಳನ್ನಿಟ್ಟು ಕಾಗೆಗಳ ಸಹಾಯದಿಂದ ತಮ್ಮ ಮೊಟ್ಟೆಗಳಿಗೆ ಕಾವು ಕೊಡಿಸುತ್ತವೆ. ಸಾಕುತಾಯಿ ಕಾಗೆ ಆ ಮೊಟ್ಟೆಗಳನ್ನು ತನ್ನ ಮೊಟ್ಟೆಗಳೇ ಎಂದು ಭ್ರಮಿಸಿ ಕಾವು ಕೊಟ್ಟು ಮರಿಗಳು ಮೊಟ್ಟೆಯಿಂದ ಹೊರಬಂದ ಮೇಲೆ ಗುಟುಕುಕೊಟ್ಟು ಸಾಕುತ್ತದೆ. ದೊಡ್ಡದಾಗಿ ಬೆಳೆದ ಮರಿಗಳು ಕೋಗಿಲೆಯ ಮರಿಗಳೆಂದು ತಿಳಿದ ಮೇಲೆ ಅದು ಅವನ್ನು ಓಡಿಸಿಬಿಡುತ್ತದೆ. ಕಾಡು, ತೋಪು, ತೋಟಗಳಲ್ಲಿ ಕಂಡು ಬರುವ ಸಿಟ್ಟಾಸಿ ಫಾರ್ಮೀಸ್ ಗಣಕ್ಕೆ ಸೇರಿದ ಹಸಿರು ಗಿಳಿ (ಸಿಟ್ಟಾಕುಲ ಕ್ರಮೇರಿ) ಎಲ್ಲಾ ಕಡೆ ಕಂಡು ಬರುತ್ತದೆ. ಸಿಟ್ಟಾಕುಲ ಸೈನೋಸಿಫಾಲ ಈ ಜಾತಿ ಅಪರೂಪವಾಗಿ ಕಂಡುಬರುತ್ತದೆ.

ಗೂಬೆಗಳ ನಿಶಾಚರ ಪಕ್ಷಿಗಳು. ಇವು ಸ್ಟ್ರಿಂಜಿಫಾರ್ಮೀಸ್ ಗಣಕ್ಕೆ ಸೇರಿದವು. ರಾತ್ರಿ ವೇಳೆಯಲ್ಲಿ ಪುಟ್ಟ ಅಳಿಲು, ಇಲಿ ಮುಂತಾದವುಗಳನ್ನು ಹಿಡಿದು ತಿಂದು ಜೀವಿಸುತ್ತವೆ. ಪಾಳುಮನೆ, ಸಮಾಧಿ, ಮಂಟಪಗಳಲ್ಲೇ ಇವುಗಳ ವಾಸ. ಅಥೇನಿ ಬ್ರಾಮ (ಚುಕ್ಕೆ ಗೂಬೆ) ಮತ್ತು ಸ್ಟ್ರಿಕ್ಸ್ ಅಸೆಲೇಟಮ್ (ಮರದ ಮಚ್ಚೆ ಗೂಬೆ) ಜಾತಿಗಳನ್ನು ಕಾಣಬಹುದು. ಮಾಂಸ ಭಕ್ಷಿಗಳಾದ ಗರುಡ, ಗಿಡುಗ, ಹದ್ದು, ರಣಹದ್ದು ಮುಂತಾದವು ಫಾಲ್ಕನಿ ಫಾರ್ಮೀಸ್ ಗಣಕ್ಕೆ ಸೇರಿದವು. ಇವುಗಳ ಕೊಕ್ಕು ಚಿಕ್ಕವು ಹರಿತವಾದವು, ಬಲಯುತವಾದವು, ಕಾಲುಬೆರಳುಗಳಲ್ಲಿರುವ ನಖಗಳೂ ಬಲವಾದುವುದು. ಇವು ಸಾಮಾನ್ಯವಾಗಿ ಸತ್ತ ಪ್ರಾಣಿಗಳ ಮಾಂಸವನ್ನು ಭಕ್ಷಿಸುತ್ತವೆ. ಇವು ದೊಡ್ಡ ದೊಡ್ಡ ಮರಗಳ ಮೇಲೆ ಬೆಟ್ಟಗಳ ಶಿಖರಗಳ ಮೇಲೆ ವಾಸಿಸುವುವು. ಈ ಗಣದ ಪಕ್ಷಿಗಳೆಂದರೆ ಪರಯಾ ಕೈಟ್ (ಮಿಲ್ವಸ್ ಮೈಗ್ರೆನ್ಸ್) ಬ್ರಾಹ್ಮಿಣಿ ಕೈಟ್ (ಹೆಲಿಯಾಸ್ಟರ್ ಇಂಡಸ್) ಅಥವಾ ಗರುಡಪಕ್ಷಿ, ಬಿಳಿಯ ರಣಹದ್ದು (ಸ್ಕ್ಯಾವೆಂಜರ್ ವಲ್ಚರ್), ಹದ್ದು (ಟಾನಿ ಈಗಲ್) ಮತ್ತು ರಣಹದ್ದು (ವಾಯಿಟ್ ಬ್ಯಾಕ್ಡ್ ವಲ್ಚರ್).

ಆನ್ಸೆರಿಫಾರ್ಮೀಸ್ ಗಣಕ್ಕೆ ಸೇರಿದ ಬಾತು ಕೋಳಿಗಳು ನೀರಾವರಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳ ಕೊಕ್ಕು ಅಗಲವಾಗಿರುವುದರಿಂದ ಇವು ಮೀನುಗಳನ್ನು ಸುಲಭವಾಗಿ ಹಿಡಿಯಬಲ್ಲವು. ಒಂದು ಜಾತಿಯ ಬಾತುಕೋಳಿಯನ್ನು ಹಳ್ಳಿಗಳಲ್ಲಿ ಸಾಕುವುದೂ ಉಂಟು. ಕೆಲವು ಬಗೆಯ ಬಾತುಕೋಳಿಗಳು ಈಜುವುದೇ ಅಲ್ಲದೆ ನೀರಿನಲ್ಲಿ ಮುಳುಗಿ ಮೀನುಗಳನ್ನು ಹಿಡಿಯಬಲ್ಲವು ಮತ್ತು ಒಂದೆಡೆಯಿಂದ ಮತ್ತೊಂದೆಡೆಗೆ ಹಾರಲೂ ಬಲ್ಲವು. ನಕ್ತ ಅಥವಾ ಹೆಣಿಗೆ ಬಾತು (ನಕ್ತ, ಸಾರ್ಕಿಡಿಯೊರ್ನಿಸ್ ಮೆಲನೋಟಸ್, ಜಲಾಶಯಗಳಲ್ಲಿ ಸಾಮಾನ್ಯವಾಗಿ ಇರುವ ಪಕ್ಷಿ. ಟೇಲ್ ಅಥವಾ ಅರಳೆಬಾತು (ನೆಟಾಪಸ್ ಕೊರೊಮಂಡೆಲಿಯಾನಸ್) ಎಲ್ಲೆಡೆ ದೊರೆಯುವ ಬಾತುಕೋಳಿಯಾಗಿದೆ. ಸಿಕೋನೈಯಿಫಾರ್ಮಿಸ್ ಗಣಕ್ಕೆ ಸೇರಿದ ಕಬ್ಬಾರೆ, ಕೊಕ್ಕರೆ ಕ್ರೌಂಚಪಕ್ಷಿ, ನಾರಾಯಣಿ ಪಕ್ಷಿ ಮೊದಲಾದವು ಜಲಾಶಯದಲ್ಲಿ ಅಥವಾ ಅದರ ಬಳಿ ವಾಸಿಸತಕ್ಕ ಪಕ್ಷಿಗಳು. ಇವುಗಳ ಹಾರುವ ಶಕ್ತಿ ಅಗಾಧ. ಕಾಲುಗಳು, ಕಾಲುಬೆರಳುಗಳು ಕೊಕ್ಕು ಮತ್ತು ಕುತ್ತಿಗೆ ಎಲ್ಲವೂ ಉದ್ದ. ಅನೇಕವು ವಲಸೆಗಾರ ಹಕ್ಕಿಗಳು. ಆರ್ಡೇಯ ಸಿನೇರಿಯ (ಗ್ರೇ ಹೆರಾನ್) ಎಂಬ ಜಾತಿಯ ಕ್ರೌಂಚಪಕ್ಷಿ ಜಿಲ್ಲೆಯ ಎಲ್ಲಾ ಕಡೆ ಇದ್ದು ಅದರ ಮುಖ್ಯ ಆಹಾರ ಮೀನು. ಕಬ್ಬಾರೆ ಹಕ್ಕಿಗಳು ಒಂಟೊಂಟಿಯಾಗಿ ಕೊಳ, ನದಿ, ಕೆರೆಗಳ ಬಳಿ ವಾಸಿಸುತ್ತವೆ. ಒಮ್ಮೊಮ್ಮೆ ಅಲುಗಾಡದೆ ನಿಂತಿರುತ್ತವೆ. ಆರ್ಡೆಯೋಲ ಗ್ರೇಯಿ (ಪಾಂಡ್ ಹೆರಾನ್) ಜಾತಿಯ ಕಬ್ಬಾರೆ ಅಥವಾ ನಾರಾಯಣಿ ಪಕ್ಷಿ ಬತ್ತದ ಗದ್ದೆಯಲ್ಲಿ ಇರುವುವು. ಆನಸ್ಟೋಮಸ್ (ಓಪನ್‌ಬಿಲ್ಡ್ ಸ್ಟಾರ್ಕ) ಎಂಬ ಕಬ್ಬಾರೆಯನ್ನು ಅಥವಾ ಬಕಪಕ್ಷಿಯನ್ನು ಜೌಗು ಪ್ರದೇಶದಲ್ಲಿ ಅದರ ಅಗಲವಾದ ಕೊಕ್ಕಿನ ಸಹಾಯದಿಂದ ಗುರುತಿಸಬಹುದು. ಈ

ಗಣದ ಇತರ ಪ್ರಮುಖ ಪಕ್ಷಿಗಳಲ್ಲಿ ಕ್ಯಾಟಲ್ ಎಗ್ರೆಟ್ (ಬುಬುಲಸ್ ಐಬಿಸ್) ಮತ್ತು ಕುತೂಹಲಕಾರಿಯಾದ ಇರುಳ ಕೊಕ್ಕರೆ (ನೈಟ್ ಹೆರಾನ್, ನಿಕ್ಟಿಕೊರಾಕ್ಸ್ ನಿಕ್ಟಿಕೊರಾಕ್ಸ್) ಕೂಡ ಸೇರಿದೆ.

**ಜಿಲ್ಲೆಯಲ್ಲಿ ಕಾಣಬರುವ ಇತರ ಪಕ್ಷಿಗಳ ಪಟ್ಟಿ ಹೀಗಿದೆ:**

ಲಿಟಲ್ ಗ್ರೀಬ್, ಮುಳುಗು ಹಕ್ಕಿ; Little Grebe, *Podiceps ruficollis*, ಕಂದು ಪೆಲಿಕನ್, ನೀರುಕೋಳಿ; Grey Pelican, *Pelecanus philippensis*, ಲಿಟಲ್ ಕಾರ್ಮೊರಂಟ್, ಸಮುದ್ರ ಪಕ್ಷಿ Little Cormorant, *Phalacrocorax niger;* ಡಾರ್ಟರ್, ಜಾಲಪಾದ ಪಕ್ಷಿ Darter, *Anhinga rufa;* ಜೈಂಟ್ ಹೆರನ್, ನೀರು ಹಕ್ಕಿ ಕ್ರೌಂಚಪಕ್ಷಿ, Giant Heron, *Ardea goliath;* ಪರ್ಪಲ್ ಹೆರಾನ್, ನೀರುಹಕ್ಕಿ Purple Heron, *Ardea purpurea;* ಲಾರ್ಜ್ ಎಗ್ರೆಟ್, ಬಿಳಿಯ ಹೆರನ್ ಪಕ್ಷಿ, Large Egret - *Egretta alba;* ಮೀಡಿಯನ್ ಎಗ್ರೆಟ್; Median Egret - *Egretta intermedia;* ಲಿಟ್ಲ್ ಎಗ್ರೆಟ್; Little Egret - *Egretta garzetta;* ಚೆಸ್ಟ್‌ನಟ್ ಬಿಟ್ಟರ್ನ್, ಜೌಗುಪ್ರದೇಶದ ಪಕ್ಷಿ, Chestnut Bitern - *Ixobrychus striatus;* ಪೈಂಟೆಡ್ ಸ್ಟಾರ್ಕ್, ಕೊಕ್ಕರೆ, Painted Stork, *Mycteria leucocephala*; ಬಿಳಿ ಕತ್ತಿನ ಸ್ಟಾರ್ಕ್, ಬೆಳ್ಳಕ್ಕಿ, white necked stork, *Coconia episcopus;* ವೈಟ್ ಐಬಿಸ್, ಕೊಕ್ಕರೆಯಂಥ ಪಕ್ಷಿ, White ibis - *Threskiornis aethiopica*; ವೈಟ್ ಸ್ಟಾರ್ಕ್ ಬಕಪಕ್ಷಿ White stork - *Ciconia ciconia;* ಬ್ಲಾಕ್ ಐಬಿಸ್, Black Ibis - *Pseudibis papillosa;* ಗ್ಲಾಸಿ ಐಬಿಸ್ Glossy Ibis - *Plegadis falcinellus;* ಫ್ಲೆಮಿಂಗೋ, Flamingo - *Phoenicopterus roseus;* ಸ್ಪೂನ್ ಬಿಲ್, Spoon bill - *Platalea leucorodia;* ಬಾರ್ ಹೆಡೆಡ್ ಗೂಸ್, ಹೆಬ್ಬಾತು, Bareheaded Goose - *Anser indicus;* ಲೆಸ್ಸರ್ ವಿಷಲಿಂಗ್ ಟೀಲ್, ಬಾತುಕೋಳಿ, Lesser whistling Teal - *Dendrocygna javanica;* ಬ್ರಾಹ್ಮಿನಿ ಡಕ್, ಬಾತುಕೋಳಿ, Brahminy Duck - *Tadorna ferruginea;* ನಾರ್ದನ್ ಪಿನ್‌ಟೈಲ್, ಚೂಪುಬಾಲದ ಬಾತುಕೋಳಿ, Northern pintail - *Anas acuta;* ಕಾಮನ್ ಟೀಲ್, ಸಿಹಿನೀರಿನ ಬಾತುಕೋಳಿ, Common Teal - *Anas crecca;* ಲಿಟ್ಲ್‌ಗ್ರೀನ್ ಬಿಟ್ಟರ್ನ್, Little Bittern - *Butorides striatus;* ಯೆಲ್ಲೊ ಬಿಟ್ಟರ್ನ್, Yellow Bittern - *Iobrychus sinensis;* ಸ್ಪೂನ್‌ಬಿಲ್ಡ್ ಡಕ್, Spoon Billed Duck - *Anas poecilorhyncha*; ಗಾಡ್‌ವಾಲ್, Gadwall - *Anas strapera*; ವಿಜನ್, Wigeon - *Anas penelope;* ಗಾರ್ಗನಿ, Garganey - *Anas querquedula*; ನಾರ್ದನ್ ಶೊವೆಲ್ಲರ್, Northern Shoveler - *Anas clypeata;* ಡೆಮೊಯಿಸಿಲ್ ಕೊಕ್ಕರೆ, Demoiselle Crane - *Grus virgo*; ಕೂಟ್, Coot - *Fulica atra*; ಗ್ರೇಟ್ ಇಂಡಿಯನ್ ಬಸ್ಟರ್ಡ್, Great Indian Bustard - *Choriotis nigriceps* Rare; ಫೆಸೆಂಟ್ ಟೈಲ್ಡ್ ಜಕಾನ, Pheasant Tailed Jacana - *Hydrophasianus chirugus*; ಬ್ರಾಂಜ್ ವಿಂಗ್ಡ್ ಜಕಾನ, Bronze Winged Jacana - *Metopidius indicus*; ರೆಡ್ ವಾಟಲೆಡ್ ಲ್ಯಾಪ್‌ವಿಂಗ್, Red Wattled Lapwing - *Venellus indicus*; ಯಲ್ಲೊ ವಾಟಲೆಡ್ ಲ್ಯಾಪವಿಂಗ್, Yellow wattled Lapwing - *Venellus malabaricus*; ಲಿಟ್ಲ ರಿಂಗಡ್ ಪ್ಲೋವರ್, Little ringed plover - *Pluvialis fulva;* ಕಾಮನ್ ಸ್ಯಾಂಡ್‌ಪೈಪರ್, Common Sandpiper - *Tringa hypoleucos;* ಲಿಟ್ಲ್ ಸ್ಟಿಂಟ್, ಸಣ್ಣ ಜಾತಿಯ ಸ್ಯಾಂಡ್ ಪೈಪರ್ ಹಕ್ಕಿ, Little Stint - *Calidris minutus*; ವುಡ್ ಸ್ಯಾಂಡ್ ಪೈಪರ್, Wood Sandpiper - *Tringa glareola;* ಬಾರ್ ಟೈಲ್ಡ್ ಗಾಡ್‌ವಿಟ್, Bar tailed Godwit - *Limosa lapponica*; ಬ್ಲಾಕ್ ಟೈಲ್ಡ್ ಗಾಡ್‌ವಿಟ್ Black tailed Godwit - *Limosa limosa*; ರೆಡ್ ಶಾಂಕ್, Red shank - *Tringa totanus*; ಗ್ರೀನ್ ಶಾಂಕ್, Green shank - *Tringa nebularia;* ಯುರೇಷಿಯನ್ ಕರಲ್ಯೂ, Eurasian curlew - *Numenius arquata;* ಪೈಂಟೆಡ್ ಸ್ನೈಪ್; ಉಲ್ಲಂಗಿ ಹಕ್ಕಿ, Painted Snipe- *Rostratula benghalensis;* ಬ್ಲಾಕ್ ವಿಂಗಡ್ ಸ್ಟಿಲ್ಟ್, Black winged Stilt- *Himantopus himantopus;* ಕಾಮನ್ ಸ್ನೈಪ್ Common Snipe - *Gallinago gallinago;* ಸ್ಟೋನ್

ಕರಲ್ಯೂ, Stone Curlew-*Burhinus oedicnemus*; ಇಂಡಿಯನ್ ಕುರ್‌ಸರ್, Indian Courser - *Cursorius coromandelicus*; ಲಿಟ್ಲ್ ಪ್ರಾಟಿನ್‌ಕೋಲ್, Little Pratincole - *Glareola lactea;* ಸ್ಯಾಂಡ್ ಗ್ರೌಸ್ Sand Grouse - *Pterocles exustus*; ರಿವರ್ ಟರ್ನ್, River Tern - *Sterna aurantia;* ಗ್ರೇ ಪ್ಯಾಟ್ರಿಡ್ಜ್, Grey Patridge - *Francolinus pondicerianus;* ರೈನ್ ಕ್ವೈಲ್, ಲಾವಕ್ಕಿ Rain Quail - *Coturnix coromandelica*; ಗ್ರೇ ಕ್ವೈಲ್ Grey Quail - *Coturmix coturnix;* ಕೂಕಲ್, Coucal - *Centropus sinensis*; ಬ್ರೈನ್ ಫೀವರ್ ಬರ್ಡ್, Brainfever Bird - *Cuculus varius*; ಬ್ಲಾಸಂ ಹೆಡೆಡ್ ಪ್ಯಾರಾಕೀಟ್ ಗಿಳಿ, Blossom headed parakeet - *Psittacula cyanocephala*; ಬ್ಲಾಕ್ ಹೆಡೆಡ್ ಕೂಕೂ ಶ್ರೈಕ್, Black headed Cuckoo Shrike - *Coracina melanoptera;* ಸ್ಮಾಲ್ ಗ್ರೀನ್ ಬಿಲ್ಡ್ Malkoha (Small Green billed) - *Rhopodytes viridirostris*, ರೂಪಸ್ ಬ್ಯಾಕ್‌ಡ್ ಶ್ರೈಕ್, Rufous backed Shrike - *Lanius schach*; ಬೇ ಬ್ಯಾಕ್‌ಡ್ ಶ್ರೈಕ್, Bay backed Shrike - *Lanius exubitor;* ಬ್ಲಾಕ್ ಡ್ರೊಂಗೋ, Black Drongo, *Dicrurus adsimilis*; ವೈಟ್ ಬೆಲ್ಲೀಡ್ ಡ್ರೊಂಗೋ, White bellied Drongo - *Dicrurus caerulescens;* ಸ್ಮಾಲ್ ಬ್ಲ್ಯೂ ಕಿಂಗ್‌ಫಿಷರ್, Small blue Kingfisher - *Alcedo atthis;* ವೈಟ್ ಬ್ರೆಸ್ಟೆಡ್ ಕಿಂಗ್ ಫಿಷರ್, White breasted Kingfisher - *Hylcyon smyrnensis;* ಪೈಡ್ ಕಿಂಗ್‌ಪಿಷರ್, Pied Kingfisher - *Ceryle rudis*; ಸ್ಟಾರ್ಕ್ ಬಿಲ್ಡ್ ಕಿಂಗ್‌ಪಿಸರ್, Stork billed Kingfisher - *Pelargopsis capensis;* ಸ್ಮಾಲ್ ಮಿನಿವೆಟ್, Small Minivet - *Pericrocotus cinnnamomeus*; ಸ್ಕಾರ್ಲ್ ಮಿನಿವೆಟ್, Scarl Minivet - *Pericrocotus flammeus*; ಗ್ರೀನ್ ಬೀ ಈಟರ್, Green Bee eater-*Merops orientalis*; ಇಂಡಿಯನ್ ರೋಲರ್ Indian Roller - *Coracias benghalensis*; ಹೂಪೆ, Hoopoe - *Upupa epops*; ಗ್ರೇ ಹಾರ್ನ್‌ಬಿಲ್, Grey Hornbill - *Tokus birostris*; ಕಾಪರ್‌ಸ್ಮಿತ್, Coppersmith - *Megalaima haemacephala*; ಗ್ರೀನ್ ಬ್ಯಾಕ್‌ಡ್ ವುಡ್‌ಪೆಕ್ಕರ್, Green backed wood peckər - *Dinopium benghalensis*; ಮರಾಠಾ ವುಡ್ ಪೆಕ್ಕರ್, Mahratta Wood pecker - *Picoides maharattensis*; ಪಿಗ್ಮಿ ವುಡ್ ಪೆಕ್ಕರ್, Pigmy woodpecker - *Picoides nanus*; ಕ್ರೆಸ್ಟೆಡ್ ಲಾರ್ಕ, Crested Lark - *Galerida cristata*; ಸ್ಕೈಲಾರ್ಕ್, Skylark - *Alauda gulgula;* ಇಂಡಿಯನ್ ಪಿಪಿಟ್, Indian pipit - *Anthus novaeseelandiae;* ಟಿಕ್ಕೆಲ್ಸ್ ಫ್ಲೈಕ್ಯಾಚರ್, Tickells Flycatcher - *Cyornis tickelliae;* ಮ್ಯಾಗ್‌ಪಿ ರಾಬಿನ್, Magpie Robin - *Copsychus saularis*; ಸ್ಟೋನ್ ಚಾಟ್, Stone Chat - *Saxicola torquata;* ಪೈಡ್ ಬುಷ್‌ಚಾಟ್, Pied Bushchat - *Saxicola caprata*; ಇಂಡಿಯನ್ ರಾಬಿನ್; Indian Robin - *Saxicoloides fulicata*; ಬ್ಲಾಕ್ ರೆಡ್‌ಸ್ಟಾರ್ಟ್, Black Redstart - *Phoenicurus ochruros*; ಬ್ರೌನ್ ರಾಕ್‌ಚಾಟ್, Brown Rockchat - *Cercomela fusca;* ಗ್ರೇ ಟಿಟ್, Grey Tit - *Parus major*; ತಿಕ್‌ಬಿಲ್ಡ್ ಫ್ಲವರ್‌ಪೆಕ್ಕರ್, Thickbilled Flowerpecker - *Dicaum agile*; ವೈಟ್ ಐ, White eye - *Zosterops palpebrosa*; ಪರ್ಪಲ್ ಸನ್‌ಬರ್ಡ್ Purple Sunbird - *Nectarinia asiatica*; ಪರ್ಪಲ್ ರಂಪೆಡ್ ಸನ್‌ಬರ್ಡ್; Purple rumped Sunbird - *Nectarinnia zeylonica*; ಹೌಸ್ ಸ್ಪ್ಯಾರೊ, House Sparrow - *Passer domesticus*; ಬಯ ವೀವರ್, Baya Weaver - *Ploceus Phillippinus*; ಬ್ಲಾಕ್ ಥ್ರೋಟೆಡ್ ವೀವರ್, Black Throated Weaver - *Ploceus benghalensis*; ವೈಟ್ ಥ್ರೋಟೆಡ್ ವೀವರ್, White throated Munia - *Lonchura malabarica;* ಸ್ಪಾಟೆಡ್ ಮ್ಯುನಿಯ, Spotted Munia - *Lonchura punctulata*; ವೈಟ್ ವ್ಯಾಗ್‌ಟೈಲ್, White Wagtail - *Motacilla alba*; ಯೆಲ್ಲೊ ವ್ಯಾಗಟೈಲ್, Yellow Wagtail - *Motacilla flava*; ಲಾರ್ಜ್ ಪೈಡ್ ವ್ಯಾಗ್‌ಟೈಲ್, Large pied wagtail - *Motacilla moderaspatensis*; ಕೆಸ್ಟ್ರೆಲ್, ಗಿಡುಗ, Kestrel - *Falco tinnunculus*; ಲಾಗ್ಗರ್ ಫಾಲ್ಕನ್, ದೊಡ್ಡ ಗಿಡುಗ, Laggar Falcon - *Falco jugger*; ಬ್ಲಾಕ್ ವಿಂಗಡ್ ಕೈಟ್, Black Winged Kite - *Elanus*

*caeruleus*; ಲೀಫ್ ಬರ್ಡ್, Jerdons leaf bird - *Chloropsis cochichinensis*; ಗ್ರೇಟ್ ಪೈಡ್ ಹಾರ್ನಬಿಲ್, Great Pied Hornbill - *Buceros bicornis*; ಇಂಡಿಯನ್ ನೈಟ್‌ಜಾರ್, Indian Nightjar - *Caprimulgus asiaticus;* ಮಾರ್ಷ್ ಹ್ಯಾರಿಯರ್, Marsh Harrier - *Circus aeruginosus;* ಕಿಂಗ್ ವಲ್ಚರ್, ರಣಹದ್ದು, King vulture - *Sarcogyps calvus*; ಫಿಂಚ್ ಲಾರ್ಕ್, Black Bellied Finch Lark - *Eremopterix guisea*; ಫಿಂಚ್‌ಲಾಕ್, Rufoustailed Finch Lark - *Ammomanes phoenicorus*; ಟೋಡ್ ಲಾಕ್, Short Toed Lark - *Caledrella cinerea;* ಮಾರ್ಟಿನ್, Dusky Crag Martin - *Hirundo concolor*; ಸ್ವಾಲೋ, Wiretailed Swallow - *Hirundo smithi;* ಸ್ವಾಲೋ, Redrumped Swallow - *Hirundo daurica;* ಹೌಸ್‌ಸ್ವಿಫ್ಟ್, House Swift - *Apus affinis;* ಪಾಮ್ ಸ್ವಿಫ್ಟ್, Palm Swift - *Cypsiurus parvus*; ಗೋಲ್ಡನ್ ಒರಿಯೋಲ್, Golden Oriole - *Oriolus oriolus*; ರೋಸಿ ಪ್ಯಾಸ್ಟರ್, Rosy Pastor - *Sturnus roseus*; ಬ್ರಾಹ್ಮಿನಿ ಮೈನಾ, Brahminy Myna - *Sturnus pagadarum*; ಕಾಮನ್ ಮೈನಾ, Common Myna - *Acridotheres tristis*; ಜಂಗಲ್ ಮೈನಾ, Jungle Myna - *Acridotheres fuscus*; ಬ್ಯಾಂಕ್ ಮೈನಾ, Bank Myna - *Acridotheres gingianus*; ಜಂಗಲ್ ಮೈನಾ, Southern Jungle Myna - *Acridotheres fuscus*; ಬುಲ್‌ಬುಲ್, Red Vented Bulbul - *Pycnonnotus cafer*; ವಿಷ್ಕರ್ಡ್ ಬುಲ್‌ಬುಲ್, Red Whiskered Bulbul - *Pycnonnatus jacosus*; ವೈಟ್ ಬ್ರೋವ್ಡ್ ಬುಲ್‌ಬುಲ್, White browed Bulbul - *Pycnonotus luteolus*; ಬ್ಯಾಬ್ಲರ್, Jungle Babbler - *Turdoides striatus*; ಕಾಮನ್ ಬಾಬ್ಲರ್ Common Babbler - *Turdoides caudatus;* ಗ್ರೇ ಬ್ಯಾಬ್ಲರ್, Large Grey Babbler - *Turdoides malcolmi*; ಆಷಿರೆನ್ ವಾರ್ಬರ್, Ashy Wren Warber - *Prinia socialis*; ಟೇಲರ್ ಬರ್ಡ್, Tailor Bird - *Orthotomus sutorius;* ರೆಡ್‌ಬ್ರೆಸ್ಟೆಡ್ ಫ್ಲೈಕ್ಯಾಚರ್, Red Breasted Fly Catcher - *Muscicapa parva*; ಪ್ಯಾರಡೈಸ್ ಫ್ಲೈಕ್ಯಾಚರ್ Paradise Flycatcher - *Terpsiphone paradisi*; ಬ್ಲಾಕ್‌ನೇಪಡ್ ಬ್ಲೂ ಫ್ಲೈಕ್ಯಾಚರ್, Blacknaped Blue Flycatcher - *Monarcha azurea*; ಸ್ಟ್ರೀಕ್‌ಡ್ ಫ್ಯಾನ್ ಟೈಲ್‌ಡ್ ವಾರ್ಬರ್, Streaked Fantailed Warber - *Cisticola juncidis*; ಬ್ರೌನ್ ಚಿಫ್‌ಚಾಫ್, Brown Chiff chaff - *Phylloscopus collybita*; ವೈಟ್‌ಸ್ಪಾಟೆಡ್ ಫ್ಯಾನ್‌ಟೈಲ್ ಫ್ಲೈಕ್ಯಾಚರ್, White spotted Flycatcher - *Rhipidura albicollis;* ಮತ್ತು ಫ್ಲೈಕ್ಯಾಚರ್, Greyheaded Flycatcher - *Culicicapa ceylonensis*.

**ಪಕ್ಷಿಗಳ ವಲಸೆ** : ಧಾರವಾಡ ಜಿಲ್ಲೆಯಲ್ಲಿ ನೀರಾವರಿ ಕೆರೆಗಳಲ್ಲಿ ಸ್ಥಳೀಯ ಹಾಗೂ ವಲಸೆ ಬರುವ ಪಕ್ಷಿಗಳು ನೆಲೆಸಲು ಪ್ರಶಸ್ತ ಪರಿಸ್ಥಿತಿ ಇದೆಯೇ ಎಂಬುದನ್ನು ತಿಳಿಯಲು ಬ್ರಿಟನ್ನಿನ ಒರಿಯಂಟಲ್ ಬರ್ಡ್ ಕ್ಲಬ್ ಸಮೀಕ್ಷೆಯನ್ನು ಡಾ. ಜೆ.ಸಿ. ಉತ್ತಂಗಿ ಅವರ ಮೂಲಕ ನಡೆಸಿತು. ಜಲಪಕ್ಷಿಗಳ ಜೀವನ ವಿಧಾನ ಅಧ್ಯಯನ ಮತ್ತು ಅವುಗಳ ಸಂತತಿ ವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಸಲಹೆ ಮಾಡಲು ಇಂತಹ ಸಮೀಕ್ಷೆಯನ್ನು ಕೈಗೊಳ್ಳಲಾಗಿತ್ತು. ಈ ಸಮೀಕ್ಷೆಯ ವರದಿಯ ಪ್ರಕಾರ ಜಿಲ್ಲೆಯ ವಿವಿಧ ಕೆರೆಗಳಲ್ಲಿ ಸುಮಾರು ಹತ್ತು ಜಾತಿಯ ಜಲಪಕ್ಷಿಗಳು ಆಶ್ರಯ ಪಡೆದಿದ್ದವು. ಸಾವಿರ ಸಂಖ್ಯೆಯಲ್ಲಿ ಕೊಕ್ಕರೆ ಜಾತಿಯ ಡೆಮೊಸ್ಸೆಲ್‌ಗಳು, ನೀರು ಹಕ್ಕಿಗಳು, ಹೆಬ್ಬಾತುಗಳು, ಚೂಪುಬಾಲದ ಬಾತುಕೋಳಿಗಳು, ಗಾರ್ಗೆನಿ ಜಾತಿಯ ಕೊಕ್ಕರೆಗಳು ವಲಸೆ ಬರುತ್ತವೆ ಎಂದು ಗೊತ್ತಾಗಿದೆ. ಮಳೆಗಾಲದಲ್ಲಿ ಕೆರೆಕುಂಟೆಗಳು ತಿಳಿಯಾಗಿ ಜಲಚರಗಳ ಬೆಳವಣಿಗೆ ಸುಸೂತ್ರವಾಗಿ ಆಗುವ ಹೊತ್ತಿನಲ್ಲಿ ದೂರದೂರದ ಪ್ರಾಂತ್ಯಗಳಿಂದ ಗುಂಪುಗುಂಪಾಗಿ ನಾನಾ ಜಾತಿಯ ನೀರು ಹಕ್ಕಿಗಳು ವಲಸೆ ಬರುತ್ತವೆ. ಕೆರೆಗಳ ದಂಡೆಗಳಲ್ಲಿ ಎತ್ತರದ ಮರಗಳ ಆಶ್ರಯ, ಕೆಳಗಡೆ ಹುಲುಸಾಗಿ ಹುಲ್ಲುಜೊಂಡು ಬೆಳೆದರೆ ನೀರು ಹಕ್ಕಿಗಳಿಗೆ ಗೂಡುಕಟ್ಟಿ ಮರಿ ಮಾಡಲು ಅವಕಾಶ ಸಿಗುತ್ತದೆ. ಸ್ಥಳೀಯ ನೀರು ಹಕ್ಕಿಗಳೂ ಗೂಡು ಕಟ್ಟಿ ಮರಿ ಮಾಡುತ್ತವೆ. ಆದರೆ ದೂರದ ಪ್ರಾಂತ್ಯದಿಂದ ವಲಸೆ ಬರುವ ಜಲಪಕ್ಷಿಗಳು ಮರಿ ಮಾಡುವುದಕ್ಕಿಂತ ಸುಪುಷ್ಟವಾಗಿ ಬೆಳೆದು ತಮ್ಮ ಮೂಲ ನೆಲೆಗೆ ವಾಪಸಾಗುತ್ತವೆ. ವಲಸೆ ಬರುವ ಜಲ ಪಕ್ಷಿಗಳಲ್ಲಿ ಉದ್ದಕಾಲು, ನೀಳ ಕತ್ತು ಮತ್ತು ಬಲವಾದ ಕೊಕ್ಕಿನ ಬಾತುಗಳು, ಕ್ರೌಂಚ ಪಕ್ಷಿಗಳು, ಕಡಲ ಕಾಗೆಗಳು, ಯೂರೋಪಿನಲ್ಲಿ ಕಾಣಬರುವ ಬೆಳ್ಳಕ್ಕಿಗಳು, ಪ್ಲೋವರ್ ಜಾತಿಯ ನೀರು ಕೋಳಿಗಳು ಸೇರಿವೆ. ಬಿಳಿ ಮತ್ತು ಕಂದು ಬಣ್ಣದ ಮುಳುಗು ಹಕ್ಕಿಗಳು ಸಿಹಿನೀರಿನ ಕೊಳಕಟ್ಟೆಗಳಲ್ಲಿ ಕೆಲಕಾಲ

ನಿಲ್ಲುತ್ತವೆ ಎಂಬುದು ಗೊತ್ತಾಗಿದೆ. ಜಿಲ್ಲೆಯ 54 ಕೆರೆಗಳನ್ನು ಅಧ್ಯಯನ ಮಾಡಿರುವ ಡಾ. ಉತ್ತಂಗಿ ಅವರು ಅವುಗಳಲ್ಲಿ 23 ರಲ್ಲಿ ಜಲಪಕ್ಷಿಗಳ ವಾಸಕ್ಕೆ ಅನುಕೂಲ ಕಲ್ಪಿಸುವ ಸಲಹೆ ನೀಡಿದ್ದಾರೆ.

ಜಿಲ್ಲೆಯ ಮಲೆನಾಡಿನ ಪ್ರದೇಶವಾದ ಹಾನಗಲ್, ಹಿರೇಕೆರೂರು, ಹಾವೇರಿಯ ಕೆಲವು ಭಾಗ, ಧಾರವಾಡ ಮತ್ತು ಶಿಗ್ಗಾಂವಿ ತಾಲೂಕುಗಳಲ್ಲಿನ ಕೆರೆಗಳು ಹೆಚ್ಚಿನ ಜಲಪಕ್ಷಿಗಳನ್ನು ಆಕರ್ಷಿಸುವುದನ್ನು ಗಮನಿಸಲಾಗಿದೆ. ಶಿರಹಟ್ಟಿಯ ಮಾಗಡಿ ಕೆರೆ ಉದ್ದ ಕೊಕ್ಕಿನ ಹೆಬ್ಬಾತುಗಳಿಗೆ ಅನುಕೂಲ ಪ್ರದೇಶವಾಗಿರುವುದನ್ನು ಈ ಸಮೀಕ್ಷೆ ಗುರುತಿಸಿದೆ. ವಲಸೆ ಬರುವ ಜಲಪಕ್ಷಿಗಳಿಗೆ ಹಿರೇಕೆರೂರು ತಾಲೂಕಿನ ಮದಗಮಾಸೂರು ಕೆರೆ ಒಂದು ತೀರ ಒಳ್ಳೆಯ ನೆಲೆ. ಹಾನಗಲ್ ತಾಲೂಕಿನ ನೀರಲಗಿಕೆರೆ ಮತ್ತು ನರೇಗಾಲ್ ಕೆರೆಗಳು ಬೆಳ್ಳಕ್ಕಿಗಳಿಗೆ ಆಶ್ರಯದಾಣಗಳಾಗಿವೆ. ಹಾವೇರಿ ತಾಲೂಕಿನ ಹೆಗ್ಗೆರೆ, ಹಾನಗಲ್ಲಿನ ಅಕ್ಕಿಆಲೂರು, ಬೆಳವತ್ತಿ, ಹಾವಣಗಿ, ಮಕರವಳ್ಳಿ, ಹಿರೇಕೆರೂರು ಕೆರೆಗಳೂ, ಶಿರಹಟ್ಟಿ ತಾಲೂಕಿನ ಮಾಗಡಿ, ಬೆಳ್ಳಟ್ಟಿ, ಮಣಚಿ, ಧಾರವಾಡದ ನೀರಸಾಗರ, ಕೆರೆಗೇರಿ, ನರೇಂದ್ರ ಕೆರೆಗಳು, ಕಲಘಟಗಿಯ ಹೊನ್ನಾಪುರಕೆರೆ, ತಬಕದ ಹೊನ್ನಹಳ್ಳಿ, ದೇವಿಕೊಪ್ಪ ಮತ್ತು ಹಿರೇಹೊನ್ನಳ್ಳಿ ಗದುಗಿನ ಚಿಕ್ಕಹಂದಿಗೋಳ, ಮುಂಡರಗಿಯ ಡಂಬಳ, ಬ್ಯಾಡಗಿ ತಾಲೂಕಿನ ಕಾಗಿನೆಲ್ಲಿ, ಚಿಕ್ಕಬಾಸೂರು, ರಾಣೆಬೆನ್ನೂರಿನ ಅಸುಂಡಿ ಮತ್ತು ಗುಡಗೂರು, ಮೈದೂರು ಕೆರೆಗಳಲ್ಲಿ ವಲಸೆ ಮತ್ತು ಸ್ಥಳೀಯ ಜಲಪಕ್ಷಿಗಳು ಆಶ್ರಯ ಪಡೆದಿವೆ. ಜಲಪಕ್ಷಿಗಳು ಕೆರೆಯ ನೀರು ಬತ್ತಿದ ನಂತರ ಬೇರೆ ನೀರಿನ ಆಶ್ರಯ ಹುಡುಕಿ ಹೋಗುತ್ತವೆ. ಕೆರೆಗಳು ಬತ್ತಿದಾಗ ಕೆರೆಯ ಗೋಡು ಮಣ್ಣನ್ನು ರೈತರು ಹೊತ್ತೊಯ್ಯುತ್ತಾರೆ. ರಸ್ತೆ ಬದಿ ಇದ್ದ ಕೆರೆಗಳಲ್ಲಿ ಆಶ್ರಯ ಪಡೆಯುವ ಜಲಪಕ್ಷಿಗಳಿಗೆ ವಾಹನದ ಸಂಚಾರದಿಂದ ಆತಂಕದ ಸ್ಥಿತಿ ಉಂಟಾಗುತ್ತದೆ. ಕೆರೆ ದಂಡೆಯ ಹುಲ್ಲು ಜೊಂಡುಗಳನ್ನು ತೆಗೆದರೆ ಜಲಪಕ್ಷಿಗಳ ಗೂಡು, ನೆಲೆಗಳಿಗೆ ಕುತ್ತು ಬರುತ್ತದೆ. ಆದುದರಿಂದ ನೀರಾವರಿ ಕೆರೆಗಳನ್ನು ಜಲಪಕ್ಷಿಗಳ ತಾಣಗಳೆಂದು ರಕ್ಷಿಸಬೇಕೆಂದು ಈ ಸಮೀಕ್ಷೆಯ ವರದಿ ತಿಳಿಸುತ್ತದೆ. ಪಕ್ಷಿಗಳ ವಲಸೆಗೆ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಈಗ ತಿಳಿದಿರುವ ಮಾಹಿತಿಯ ಪ್ರಕಾರ ಹವಾಮಾನ ಹಾಗೂ ಹಗಲಿನ ದೀರ್ಘತೆಗಳೇ ಮುಖ್ಯ ಕಾರಣಗಳಾಗಿ ತೋರುತ್ತವೆ. ಆಹಾರದ ಕೊರತೆಯೂ ಮತ್ತೊಂದು ಕಾರಣವಿರಬಹುದು.

## ಸಸ್ಯ ಸಂಪತ್ತು

ಧಾರವಾಡ ಜಿಲ್ಲೆಯಲ್ಲಿ ತೇವಾಂಶಭರಿತ ಉದುರೆಲೆ ಕಾಡು, ಮುಳ್ಳುಕಾಡು ಮತ್ತು ಕುರುಚಲು ಕಾಡುಗಳು ಮುಖ್ಯವಾಗಿವೆ. ತೇವತುಂಬಿದ ಉದುರೆಲೆ ಕಾಡುಗಳು ಮಲೆನಾಡಿಗೆ ಸೀಮಿತ. ಈ ಕಾಡುಗಳಲ್ಲಿಯ ಮುಖ್ಯವಾದ ಮರ ತೇಗ. ಇಲ್ಲಿ ಮರಗಳು ಸಾಮಾನ್ಯವಾಗಿ 9 ರಿಂದ 12 ಮೀ. ಎತ್ತರವಾಗಿ ಬೆಳೆಯುತ್ತವೆ. ಕಾಡುಗಳ ವಿತರಣೆಯಲ್ಲಿ ಪ್ರಾದೇಶಿಕ ವ್ಯತ್ಯಾಸ ಕಂಡುಬರುತ್ತದೆ. ಕಲಘಟಗಿ, ತಡಸ, ಶಿಗ್ಗಾಂವಿ ಇವುಗಳ ಸುತ್ತಲೂ ಮರಗಳು ಸಾಂದ್ರವಾಗಿವೆ. ಆದರೆ ಪೂರ್ವಕ್ಕೆ ಹೋದಂತೆ ಅವು ಕಡಿಮೆ ಎತ್ತರದವುಗಳಾಗಿ ಹೆಚ್ಚು ಹೆಚ್ಚು ವಿರಳವಾಗುತ್ತವೆ. ನದಿಗಳ ದಂಡೆಗಳ ಉದ್ದಕ್ಕೂ ಬಿದಿರು ಮೆಳೆಗಳು ಕಂಡುಬರುತ್ತವೆ. ತೇವಾಂಶಭರಿತ ಉದುರೆಲೆ ಕಾಡುಗಳಲ್ಲಿ ಹುಲ್ಲು ಹೆಚ್ಚಾಗಿ ಬೆಳೆಯುವುದರಿಂದ ದನಕರುಗಳನ್ನು ವಿಶೇಷವಾಗಿ ಸಾಕುವರು. ಗಡಿನಾಡಿನಲ್ಲಿ ಮಾವು, ಹಲಸು, ಹುಣಿಸೆ, ಅರಳಿ, ಆಲ ಮತ್ತು ಸಿರಸರ ಮರ ಹೆಚ್ಚಾಗಿ ಬೆಳೆಯುತ್ತವೆ. ಬೆಳವಲನಾಡಿನಲ್ಲಿ ಅಲ್ಲಲ್ಲಿ ಮುಳ್ಳುಗಾಡುಗಳು ಮತ್ತು ಕುರುಚಲು ಕಾಡುಗಳು ಇವೆ. ಮುಳ್ಳುಗಾಡುಗಳಲ್ಲಿ ಜಾಲಿ ಮರ ಮುಖ್ಯವಾದದ್ದು. ಕಪ್ಪತಗುಡ್ಡ, ಗಜೇಂದ್ರಗಡ ಗುಡ್ಡ ಮೊದಲಾದವುಗಳಲ್ಲಿ ಕುರುಚಲು ಕಾಡುಗಳುಂಟು. ಈ ಪ್ರದೇಶಗಳ ಶುಷ್ಕ ವಾಯುಗುಣ ಮತ್ತು ಕೆಳದರ್ಜೆಯ ಮಣ್ಣುಗಳಿಂದಾಗಿ ಮರಗಿಡಗಳು ವಿರಳವಾಗಿ ಬೆಳೆಯುತ್ತವೆ. ರಸ್ತೆಗಳಗುಂಟ ಸಾಮಾನ್ಯವಾಗಿ ಬೇವಿನ ಮರಗಳುಂಟು. ಜವಳು ಭೂಮಿಯಲ್ಲಿ ಈಚಲ ಮರಗಳು ಮತ್ತು ತೋಟಗಳಲ್ಲಿ ಬಾಳೆ, ಪೇರಲ, ಚಿಕ್ಕು (ಸಪೋಟ), ಮಾವು, ಹಲಸು, ಸೀತಾಫಲ, ನಿಂಬೆ, ತೆಂಗು, ಅಡಿಕೆ ಮರಗಳು ಬೆಳೆಯುತ್ತವೆ. ಜಿಲ್ಲೆಯಲ್ಲಿರುವ ಪ್ರಮುಖ ಸಸ್ಯ ಪ್ರಭೇಧಗಳು ಹೀಗಿವೆ.

**Ranunculaceae**: ನರವೆಲಿಯ ಜೈಲಾನಿಕ, *Naravelia zeylanica*, ಚರಚರಿ ಬಳ್ಳಿ.

**Brassicaceae**: ರೊರಿಪ್ಪ ಇಂಡಿಕ, *Rorippa indica*, ಕಾಡುಸಾಸಿವೆ.

**Cleomaceae**: ಕ್ಲಿಯೋಂ ಅಸ್ಪೆರಾ, *Cleome aspera*; ಕ್ಲಿಯೋಂ ಫೆಲಿನ, *Cleome felina.*

**Capparaceae**: ಕಡಬ ಫ್ರೂಟಿಕೋಸ, *Cadaba fruticosa;* ಕಗ್ಗಿಕೆ, ಮರಗಟ; ಕಪ್ಪಾರಿಸ್ ಕ್ಲೆಗ್‌ಹಾರ್ನಿ, *Capparis cleghornii*; ಕಪ್ಪಾರಿಸ್ ಡೈವೆರಿಕೇಟ, *Capparis divaricata*, ತೊಟ್ಟಮುಳ್ಳು; ಕಪ್ಪಾರಿಸ್ ಸೆಪಿಯೇರಿಯ, *Capparis sepiaria*, ಕಾಡುಕತ್ತರಿ; ಕಪ್ಪಾರಿಸ್ ಜೈಲಾನಿಕ, *Capparis zeylanica*, ಕಪ್ಪಾರಿಸ್ ಗ್ರಾಂಡಿಸ್ *Capparis grandis* ಅತುಂಡಿಕಾಯಿ; ಮತ್ತು ಮೆರುವ ಒಬ್ಲಾಂಗಿಫೋಲಿಯ, *Maerua oblongifolia*, ನೆಲಸಕ್ಕರೆ ಗೆಡ್ಡೆ.

**Pittosporaceae**: ಪಿಟ್ಟೊಸ್ಪೋರಂ ಡಾಸಿಕಾಲನ್, *Pittosporum dasycaulon*, ಬೂಗ್ರಿ.

**Polygalaceae**: ಪಾಲಿಗಾಲ ಆರ್ವೆನ್ಸಿಸ್, *Polygala arvensis*; ಪಾಲಿಗಾಲ ಎರಿಯೊಪ್ಟೆರಾ, *Polygala erioptera*.

**Caryophyllaceae**: ಅರೆನೇರಿಯ ನೀಲಗಿರೆನ್ಸಿಸ್, *Arenaria neelgherrensis*; ಮತ್ತು ಪಾಲಿಕಾರ್ಪಿಯ ಕೊರಿಂಬೊಸ, *Polycarpaea corymbosa*, ಮುಳ್ಳಿನ ಗಿಡ.

**Portulacaceae:** ಪೋರ್ಟುಲಾಕ ಒಲಿರೇಶಿಯ, *Portulaca oleracea*; ದೊಡ್ಡಗೋಣಿಸೊಪ್ಪು; ಮತ್ತು ಪೋರ್ಟುಲಾಕ ಕ್ವಾಡ್ರಿಫೀಡ, *Portulaca quadrifida*, ಗೋಣಿಸೊಪ್ಪು.

**Hypericaceae**: ಹೈಪೆರಿಕಂ ಜಪಾನಿಕಂ, *Hypericum japonicum*.

**Malvaceae** : ಅಬೆಲ್‌ಮೋಸ್ಕಸ್ ಫೈಕಲ್‌ನಿಯಸ್, *Abelmoschus ficulneus*, ಸಣ್ಣ ಬೆಂಡೆ.

**Violaceae**: ಹೈಬಾಂಥಸ್ ಎನ್ನಿಯಸ್ಪರ್ಮಸ್, *Hybanthus enneaspermus*, ಪುರುಷರತ್ನ; ಅಬುಟಿಲಾನ್ ಕ್ರಿಸ್ಪಂ, *Abutilon crispum*, ಬರಲುಕಡ್ಡಿ; ಅಬುಟಿಲಾನ್ ಪನ್ನೊಸಂ, *Abutilon pannosum*; ಅಬುಟಿಲಾನ್ ಲೋಬೇಟಸ್, *Hibiscus lobatus;* ಹೈಬಿಸ್ಕಸ್ ಟ್ರೈ ಒನಂ, *Hibiscus trionum*; ಸಿಡಾ ರೊಂಬಿಫೋಲಿಯ, *Sida rhombifolia*, ಬನ್ನೆಗರುಗುಗಿಡ; ಸಿಡಾ ಸ್ಪೈನೋಸ, *Sida spinosa*; ಮತ್ತು ತೆಸ್ಪಿನಿಯಾ ಪಾಪುಲ್ನಿಯ, *Thespesia populnea*, ಬುಗುರಿಯ ಮರ.

**Bombacaceae**: ಅಡನ್‌ಸೋನಿಯ ಡಿಜಿಟಾಟ, *Adansonia digitata*, ಮಗಿಮಾವು.

**Sterculiaceae**: ಎರಿಯೋಲಿನ್ ಕ್ವಿಂಕೆಲಾಕುಲಾರಿಸ್, *Eriolaena quinquelocularis* ಮತ್ತು ಗುಮಚಿ; ಗ್ವಾಜುಮ ಅಲ್ಮಿಫೋಲಿಯ, *Guazuma ulmifolia*.

**Tiliaceae**: ಕಾರ್ಕೋರಸ್ ಫೆಸಿಕುಲಾರಿಸ್, *Corchorus fascicularis*, ಚುಂಚಲಸೊಪ್ಪು; ಗ್ರೆವಿಯ ಅಬುಟಿಫೋಲಿಯ, *Grewia abutilifolia*, ಕರಿಕವಡಿ; ಗ್ರೆವಿಯ ಹಿರ್ಸುಟ, *Grewia hirsuta*; ಟ್ರೈಯುಂಫೆಟ್ಟ ರೊಂಬೊಯಿಡಿಯ Triumfetta *rhomboidea;* ಟ್ರೈಯಂಫೆಟ್ಟ ಪಿಲೋಸ, *Triumfetta pilosa;* ಸಣ್ಣ ಉಡಿಪೆ; ಮತ್ತು ಟ್ರೈಯಂಪೆಟ್ಟ ರೊಟುಂಡಿಫೋಲಿಯ, *Trimfetta rotundifolia*.

**Rutaceae**: ಈಗಲ್ ಮಾರ್ಮೆಲೋಸ್, *Aegle marmelos*, ಬಿಲ್ವ ಪತ್ರೆ; ಲಮೋನಿಯ ಆಸಿಡಿಸ್ಸಿಮ, *Limonia acidissima* ಮತ್ತು ತೊನಶ್ಯಾನ; ಮುರಯ ಪ್ಯಾನಿಕುಲೇಟ, *Murraya paniculata*, ಕಾಡುಕರಿಬೇವು.

**Balanitaceae**: ಬಲನೈಟಿಸ್ ಈಜಿಪ್ಪಿಯಾಕ, *Balanites aegyptiaca*.

**Meliaceae**: ಕ್ಲೋರೋಕ್ಸೈಲಾನ್ ಸ್ವಿಟೇನಿಯ, *Chloroxylon swietenia*, ಮಶವಾಳ; ಮತ್ತು ಮೆಲಿಯ ಅಜಡಿರಾಕ್ಟ, *Melia azedarach*, ಕಾಡುಬೇವು.

**Olacaceae**: ಕ್ಷಿಮೆನಿಯ ಅಮೆರಿಕಾನ, *Ximenia americana*, ನೆಕ್ರಿಕಂಟಿ.

**Celastraceae**: ಕ್ಯಾಸ್ಸಿನ್ ಗ್ಲಾವುಕ, *Cassine glauca*; ಮತ್ತು ಸೆಲಾಸ್ಟ್ರಸ್ ಪ್ಯಾನಿಕುಲೇಟಸ್, *Celastrus paniculatus*, ಕರೀಗೊನ್ನೆ.

**Hippocrateaceae**: ರೈಸಾಂಟಿಯ ಗ್ರಹಾಮಿ, *Reissantia grahamii.*

**Rhamnaceae**: ವೆಂಟಿಲಾಗೊ ಡೆಂಟಿಕುಲೇಟ, *Ventilago denticulata;* ಜಿಜಿಪಸ್ ಕ್ಸೈಲೋಪೈರಸ್, *Ziziphus xylopyrus*, ಮುಳ್ಳುಕಾರೆ; ಜಿಜಿಪಸ್ ಈನೊಪ್ಲಿಯ, *Ziziphus oenophlia*, ಬುರಗಿ; ಮತ್ತು ಜಿಜಿಪಸ್ ಮಾರಿಟಿಯಾನ, *Ziziphus maruritiana*, ಬೋರೆ.

**Vitaceae**: ಅಂಪೆಲೊಸಿಸ್ಸಸ್ ಟೊಮೆಂಟೋಸ, *Ampelocissus tomentosa*; ಕೆರೇಷಿಯ ಆರಿಕುಲೇಟ, *Cayratia auriculata*, ಅಯ್ವೆಲೆ ಬಳ್ಳಿ; ಕೆರೇಷಿಯ ಟ್ರೈಫೋಲಿಯ, *Cayratia trifolia;* ಮತ್ತು ಸಿಸ್ಸಸ್ ಸಿಟೋಸ, *Cissus setosa.*

**Sapindaceae**: ದೊಡೋನಿಯ ವಿಸ್ಕೋಸ, *Dodonaea viscosa*, ಬಣದುರಬಿ; ಮತ್ತು ಸ್ಕ್ಲೀಕೆರ ಒಲಿಯೋಸ, *Schleichera oleosa*, ಸಾಗಡಿ.

**Ancardiaceae**: ಅನಕಾರ್ಡಿಯಂ ಆಕ್ಸಿಡೆಂಟೇಲ್, *Anacardium occidentale*, ಗೋಡಂಬಿ, ಗೇರುಮಾವು; ಮತ್ತು ರಸ್ ಮೈಸೂರೆನ್ಸಿಸ್, *Rhus mysorensis*- ಸಬಲೆ.

**Fabaceae**: ಅಲಿಸಿಕಾರ್ಪಸ್ ಬುಪ್ಲೆರಿಫೋಲಿಯಸ್, *Alysicarpus bupleurifolius;* ಅಲಿಸಿಕಾರ್ಪಸ್ ಮೊನಿಲಿಫೆರ್, *Alysicarpus monilifer*; ಅಲಿಸಿಕಾರ್ಪಸ್ ಪ್ರೊಕಂಬೆನ್ಸ್, *Alysicarpus procumbens;* ಅಲಿಸಿಕಾರ್ಪಸ್ ರಗೋಸಸ್, *Alysicarpus rugosus*, ಉದ್ದಲಬು; ಅಟಿಲೋಸಿಯ ಸ್ಕರಬಿಯೊಡಿಸ್, *Atylosia scarabaeoides*; ಕ್ಲಿಟೋರಿಯ ಟರ್ನೇಟಿಯ, *Clitoria ternatea*, ವಿಷ್ಣುಕ್ರಾಂತಿ; ಕ್ರೊಟೋಲೇರಿಯ ಒರಿಕ್ಸೆನ್ಸಿಸ್, *Crotalaria orixensis*, ಕಾಡುಬುಡ್ಡಗಿಡ; ಕ್ರೊಟೋಲೇರಿಯ ಪ್ರೊಸ್ಟ್ರೇಟ, *Crotolaria prostrata*; ಕ್ರೊಟೋಲೇರಿಯ ಪುಸಿಲ್ಲ, *Crotolaria pusilla*; ಡಾಲ್ಬರ್ಜಿಯ ಲಾನ್ಸಿ ಒಲೇರಿಯ, *Dalbergia lanceolaria*, ಹಸರುಗನ್ನಿ; ಡಾಲ್ಬರ್ಜಿಯ ಮೆಲನೊಕ್ಸೈಲಾನ್, *Dalbergia melanoxylon*; ಡಾಲ್ಬರ್ಜಿಯ ಪ್ಯಾನಿಕುಲೇಟ, *Dalbergia paniculata*, ಉಸ್ರಾಣಿ; ಗೊನಿಯೋಗೈನ ಹಿರ್ಟ, *Goniogyna hirta*; ಇಂಡಿಗೋಫೆರ ಅಸ್ಟ್ರಾಂಗಲಿನ, *Indigofera astragalina*; ಇಂಡಿಗೋಫೆರ ಕ್ಯಾಸಿಯಾ ಇಡಿಸ್, *Indigofera cassioides*; ಇಂಡಿಗೋಫೆರ ಕಾರ್ಡಿಫೋಲಿಯ, *Indigofera cordifolia*; ಇಂಡಿಗೋಫೆರ ಒಬ್ಲಾಂಗಿಫೋಲಿಯ, *Indigofera oblongifolia*, ಕಾಡುನೀಲಿ; ಇಂಡಿಗೋಫೆರ ಸ್ಪಿಕಾಟ, *Indigofera spicata;* ನಿಯನೋಟೋನಿಯ ವೈಟಿ, *Neonotonia wightii*; ಪೊಂಗೇಮಿಯ ಪಿನ್ನೇಟ, *Pongamia pinnata*, ಹೊಂಗೆ; ಟಿರೋಕಾರ್ಪಸ್ ಮಾರ್ಸೂಪಿಯಂ, *Pterocarpus marsupium*, ಹೊನ್ನೆ; ರಿಂಕೋಸಿಯ ಮಿನಿಮ, *Rhynchosia minima*, ಘಟ್ಟಸರೆ, ರಿಂಕೋಸಿಯ ರುಫೆಸೆನ್ಸ್, *Rhynchosia rufescens*; ರೋತಿಯ ಇಂಡಿಕ, *Rothia indica;* ಶುಟೇರಿಯ ವೆಸ್ಟಿಟ, *Shuteria vestita*; ಸ್ಮಿತಿಯ ಸೆನ್ಸಿಟಿವ, *Smithia sensitiva*; ಸ್ಟೈಲೊಸಾಂತಿಸ್ ಫ್ರುಟಿಕೋಸ, *Stylosanthes fruticosa*; ಟಿಫ್ರೊಸಿಯ ಪರ್ಪೂರಿಯ, *Tephrosia purpurea*, ಕೊಗ್ಗಿಗಿಡ; ಟಿಫ್ರೋಸಿಯ ಸ್ಟ್ರಿಗೋಸ, *Tephrosia strigosa* ಮತ್ತು; ವಿಗ್ನ ರೇಡಿಯೇಟ *Vigna radiata.*

**Caesalpiniaceae**: ಸೆಸಲ್ಪನೀಯ ಕೊರಿಯೇರಿಯ, *Caesalpinia coriaria*, ಸೀಮೆ ಅಲ್ಡೆ ಮರ; ಕ್ಯಾಸಿಯ ಆರಿಕುಲೇಟ, *Cassia auriculata*, ತಂಗಡಿ ಗಿಡ ; ಕ್ಯಾಸಿಯ ಮಿಮೊಸಾಯಿಡಿಸ್ *Cassia mimosoides;* ಕ್ಯಾಸಿಯ ಸುರಟ್ಟೆನ್ಸಿಸ್,

*Cassia surattensis,* ಅಡವಿ ತಂಗಡಿ; ಕ್ಯಾಸಿಯ ತೊರ, *Cassia tora,* ಚಗಚೆ; ಹಾರ್ಡವಿಕ್ಕಿಯ ಬೈನಾಟ, *Hardwickia binnata,* ಕಮ್ರ, ಕರಚಿ.

**Mimosaceae**: ಅಕೇಸಿಯ ಚುಂದ್ರ *Acacia chundra;* ಆಲ್ಬೀಜಿಯ ಅಮರ *Albizia amara* ; ಮತ್ತು ನೆಪ್ಚೂನೀಯ ಟ್ರೈಕ್ವೆಟ್ರ *Neptunia triquetra.*

**Crassulaceae**: ಕಲಂಕೊ ಲಾಸಿನಿಯೇಟ, *Kalanchoe laciniata.*

**Combretaceae**: ಟರ್ಮಿನೇಲಿಯ ಕ್ರೆನುಲೇಟ, *Terminalia crenulata,* ಕರಿ ಮತ್ತಿ.

**Myrtaceae**: ಸಿಜಿಜಿಯಂ ಕುಮಿನಿ, *Syzygium cumini,* ಜಂಬುನೇರಳೆ.

**Lythraceae**: ಲಾಗರ್‌ಸ್ಟ್ರೋಮಿಯ ಪಾರ್ವಿಫ್ಲೋರ, *Lagerstroemia parviflora;* ಮತ್ತು ವುಡ್‌ಫೊರ್ಡಿಯ ಫ್ರೂಟಿಕೋಸ *Woodfordia fructicosa,* ಅರೆ ಹೂ.

**Cucurbitaceae**: ಲುಫ ಅಕ್ಯುಟಾಂಗುಲ, *Luffa acutangula,* ನಾಗದಾಳಿ ಬಳ್ಳಿ ಮತ್ತು; ಲುಫ ಟೂಬೆರೋಸ *Luffa tuberosa.*

**Molluginaceae**: ಗ್ಲೈನಸ್ ಲೋಟೋಯಿಡಿಸ್, *Glinus lotoides,* ಚಂದ್ರಕಾರೆ ಸೊಪ್ಪು; ಮೊಲ್ಲುಗೊ ಪೆಂಟಾಫೈಲ *Mollugo pentaphylla,* ಕೀದರಸಿ; ಮತ್ತು ಟ್ರೈಯಂತಿಮ ಕ್ರಿಸ್ಟಲೈನ *Trianthema crystalina.*

**Aizoaceae**: ಜಲೆಯ ಡಿಕಾಂಡ್ರ, *Zaleya decandra* ಬಿಳಿಕೊಮ್ಮೆ ಮತ್ತು; ಜಲೆಯ ಪೆಂಟಾಂಡ್ರ, *Zaleya pentandra,* ಕೆಂಪು ಕೊಮ್ಮೆ

**Apiaceae**: ಬೂಪ್ಲೆರಂ ಮ್ಯುಕ್ರೊನೇಟಂ, *Bupleurum mucronatum* ಮತ್ತು; ಪಿಂಪಿನೆಲ್ಲ ಹೈಯನಿಯಾನ, *Pimpinella heyneana.*

**Alangiaceae**: ಅಲಂಗಿಯಂ ಸಾಲ್ವಿಫೋಲಿಯಂ, *Alangium salvifolium.*

**Rubiaceae**: ಕ್ಯಾಂತಿಯಂ ಪಾರ್ವಿಫ್ಲೊರಂ, *Canthium parviflorum,* ಕಾರೆ, ಕಾಚಿಗಿಡ; ಗಾರ್ಡೀನಿಯ ಗಮ್ಮಿಫೆರ, *Gardenia gummifera,* ಕಂಬಿ ಮೇಣ; ಗಾರ್ಡೀನಿಯ ಟರ್ಜಿಡ *Gardenia turgida,* ಬೊನಗೇರಿ; ಇಕ್ಸೊರ ಆರ್ಬೊರಿಯ, *Ixora arborea;* ನಿಯನೋಟಿಸ್ ಮೊಂತೊಲೊನ್ನೈ *Neanotis montholonii;* ಓಲ್ಡೆನ್‌ಲಾಂಡಿಯ ಅಸ್ಪೆರ, *Oldenlandia aspera;* ಓಲ್ಡೆನ್‌ಲಾಂಡಿಯ ಆರಿಕುಲೇರಿಯ, *Oldenlandia auricularia,* ನೆಲನೆಕ್ಕರೆ; ಒಲ್ಡೆನ್‌ಲಾಂಡಿಯ ಕೆರುಲಿಯ, *Oldenlandia caerulea;* ಒಲ್ಡೆನ್‌ಲಾಂಡಿಯ ನಿಟಿಡ, *Oldenlandia nitida;* ಒಲ್ಡೆನ್‌ಲಾಂಡಿಯ ಅಂಬೆಲ್ಲೇಟ, *Oldenlandia umbellata,* ಚಿರವಾಲ; ಮತ್ತು ಪಾವೆಟ್ಟ ಟೊಮೆಂಟೋಸ, *Pavetta tomentosa.*

**Asteraceae**: ಬಿಡೆನ್ಸ್ ಬೈಟರ್ನೇಟ, *Bidens biternata;* ಬ್ಲೆಫರಿಸ್ಪರ್ಮ ಸಬ್‌ಸೆಸೈಲ್, *Blepharispermum subsessile;* ಬ್ಲೂಮಿಯ ಲಾಸಿರ *Blumea lacera,* ಗಾಂಧಾರಿ ಗಿಡ; ಬ್ಲೂಮಿಯ ಮೆಂಬ್ರೇನೆಸಿಯ, *Blumea membranacea;* ಬ್ಲೂಮಿಯ ಒಬ್ಲಿಕ್ವ *Blumea obliqua;* ಸಸುಲಿಯ ಆಕ್ಸಿಲಾರಿಸ್, *Caesulia axillaris;* ಕಾರ್ತಮಸ್ ಟಿಂಕ್ಟೋರಿಯಸ್, *Carthamus tinctorius,* ಕುಸುಬೆ; ಸೆಂಟ್ರತೀರಮ್ ಅಂತೆಲ್‌ಮಿಂಟಿಕಂ *Centratherum anthelminticum;* ಸೈಯತೊಕ್ಲೀನ್ ಪರ್‌ಪೂರಿಯ, *Cyathocline purpurea;* ಡೈಕೊಮ ಟೊಮೆಂಟೋಸ *Dicoma*

*tomentosa*, ಸನ್ನಿಗಿಡ; ಎಕ್ಕಿನಾಪ್ಸ್ ಎಕ್ಕೈನೇಟಸ್ *Echinops echinatus*, ಬ್ರಹ್ಮದಂಡೆ; ಫ್ಲವೆರಿಯ ಟ್ರೈನರ್ವಿಯ, *Flaveria trinervia*; ಗ್ಲಾಸ್‌ಕಾರ್ಡಿಯ ಬೊಸ್ವಲ್ಲಿಯ *Glosscardia bosvallea*, ಪರ್ಪಾಟಕ; ಗ್ಲಾಸೊಗೈನ್ ಬಿಡೆನ್ಸ್ *Glossogyne bidens*; ಗ್ರಾಂಗಿಯ ಮಾಡೆರಸ್ಪಟಾನ, *Grangea maderaspatana*, ಮಾಚಿಪತ್ರೆ; ಹೈಮೆನಾಂತೆರಮ್ ಟೆನುಫೋಲಿಯಂ, *Hymenantherum tenuifolium*; ಲಗೇಶಿಯ ಮೊಲಿಸ್ *Lagascea mollis*; ಪ್ಲಕಿಯ ಟೊಮೆಂಟೋಸ, *Pluchea tomentosa*; ಸೆನೆಸಿಯೊ ಟೆನುಫೋಲಿಯಸ್, *Senecio tenuifolius*; ಸೀಜೆಸ್‌ಸ್ಪೆಕಿಯ ಒರಿಯಂಟಾಲಿಸ್ *Siegespeckia orientalis*, ಅಂಟುಹೂವಿನ ಗಿಡ; ಸ್ಫೆರಾಂತಸ್ ಇಂಡಿಕಸ್, *Sphaeranthus indicus*, ಮೂಡಿಗಿಡ; ಟ್ರೈಕೊಲೆಪಿಸ್ ರೆಡಿಕನ್ಸ್, *Tricholepis radicans*, ದಾಹಾನ; ಟ್ರೈಡಾಕ್ಸ್ ಪ್ರೊಕಂಬೆನ್ಸ್ *Tridax procumbens*, ಸಣ್ಣ ಶೇವಂತಿ; ಮತ್ತು ವಿಕೊ ಇಂಡಿಕ, *Vicoa indica*, ಮೂಗತಿ ಸೊಪ್ಪು.

**Plumbaginaceae**: ಪ್ಲಂಬಾಗೊ ಜೈಲಾನಿಕ, *Plumbago zeylanica*, ಬಿಳಿ ಚಿತ್ರಮೂಲ.

**Ebenaceae**: ಡಯೋಸ್ಪೈರೋಸ್ ಮಂಟಾನ, *Diospyros montana*, ಬುಲಗನಿ.

**Oleaceae**: ಕೈಯೊನಾಂತಸ್ ಮಲಬಾರಿಕ, *Chionanthus malabarica*, ಮಣಿಕಿ ಮರ.

**Salvadoraceae**: ಅಜಿಮ ಟೆಟ್ರಾಕಾಂತ, *Azima tetracantha*, ಗೋಣಿಗಿಡ ; ಮತ್ತು ಸಾಲ್ವಡೊರ ಪರ್ಸಿಕ, *Salvadora persica*, ಪೀಲ.

**Apocynaceae:** ಕ್ಯಾರಿಸ್ಸ ಹಿರ್ಸುಟ, *Carissa hirsuta*, ಕರೆಕಾಯಿ; ಕ್ಯಾರಿಸ್ಸ ಸ್ಪೈನೇರಮ್, *Carissa spinarum*, ಚಿಕ್ಕ ಕವಳಿ ಕಂಟಿ; ಕತರಾಂತಸ್ ಪುಸಿಲಸ್ *Catharanthus pusillus*; ಹೊಲರ್ರೆನ ಅಂಟಿಡೀಸೆಂಟೆರಿಕ, *Holarrhena antidysenterica*, ಕೊರ್ಚು; ಇಕ್ನೊಕಾರ್ಪಸ್ ಫ್ರೂಟೆಸೆನ್ಸ್ *Ichnocarpus frutescens*, ಗೌರಿಬಳ್ಳಿ; ಮತ್ತು ವಲ್ಲಾರಿಸ್ ಸೊಲನೇಸಿಯ, *Vallaris solanacea*, ಬುಗಡಿ ಹಂಬು.

**Asclepiadaceae**: ಕರಲ್ಲುಮ ಟ್ರಂಕಾಟೊ ಕೊರೊನೆಟ, *Caralluma truncato-coronata*; ಸಿರೊಪೆಜಿಯ ಕ್ಯಾಂಡೆಲಬ್ರಂ, *Ceropegia candelabrum*; ಸೆರೊಪೆಜಿಯ ಜಂಸ್ನಿಯ, *Ceropegia juncea*, ಜಾತಿಲಿ; ಸೈನಾಂಕಂ ಟೂನಿಕೇಟಂ *Cynanchum tunicatum*; ಜಿಮ್ನಿಯ ಪರ್ಗೂಲಾರಿಯೊಯಿಡಿಸ್, *Gymnema pergularioides*; ಜಿಮ್ನಿಯ ಸಿಲ್ವಿಸ್ಟರ್, *Gymnema sylvestre*, ಸಣ್ಣಗೆರಸೆ ಹಂಬು; ಲೆಪ್ಟಡೆನಿಯ ರೆಟಿಕುಲೇಟ, *Leptadenia reticulata*, ಶಿಗುಂಟಿ, ದೂದಿಬಳ್ಳಿ; ಪೆಂಟಟ್ರೊಪಿಸ್ ಕಪೆನ್ಸಿಸ್, *Pentatropis capensis;* ಪರ್ಗುಲೇರಿಯ ಡೆಮಿಯ,*Pergularia daemia;* ಸಾರ್ಕೊಸ್ಟೆಮ್ಮ ಅಸಿಡಿಯಂ, *Sarcostemma acidum*, ಹಂಬುಕಳ್ಳಿ; ಸಾರ್ಕೊಸ್ಟೆಮ್ಮ ಇಂಟರ್‌ಮೀಡಿಯಂ, *Sarcostemma intermedium*, ಕೋಣದ ಬಳ್ಳಿ; ಸಾರ್ಕೊಸ್ಟೆಮ್ಮ ಸ್ಟಾಕ್‌ಸಿ, *Sarcostemma stocksii*; ಮತ್ತು ಟೆಲೋಸ್ಮ ಪಲ್ಲಿಡ, *Telosma pallida*.

**Periplocaceae**: ಹೆಮಿಡೆಸ್ಮಸ್ ಇಂಡಿಕಸ್, *Hemidesmus indicus*, ಸುಗಂಧ ಫಲದ ಗಿಡ.

**Gentianaceae**: ಕಾನ್‌ಸ್ಕೊರ ಡೆಕರೆನ್ಸ್, *Canscora decurrens*, ಶಂಖಪುಷ್ಪ; ಕಾನ್‌ಸ್ಕೊರ ಡಿಫ್ಯೂಸ, *Canscora diffusa*; ಸೆಂಟಾರಿಯಮ್ ಸೆಂಟಾರಿಯೊಯಿಡಿಸ್, *Centaurium centaurioides*; ಮತ್ತು ಎನಿಕೊಸ್ಟೆಮ ಹಿಸ್ಸೊಪಿಫೋಲಿಯಂ, *Enicostema hyssopifolium*.

**Heliotropiaceae**: ಹೆಲಿಯೊಟ್ರೋಪಿಯಂ ಇಂಡಿಕಂ, *Heliotropium indicum*, ಚೇಳುಬಾಲದ ಗಿಡ ; ಹೆಲಿಯೊ ಟ್ರೋಪಿಯಂ ರೇರಿಫ್ಲೋರಂ *Heliotropium rariflorum*; ಮತ್ತು ಹೆಲಿಯೋಟ್ರೋಪಿಯಂ ಸುಪಿನಂ, *Heliotropium supinum*.

**Ehretiaceae**: ಕಾರ್ಮೋನ ರೆಟೂಸ, *Carmona retusa*.

**Cordiaceae**: ಕಾರ್ಡಿಯ ಗರಾಫ್, *Cordia gharaf*, ಮತ್ತು ಕಾರ್ಡಿಯ ಮ್ಯಾಕ್ಲಿಯೊಡಿ, *Cordia macleodii*, ಹಡಂಗ.

**Convolvulaceae**: ಆರ್ಜರಿಯ ಕುನಿಯೇಟ, *Argyreia cuneata*, ಅಚ್ಚಿಗಿಡ; ಆರ್ಜರಿಯ ಇಂಬ್ರಿಕೇಟ, *Argyreia imbricata*; ಕನ್ವೊಲ್ವುಲಸ್ ಆರ್ವೆನ್ಸಿಸ್, *Convolvulus arvensis*, ನರಂಜಿಬಳ್ಳಿ; ಕನ್ವೊಲ್ವುಲಸ್ ರಾಟ್ಲೆನಿಯಾನಿಸ್, *Convolvulus rottlerianus*; ಎವೊಲ್ವುಲಸ್ ಅಲ್ಸಿನಾಯಿಡಿಸ್, *Evolvulus alsinoides*, ವಿಷ್ಣುಕ್ರಾಂತಿ ಸೊಪ್ಪು; ಐಪೊಮಿಯ ಕೆರಿಕ, *Ipomoea cairica;* ಐಪೊಮಿಯ ಎರಿಯೋಕಾರ್ಪ, *Ipomoea eriocarpa*; ಐಪೊಮಿಯ ಇಲ್ಲೂಸ್ಟ್ರಿಸ್, *Ipomoea illustris*; ಐಪೊಮಿಯ ಒಬ್‌ಸ್ಕ್ಯೂರ, *Ipomoea obscura*; ಐಪೊಮಿಯ ಸ್ಟಾಫಿಲಿನ, *Ipomoea staphylina*; ಐಪೊಮಿಯ ಟರ್ಬಿನೇಟ, *Ipomoea turbinata*; ಐಪೊಮಿಯ ಟರ್ಪೆಟಂ, *Ipomoea turpethum*, ನಾಗದಂತಿ ಮತ್ತು; ಮೆರ್ರೆಮಿಯ ಈಜಿಪ್ಟಿಕ, *Merremia aegyptica*.

**Cuscutaceae**: ಕಸ್ಕೂಟ ರಿಫ್ಲೆಕ್ಸ್, *Cuscuta reflexa*. •

**Solanaceae**: ನಿಕೊಶಿಯಾನ ಟಬಾಕಂ, *Nicotiana tabacum*, ಹೊಗೆಸೊಪ್ಪು; ಸೊಲಾನಂ ಎರಿಯಾಂತಮ್, *Solanum erianthum*; ಸೊಲಾನಂ ನಿಗ್ರಂ, *Solanum nigrum*, ಕಾಕಿಹಣ್ಣು ಮತ್ತು; ಸೊಲಾನಂ ಪ್ಯೂಬೆಸೆನ್ಸ್, *Solanum pubescens*, ಹುಚ್ಚು ಸೊಂಡೆ.

**Bignoniaceae**: ಡಾಲಿಕಾನ್‌ಡ್ರೋನ್ ಅಟ್ರೊವೈರೆನ್ಸ್, *Dolichandrone atrovirens*, ಗೊಡಮುರಕಿ; ಮಿಲ್ಲಿಂಗ್‌ಟೋನಿಯ ಹಾರ್ಟೆನ್ಸಿಸ್, *Millingtonia hortensis*, ಆಕಾಶಮಲ್ಲಿಗೆ; ರಾಡರ್‌ಮಕೆರ ಕ್ಸೈಲೊಕಾರ್ಪ, *Radermachera xylocarpa*, ಊಡಿಮರ ಮತ್ತು; ಸ್ಟಿರಿಯೊಸ್ಪರ್ಮಮ್ ಸ್ವಾವಿಯೊಲೆನ್ಸ್, *Stereospermum suaveolens*, ಬಿಳಿಪಾದ್ರಿ.

**Acanthaceae**: ಅಡತೊಡ ಜೈಲಾನಿಕ, *Adhatoda zeylanica*, ಅಡಸಾಲೆ; ಆಂಡ್ರೊಗ್ರಾಫಿಸ್ ಪಾನಿಕ್ಯುಲೇಟ, *Andrographics paniculata*, ಕಾಲಮೇಘ; ಆಂಡ್ರೊಗ್ರಾಫಿಸ್ ಗ್ಯಾಂಜೆಟಿಕ, *Andrographis gangetica;* ಆಂಡ್ರೊಗ್ರಾಫಿಸ್ ಮೈಸೂರೆನ್ಸಿಸ್, *Andrographis mysurensis*; ಬಾರ್ಲೆರಿಯ ಕ್ರಿಸ್ಟಾಟ, *Barleria cristata*, ಸ್ಫಟಿಕ; ಬಾರ್ಲೆರಿಯ ಕಸ್ಪಿಡೆಟ, *Barleria cuspidata*; ಬಾರ್ಲೆರಿಯ ಮೈಸೂರೆನ್ಸಿಸ್, *Barleria mysorensis*; ಬ್ಲೆಫಾರಿಸ್ ಮಾಡೆರಸ್ಪಟೆನ್ಸಿಸ್, *Blepharis maderaspatensis*; ಬ್ಲೆಫಾರಿಸ್ ರೆಪೆನ್ಸ್, *Blepharis repens*; ಕ್ರೊಸಾಂಡ್ರ ಇನ್‌ಫಂಡಿಬುಲಿಫಾರ್ಮಿಸ್, *Crossandra infundibuliformis*; ಡಿಪ್ಟೆರಕಾಂತಸ್ ಪಾಟುಲಸ್, *Dipteracanthus patulus*; ಡಿಪ್ಟೆರಕಾಂತಸ್ ಪ್ರೊಸ್ಟ್ರೇಟಸ್, *Dipteracanthus prostratus*; ಡೈಸ್ಕೊರಿಸ್ಟ ಇರೆಕ್ಟ, *Dyschoriste erecta*; ಡಿಸ್ಕೊರಿಸ್ತ ವಾಗನ್ಸ್ *Dyschoriste vagans*; ಎರಾಂತೆಮಮ್ ಕಾಪೆನ್ಸ್, *Eranthemum capense*; ಎರಾಂತೆಮಮ್ ರೋಸಿಯಂ, *Eranthemum roseum*; ಗಂಟೆಲ್ಬುವ ಯುರೆನ್ಸ್, *Gantelbua urens*; ಹೆಮಿಗ್ರಾಫಿಸ್ ಡುರ, *Hemigraphis dura*; ಹೆಮಿಗ್ರಾಫಿಸ್ ಲಾಟಿಬ್ರೋಸ, *Hemigraphis latebrosa*; ಹೈಗ್ರೊಫಿಲ ಪಾಲಿಸ್ಪರ್ಮ, *Hygrophila polysperma*; ಇಂಡೊನೀಸಿಯೆಲ್ಲ ಎಕ್ಕೆಯಾಯಿಡಿಸ್, *Indoneesiella echioides*; ಜಸ್ಟೀಸಿಯ ಗ್ಲಾಬ್ರ,

*Justicia glabra*; ಜಸ್ಟಿಸಿಯ ಕ್ವಿಂಕಿಆಂಗುಲಾರಿಸ್ *Justicia quinqueangularis*; ಲೆಪಿಡಾಗಾತಿಸ್ ಕ್ರಿಸ್ಟಾಟ, *Lepidagathis cristata*, ಗಂಟುಕಾಳುಗಡ್ಡೆ; ಮೆನಿಯ ಹಾಟೆನಿಯಾನ, *Meynia hawtayneana*; ನೆಲ್ಸೊನಿಯ ಕಾಂಪೆಸ್ಟ್ರಿಸ್, *Nelsonia campestris*; ಪಾಲೊಫ್ಸಿಸ್ ಡಾರ್ಸಿಫ್ಲೋರ, *Phaulopsis dorsiflora*; ರೈನಕಾಂತಸ್ ನಾಸುಟಸ್, *Rhinacanthus nasutus*; ಮತ್ತು ರೊಸ್ಟೆಲ್ಲುಲ್ಲೇರಿಯ ಪ್ರೊಕಂಬೆನ್ಸ್, *Rostellularia procumbens*.

**Verbenaceae**: ಕ್ಲೆರೊಡೆಂಡ್ರಮ್ ಪ್ಲೊಮಿಡಿಸ್, *Clerodendrum phlomidis*, ತಗ್ಗಿಗಿಡ; ಕ್ಲೆರೊಡೆಂಡ್ರಮ್ ಸೆರೇಟಂ, *Clerodendrum serratum*, ಗಂಟುಭಾರಂಗಿ; ಲಂಟಾನ ಇಂಡಿಕ, *Lantana indica*, ಲಂಟವಾಣೆ; ಪ್ರಿವ ಕಾರ್ಡಿಫೋಲಿಯ, *Priva cordifolia;* ಸ್ಟಾಕಿಟಾರ್ಪೇಟ ಜಮೈಕೆನ್ಸಿಸ್, *Stachytarpheta jamaicensis*; ಮತ್ತು ಸಿಂಫೊರಿಯ ಪಾಲಿಯಾಂಡ್ರಂ, *Symphorema polyandrum.*

**Lamiaceae** : ಅನಿಸೊಮಿಲಿಸ್ ಇಂಡಿಕ, *Anisomeles indica*, ಮಂಗಮಾರಿ ಸೊಪ್ಪು; ಲಾವಂಡುಲ ಬೈಪಿನ್ನಾಟ, *Lavandula bipinnata*, ಸರ್ಪಾರಿ; ಲ್ಯುಕಾಸ್ ಲಾವಂಡುಲಿಫೋಲಿಯ, *Leucas lavandulifolia;* ಲ್ಯೂಕಾಸ್ ಮಾರ್ಟಿನಿಸೆನ್ಸಿಸ್, *Leucas martinicensis*; ಲ್ಯೂಕಾಸ್ ಸ್ಟ್ರಿಕ್ಟ, *Leucas stricta*; ಲ್ಯೂಕಾಸ್ ಅರ್ಟಿಸಿಫೊಲಿಯ, *Leucas urticifolia*; ಪ್ಲೆಕ್ಟ್ರಾಂತಸ್ ಮೊಲಿಸ್, *Plectranthus mollis.*

**Nyctaginaceae**: ಕಾಮಿಕಾರ್ಪಸ್ ಕೈನೆನ್ಸಿಸ್, *Commicarpus chinensis.*

**Amaranthaceae**: ಅಕಿರಾಂತಿಸ್ ಅಸ್ಪೆರಾ, *Achyranthes aspera*, ಉತ್ತರಾಣಿ; ಎರ್ವ ಜವಾನಿಕ, *Aerva javanica*, ದೊಡ್ಡಹಿಂಡಿ ಗಿಡ; ಎರ್ವ ಸಾಂಗ್ವಿನೊಲೆಂಟ, *Aerva sanguinolenta*; ಆಲ್ಟರ್‌ನಾಂತೆರ ಸೆಸಿಲಿಸ್, *Alternanthera sessilis*; ಮತ್ತು ಡೈಜೆರ ಮೂರಿಕೇಟ*Digera muricata*, ಕಂಕಲಿ ಸೊಪ್ಪು.

**Chenopodiaceae**: ಕಿನೊಪೋಡಿಯಂ ಅಲ್ಬಂ, *Chenopodium album*, ಹುಚ್ಚು ಚಕೋತ; ಮತ್ತು ಕಿನೊಪೋಡಿಯಂ ಮೂರೆಲ್, *Chenopodium murale.*

**Polygonaceae**: ಪಾಲಿಗೋನಂ ಕೈನೆನ್ಸ್, *Polygonum chinense*, ಬಿಳಿಕೊಂಡೆ; ಮತ್ತು ರೂಮೆಕ್ಸ್ ಡೆಂಟೇಟಸ್, *Rumex dentatus.*

**Aristolochiaceae**: ಅಲಿಸ್ಟೊಲಾಕಿಯ ಬ್ರಾಕ್ಟಿಯೊಲೇಟ, *Aristolochia bracteolata*, ಕುರಿಗಿಡ.

**Piperaceae**: ಪೈಪರ್ ಗೆಲಿಯೇಟಂ, *Piper galeatum*; ಪೈಪರ್ ಲಾಂಗಂ, *Piper longum;* ಮತ್ತು ಪೈಪರ್ ನಿಗ್ರಂ, *Piper nigrum*, ಕರಿಮೆಣಸು.

**Lauraceae**: ಸಿನ್ನಾಮೊಮಮ್ ವೆರಂ, *Cinnamomum verum*, ದಾಲ್ಚಿನ್ನಿ; ಕ್ರಿಪ್ಟೊಕಾರ್ಯ ಬೋರ್ಡಿಲೋನಿ, *Cryptocarya bourdillonii*; ಲಿಟ್‌ಸಿಯ ಕೈನೆನ್ಸಿಸ್, ಮತ್ತು *Litsea chinensis*, ಲಕ್ಕಿ.

**Loranthaceae**: ವಿಸ್ಕಂ ಆರ್ಟಿಕುಲೇಟಂ, *Viscum articulatum.*

**Santalaceae**: ಸಂಟಾಲಂ ಅಲ್ಬಂ, *Santalum album*, ಶ್ರೀಗಂಧ.

**Euphorbiaceae**: ಅಕಾಲಿಫ ಫಲಾಕ್ಸ್, *Acalypha fallax*; ಅಕಾಲಿಫ ಇಂಡಿಕಾ, *Acalypha indica*, ಹರಿತ ಮಂಜರಿ; ಬ್ರಿಡೆಲಿಯ ಸ್ಟಿಪುಲಾರಿಸ್, *Bridelia stipularis*, ಬಿಸಲ ಬೆಳ್ಳಿ; ಕ್ರೊಜೋಫೊರ ಪ್ರೊಸ್ಟ್ರೆಟ, *Chrozophora prostrata;* ಕ್ರೊಜೋಫೊರ ರಾಟ್ಲೇರಿ, *Chrozophora rottleri*, ಲಿಂಗಮೆಣಸು; ಕ್ಲಿಡಿಅನ್ ಸ್ಪಿಸಿಫ್ಲೊರಂ, *Cleidion spiciflorum*,

ಅಂಕಲಿ; ಡ್ರೈಪಿಟಿಸ್ ವೆನುಸ್ಟ, *Drypetes venusta*; ಯುಫರ್ಬಿಯ ಆಂಟಿಕೋರಂ, *Euphorbia antiquorum*, ಬೊಂತೆಕಳ್ಳಿ; ಯುಫರ್ಬಿಯ ಕಾಕ್ಸನಿಯ, *Euphorbia coccinea;* ಯುಫರ್ಬಿಯ ಕೊರಿಜಿಯೊಲಾಯಿಡಿಸ್, *Euphorbia corrigioloides*; ಯುಫರ್ಬಿಯ ಕ್ರಿಸ್ಟಟ, *Euphorbia cristata*; ಯುಪರ್ಬಿಯ ಜೆನಿಕುಲೇಟ, *Euphorbia geniculata*, ಭೇದಿಸೊಪ್ಪು; ಯುಪರ್ಬಿಯ ಹೆಟಿರೊಪ್ಪೆಲ, *Euphorbia heterophylla*; ಯುಪರ್ಬಿಯ ಹೈಯನಿಯಾನ, *Euphorbia heyneana*; ಯುಪರ್ಬಿಯ ಹಿರ್ಟ, *Euphorbia hirta*, ನಗರಜುನಿ; ಯುಪರ್ಬಿಯ ಇಂಡಿಕ, *Euphorbia indica*; ಯುಪರ್ಬಿಯ ಲೀಟ, *Euphorbia laeta*; ಯುಪರ್ಬಿಯ ಪರ್‌ಬ್ರಾಕ್ಟಿಯೇಟ, *Euphorbia perbracteata*; ಯುಪರ್ಬಿಯ ಪ್ರೊಸ್ಟ್ರೆಟ, *Euphorbia prostrata*; ಯುಪರ್ಬಿಯ ತಿರುಕಳ್ಳಿ, *Euphorbia tirucalli*, ಎಲೆಗುಳ್ಳ, ಹಾಲಗಳ್ಳಿ; ಜಿವೊಟಿಯ ರಾಟ್ಲೆರಿಫಾರ್ಮಿಸ್, *Givotia rottleriformis*, ಬಿಳಿ ಪೊಳಿಕು; ಕಿರ್ಗನೆಲಿಯ ರೆಟಿಕ್ಯುಲೇಟ, *Kirganelia reticulata*; ಫಿಲ್ಲಾಂತಸ್ ಮಾಡೆರಸ್ಪಟೆನ್ಸಿಸ್, *Phyllanthus maderaspatensis*; ಫಿಲ್ಲಾಂತಸ್ ವಿರ್ಗಟಸ್, *Phyllanthus virgatus*; ಸೆಕ್ಯೂರಿನೆಗ ಲ್ಯೂಕೊಪೈರಸ್, *Securinega leucopyrus*; ಮತ್ತು ಟ್ರಾಜಿಯ ಹಿಸ್ಪಿಡ, *Tragia hispida*.

**Ulmaceae**: ಹೋಲೋಪ್ಟಿಲಿಯ ಇಂಟೆಗ್ರಿಪೊಲಿಯ, *Holoptelea integrifolia*, ತಪಸಿ.

**Moraceae**: ಆರ್ಟೋಕಾರ್ಪಸ್ ಗೊಮೆಜಿಯಾನಸ್, *Artocarpus gomezianus*; ಫೈಕಸ್ ಡ್ರೂಪೆಸಿಯ, *Ficus drupacea*, ಬಿಳಿ ಗೋಳಿ; ಫೈಕಸ್ ವೈರೆನ್ಸ್, *Ficus virens*, ಬಸರಿ ಮರ; ಮೊರಸ್ ಮಾಕ್ರೂರ, *Morus macroura;* ಪ್ಲಿಕೊಸ್ಪರ್ಮಮ್ ಸ್ಪೈನೋಸಂ, *Plecospermum spinosum*, ಬೆಂಡಕ ಮತ್ತು ಸ್ಟ್ರೆಬ್ಲಸ್ ಆಸ್ಪರ್, *Streblus asper*, ಮಿಟ್ಟೆಮರ.

**Casuarinaceae**: ಕ್ಯಾಸುರೈನ ಈಕ್ವಿಸೆಟಿಪೋಲಿಯ, *Casuarina equisetifolia*, ಸರ್ವೆ.

**Orchidaceae**: ಎರಿಯ ಮೈಸೂರೆನ್ಸಿಸ್, *Eria mysorensis*; ಯುಲೊಫಿಯ ರೆಮೆಂಟೇಸಿ, *Eulophia ramentacea*; ಹೆಬೆನೆರಿಯ ಗ್ರಾಂಡಿಪ್ಲೊರಿಫಾರ್ಮಿಸ್, *Habenaria grandifloriformis*, ನೆಲದಾವರೆ; ಹೆಬೆನೆರಿಯ ಹೈನಿಯಾನ, *Habenaria heyneana*; ಹೆಬೆನೆರಿಯ ಲಾಂಗಿಕಾರ್ನಿಕುಲೇಟ, *Habenaria longicorniculata*; ಹೆಬೆನೆರಿಯ ಮಾರ್ಜಿನೇಟ *Habenaria marginata*; ಹೆಬೆನೆರಿಯ ರಾಕ್ಸಬರ್ಗಿ, *Habenaria roxburghi*; ಪೆರಿಸ್ಟೈಲಿಸ್ ಲಾಯಿ, *Peristylus lawii*; ರಿಂಕೊಸ್ಟೈಲಿಸ್ ರೆಟೂಸ, *Rhyncostylis retusa*; ಮತ್ತು ಝೂಕ್ಸಿನ ಸ್ಟ್ರಾಟೆಮಾಟಿಕ, *Zeuxina strateumatica*.

**Zinziberaceae**: ಕರ್ಕೂಮ ನೀಲಗಿರೆನ್ಸಿಸ್, *Curcuma neilgherrensis.*

**Hypoxidaceae**: ಕರ್ಕುಲಿಗೊ ಆರ್ಕಿಯೊಯಿಡಿಸ್, *Curculigo orchioides*, ನೆಲದಾಳಿ.

**Dioscoreaceae**: ಡಯೊಸ್ಕೊರಿಯ ಸಟೈವ, *Dioscorea sativa*, ಹೆಗ್ಗೆಣಸು.

**Asparagaceae**: ಅಸ್ಪರೇಗಸ್ ಏಷಿಯಾಟಿಕಸ್, *Asparagus asiaticus*; ಮತ್ತು ಅಸ್ಪರೇಗಸ್ ರೆಸಿಮೋಸಸ್, *Asparagua racemosus*, ಶತಾವರಿ.

**Liliaceae**: ಕ್ಲೊರೊಪೈಟಮ್ ಲೆಕ್ಷಮ್, *Chlorophytum lexum.*

**Commelinaceae**: ಕಾಮ್ಮೆಲಿನ ಸುಬುಲೇಟ, *Commelina subulata*; ಮತ್ತು *Cyanotis tuberosa.*

**Arecaceae** : ಪೊನಿಕ್ಸ್ ಹ್ಯೂಮಿಲಿಸ್, *Phoenix humilis*, ಕಿರಿ ಈಚಲು.

**Alismataceae**: ಲಿಮ್ನೊಫೈಟಾನ್ ಒಬ್ಟೂಸಿಫೋಲಿಯಂ, *Limnophyton obtusifolium.*

**Aponogetonaceae**: ಅಪೊನೊಗೆಟಾನ್ ನಟನ್ಸ್, *Aponogeton natans.*

**Eriocaulaceae**: ಎರಿಯೊಕಾಲನ್ ರೊಬಸ್ಟೊಬ್ರೌನಿಯಾನಮ್, *Eriocaulon robusto-brownianum.*

**Cyperaceae**: ಸೈಪೆರಸ್ ಆರ್ಟಿಕುಲೇಟಸ್, *Cyperus articulatus*, ಜಂಬು ಹುಲ್ಲು; ಸೈಪೆರಸ್ ಎಕ್ಸಾಲ್ಟೆಸಸ್, *Cyperus exaltatus*, ಕೆಂಪು ಜಂಬುಹುಲ್ಲು; ಸೈಪೆರಸ್ ಇರಿಯ, *Cyperus iria*, ದಬ್ಬೆ ಜಂಬುಹುಲ್ಲು; ಸೈಪೆರಸ್ ರೊಟಂಡಸ್, *Cyperus rotundus*, ಜೇಕಿನ ಗಡ್ಡೆ; ಫಿಂಬ್ರಿಸ್ಟೈಲಿಸ್ ಬೈಸಂಬೆಲ್ಲೇಟ, *Fimbristylis bisumbellata*; ಫಿಂಬ್ರಿಸ್ಟೈಲಿಸ್ ಕಂಪ್ಲಾನೇಟ, *Fimbristylis complanata*; ಫಿಂಬ್ರಿಸ್ಟೈಲಿಸ್ ಫೆರುಜಿನಿಯ, *Fimbristylis ferruginea*; ಫಿಂಬ್ರಿಸ್ಟೈಲಿಸ್ ಟೆಟ್ರಾಗೊನ, *Fimbristylis tetragona*; ಫಿಂಬ್ರಿಸ್ಟೈಲಿಸ್ ವಾಲಿಚಿಯಾನ, *Fimbristylis wallichiana*; ಕೈಲಿಂಗ ನೆಮೊರಾಲಿಸ್, *Kyllinga nemoralis*; ಮಾರಿಸ್ಕಸ್ ಬುಲ್ಬೊಸಸ್, *Mariscus bulbosus*; ಮಾರಿಸ್ಕಸ್ ಸ್ಕ್ವರೋಸಸ್, *Mariscus squarrosus*; ರಿಂಕೊಸ್ಪೊರ ರುಗೋಸ, *Rhynchospora rugosa*; ಶೋನೋಪ್ಲೆಕ್ಟಸ್ ಆರ್ಟಿಕ್ಯುಲೇಟಸ್, *Schoenoplectus articulatus*; ಮತ್ತು ಶೋನೋಪ್ಲೆಕ್ಟಸ್ ಲಿಟೊರಾಲಿಸ್, *Schoenoplectus litoralis.*

**Poaceae**: ಅಲ್ಲೊಟೆರೊಪ್ಸಿಸ್ ಸಿಮಿಸಿನ, *Alloteropsis cimicina*; ಅರಿಸ್ಟಿಡ ಅಡ್‌ಸೆನ್ಸಿಯಾನಿಸ್, *Aristida adscensionis*; ಅರಿಸ್ಟಿಡ ಹೈಸ್ಟ್ರಿಕ್ಸ್, *Aristida hystrix*, ಬಿಳಿ ಹುನುಗದ ಹುಲ್ಲು; ಅರಿಸ್ಟಿಡ ರೆಡಾಕ್ಟ, *Aristida redacta*, ಉಷ್ಣುನಿ ಹುಲ್ಲು; ಅರಿಸ್ಟಿಡ ಸಿಟೆಸಿಯ, *Aristida setacea*, ಹಂಚಿಹುಲ್ಲು; ಅಂತ್ರಾಕ್ಸನ್ ಹಿಸ್ಪಿಡಸ್, *Anthraxon hispidus*; ಅಂತ್ರಾಕ್ಸನ್ ಲಾನ್ಸಿಯೋಲೇಟಸ್, *Anthraxon lanceolatus*, ಹರಜಾಲ; ಅಂತ್ರಾಕ್ಸನ್ ಲಾನ್ಸಿಫೋಲಿಯಸ್, *Anthraxon lancifolius*; ಅಂತ್ರಾಕ್ಸನ್ ಟ್ಯೂಬರ್‌ಕ್ಯುಲೇಟ, *Anthraxon tuberculatus*; ಬ್ರಾಕಿಏರಿಯಾ ಡಿಸ್ಟಾಕ್ಯ, *Brachiaria dustachya*, ಹಂಬುಹಾರಕ ಹುಲ್ಲು; ಬ್ರಾಕಿಏರಿಯಾ ಎರುಸಿಫಾರ್ಮಿಸ್, *Brachiaria eruciforms*, ಅಂಟುಗರಿಕೆ ಹುಲ್ಲು; ಬ್ರಾಕಿ ಏರಿಯಾ ರಮೋಸ, *Brachiaria ramosa*, ಕಾಡುಬರಗು ಹುಲ್ಲು; ಕೈಯೊನಾಕ್ನೆ ಕೊಯಿನಿಗಿ, *Chionachne koenigii*, ದಬ್ಬೆಹುಲ್ಲು; ಕ್ಲೊರಿಸ್ ಬಾರ್ಬೆಟ, *Chloris barbata*, ಗೊಂಡೆವೇಲ; ಕ್ಲೊರಿಸ್ ಡಾಲಿಕೊಸ್ಟಾಕ್ಯ, *Chloris dolichostachya*; ಕ್ಲೊರಿಸ್ ವಿರ್ಗಟ, *Chloris virgata*, ಗುಡಿಹುಲ್ಲು; ಸೀಲಕೈರಂ ಲೋಗೋಪಾಯಿಡಿಸ್, *Coelachurum lagopoides*; ಕಾಯಿಕ್ಸ ಲಾಕ್ರಿಮಜೋಬಿ, *Coix lacrymajobi*, ಕೊತ್ತಿಬೀಜ; ಕಾಯಿಕ್ಸ್ ಮಾರ್ಟಿನಿ, *Coix martinii*; ಸೈನೊಡಾನ್ ಡಾಕ್ಟಿಲಾನ್, *Cynodon dactylon*, ಗರಿಕೆ; ಸೈನೊಡಾನ್ ಪಟೆನ್ಸ್, *Cynodon patens;* ಡೆಂಡ್ರೊಕಲಾಮಸ್ ಸ್ಟ್ರಿಕ್ಟಸ್, *Dendrocalamus strictus*, ಕಿರಿಬಿದಿರು; ಡೈಕಾಂತಿಯಂ ಕಾರಿಕೋಸಂ, *Dichanthium caricosum*; ಡೈಕಾಂತಿಯಂ ಫಿಲಿಕಲ್ಮೆ, *Dichanthium filiculme*; ಡೈಕಾಂತಿಯಂ ಹ್ಯೂಗೆಲಿ, *Dichanthium huegelii*; ಡೈಕಾಂತಿಮಂ ಪರ್ಟೂಸಂ, *Dichanthium pertusum*; ಡಿಜಿಟೇರಿಯ ಅಬ್ಲುಡೆನ್ಸ್, *Digitaria abludens;* ಡಿಜಿಟೇರಿಯ ಲಾಂಗಿಫ್ಲೊರ, *Digitaria longiflora*, ದೊಡ್ಡಕ್ಕಿ ಹುಲ್ಲು; ಡಿಜಿಟೇರಿಯ ಸ್ಟ್ರಿಕ್ಟ, *Digitaria stricta;* ಡಿಜಿಟೇರಿಯ ಟರ್ನೆಟ, *Digitaria ternata*, ಅಕ್ಕಬ ಹುಲ್ಲು; ಟಿಜಿಟೇರಿಯ ರೆಟ್ರೊಫ್ಲೆಕ್ಸ, *Digitaria retroflexa*, ನರಿಬಾಲದ ಹುಲ್ಲು; ಎಕೈನೋಕ್ಲೊವ ಸ್ಟಾಗ್ನಿನ, *Echinochloa stagnina*, ಗೂಡುಭತ್ತದ ಹುಲ್ಲು; ಎಲಿಟ್ರೊಫೋರಸ್ ಸ್ಪೈಕೇಟಸ್, *Elytrophorus spicatus*, ನೆಲ ಅಂತಬು ಹುಲ್ಲು; ಎರಗ್ರೋಸ್ಟಿಯೆಲ್ಲ ಬೈಫೇರಿಯ, *Eragrostiella bifaria;* ಎರಗ್ರೋಸ್ಟಿಯೆಲ್ಲ ಬ್ರಾಕಿಫೈಲ್ಲ, *Eragrostiella brachyphylla*; ಎರಗ್ರೊಸ್ಟಿಸ್ ಅಸ್ಪರ್, *Eragrostis asper*; ಎರಗ್ರೊಸ್ಟಿಸ್ ಸಿಲಿಯನೆನ್ಸಿಸ್, *Eragrostis cilianensis*, ಬೆಟ್ಟದ ಅಕ್ಕಾಬು ಹುಲ್ಲು; ಎರಗ್ರೊಸ್ಟಿಸ್ ಮೈನರ್, *Eragrostis minor*, ಎರಗೋಸ್ಟಿಸ್ ನಟನ್ಸ್, *Eragrostis nutans*; ಎರಗ್ರೊಸ್ಟಿಸ್ ಪಿಲೋಸ, *Eragrostis pilosa*; ಎರಗ್ರೊಸ್ಟಿಸ್ ಟೆನುಫೋಲಿಯ, *Eragrostis tenuifolia*, ದೊಡ್ಡಗರಿಕೆ ಹುಲ್ಲು ; ಎರಗ್ರೊಸ್ಟಿಸ್ ವಿಸ್ಕೋಸ, *Eragrostis viscosa;* ಎರೆಮೊಪೊಗನ್ ಫೊವಿಒಲೇಟಸ್, *Eremopogan feveolatus*; ಎರಿಒಕ್ಲೊಅ ಪ್ರೊಸೆರ, *Eriochloa procera*;

ಎರಿಒಕ್ಲೋಅ ಟ್ರೈಸ್ಪಕಾಟ, *Eriochloa trispicata*; ಗಾರ್ನೋಟಿಯ ಫರ್ಗೂಸೋನಿ, *Garnotia fergusonii;* ಹ್ಯಾಕಿಲೊಕ್ಲೋಅ ಗ್ರಾನುಲಾರಿಸ್, *Hackelochloa granularis*, ಕಾಡುಹಾರಕ ಹುಲ್ಲು ; ಹೈಮೆನಾಕ್ನೆ ಸೂಡೋಇಂಟರಪ್ಟ, *Hymenachne pseudointerrupta*; ಐಸಾಕ್ನೆ ಎಲಿಗಾನ್ಸ್, *Isachne elegans*; ಐಸಾಕ್ನ ಗ್ಲೋಬೋಸ, *Isachne globosa*; ಐಸಾಕ್ನ ಪಿಲೋಸಂ, *Isachne pilosum*; ಐಸಿಲೆಮ ಲಾಕ್ಸಂ, *Iseilema laxum*; ಐಸಿಲೆಮ ಪ್ರೊಸ್ಟ್ರೆಟಂ, *Iseilema prostratum*; ಲೊಫೊಪೋಗನ್ ಟ್ರೈಡೆಂಟೇಟಸ್, *Lophopogon tridentatus;* ಮೆಲನ್‌ಸೆಂಕ್ರಿಸ್ ಜಾಕ್ವೆಮೊಂಟಿ, *Malancechris jacquemontii;* ಮೈಕ್ರೊಕ್ಲೊ ಅ ಇಂಡಿಕ, *Michrochloa indica*, ನವಿಲು ಬಣ್ಣದ ಹುಲ್ಲು; ಒಪ್ಲಿಸ್‌ಮೆನಸ್ ಬರ್ಮನಿ, *Oplismenus burmannii;* ಒಪ್ಲಿಸ್‌ಮೆನಸ್ ಕಾಂಪೊಸಿಟಸ್, *Oplismenus compositus*, ಕೋಳಿಜುಟ್ಟು ಗೆಡ್ಡೆ; ಯುರೋಕ್ಲೋಅ ಪಾನಿಕೊಯಿಡಿಸ್, *Urochloa panicoides*, ಕಾಡುಬಿಳಿಸಾವೆ ಹುಲ್ಲು; ವೆಟಿವೆರಿಯ ಲಾಸೊನಿ, *Vetiveria lawsonii*; ಒರೊಪಿಟಿಯಂ ರಾಕ್ಸ್‌ಬರ್ಗಿಯಾನಮ್, *Oropetium roxburghianum*; ಒರೊಪೆಟಿಯಂ ತೋಮಿಯಂ, *Oropetium thomaeum*; ಪ್ಯಾನಿಕಂ ಆಂಟಿಡೊಟೇಲ್, *Panicum antidotale*, ಪಿನಸಿ ಹುಲ್ಲು; ಪ್ಯಾನಿಕಂ ಸುಮಾತ್ರೆನ್ಸ್, *Panicum sumatrense*; ಪಾಸ್ಪಲಿಡಿಯಂ ಜೆಮಿನೇಟಂ, *Paspalidium geminatum*, ಗದ್ದೆಬದುವಿನ ಹುಲ್ಲು; ಪಾಸ್ಪಾಲಂ ಹೊಹೆನಕೇರಿ, *Paspalum hohenackeri*; ಫ್ರಗ್ಮಿಟಿಸ್ ಕಾರ್ಕ, *Phragmitis karka*, ಹುಲುಗಿಲ ಹುಲ್ಲು; ಸ್ಯೂಡಂತಿಸ್ಟಿರಿಯ ಹೆಟಿರೊಕ್ಲಿಟ, *Pseudanthistiria heteroclita;* ಸ್ಯೂಡಂತಿಸ್ಟಿರಿಯ ಹಿಸ್ಪಿಡ, *Pseudanthistiria hispida*; ಸೂಡೊರಾಪಿಸ್ ಸ್ಪೈನೆಸೆನ್ಸ್, *Pseudoraphis spinescens*; ರಾಟ್‌ಬೊಎಲ್ಲಿಯ ಕಾಕ್ಸಿನ್‌ಕೈನೆನಿನ್ಸ್, *Rottboellia cochinchinensis*; ಸಕ್ಕರಂ ಅಫಿಸಿನಾರಂ, *Saccharum officinarum*, ಕಬ್ಬು; ಸಕ್ಕರಂ ಸ್ಪಾಂಟೇನಿಯಂ, *Saccharum spontaneum*, ಕಡುಕಬ್ಬು; ಸಕ್ಕೊಲೆಪಿಸ್ ಇಂಟರಪ್ಟ, *Saccolepis interrupta*; ಸಹಿಮ ನರ್ವೊಸಂ, *Sehima nervosum*, ಚಿಕ್ಕಸಾಡಿ ಹುಲ್ಲು; ಸೆಹಿಮ ಸಲ್ಕೇಟಂ, *Sehima sulcatum*; ಸಿತೇರಿಯ ಇಟಾಲಿಕ, *Setaria italica*, ನವಣೆ; ಸಿತೇರಿಯ ಪೂಮಿಲ, *Setaria pumila*; ಸಿತೇರಿಯ ವರ್ಟಿಸಿಲ್ಲಾಟ, *Setaria verticillata*; ಸ್ಪಡಿಯೊಪೊಗಾನ್ ರೈಜೋಫೋರಸ್, *Spodiopogon rhizophorus*; ಸ್ಪೊರೋಬೋಲಸ್ ಕ್ಯಾಪಿಲಾರಿಸ್, *Sporobolus capillaris;* ಸ್ಪೊರೋಬೋಲಸ್ ಕೊರೊಮಂಡೆಲಿಯಾನಸ್, *Sporobolus coromandelianus*, ನರಿಬಾಲದ ಹೆಣ್ಣು ಹುಲ್ಲು; ಸ್ಪೊರೋಬೋಲಸ್ ಇಂಡಿಕಸ್, *Sporobolus indicus;* ಸ್ಪೊರೋಬೋಲಸ್ ಪಿಲಿಫೆರಸ್, *Sporobolus piliferus*; ಸ್ಪೊರೋಬೋಲಸ್ ಟ್ರೆಮುಲಸ್, *Sporobolus tremulus;* ತೆಲಿಪೊಗನ್ ಎಲಿಗನ್ಸ್, *Thelepogon elegans;* ತೆಮಿಡ ಟ್ರೈಯಾಂಡ್ರ, *Themeda triandra*, ಚಿಟ್ಟಂಚಿ ಹುಲ್ಲು; ಟ್ರಾಕಿಸ್ ಮ್ಯೂರಿಕೇಟ, *Trachys muricata*; ಟ್ರಾಗಸ್ ರಾಕ್ಸಬರ್ಗಿ, *Tragus roxburghii*; ಟ್ರೈಪೊಗಾನ್ ಬ್ರೊಮೊಯಿಡಿಸ್, *Tripogon bromoides*; ಮತ್ತು ಟ್ರೈಪೊಗಾನ್ ಜಾಕ್ವೆಮೊಂಟಿ, *Tripogon jacquemontii*.

**Scrophulariaceae**: ಲಿಮ್ನೊಫಿಲ ಇಂಡಿಕ, *Limnophila indica*; ಸೊಪುಬಿಯ ವಿಸ್ಕೋಸ, *Sopubia viscosa;* ಸ್ಟ್ರಿಗ ಅಂಗಸ್ಟಿಫೋಲಿಯ, *Striga angustifolia*; ಮತ್ತು ಸ್ಟ್ರಿಗ ಡೆನ್ಸಿಫ್ಲೋರ, *Striga densiflora* ಬಿಳಿ ಚಿಕ್ಕಿನ ಗಿಡ.

## ಅರಣ್ಯ ಸಂಪತ್ತು

ಅರಣ್ಯ ಇಲಾಖೆಯ ವರದಿಯ ಪ್ರಕಾರ ಜಿಲ್ಲೆಯಲ್ಲಿರುವ 13,782 ಚ.ಕಿ. ಮೀ ಭೂ ಪ್ರದೇಶದಲ್ಲಿ 1,436.73 ಚ.ಕಿ.ಮೀ.ನಷ್ಟು ಭೂಪ್ರದೇಶವು ಅರಣ್ಯ ಇಲಾಖೆಯ ಸ್ವಾಧೀನದಲ್ಲಿದೆ. ಇದರಲ್ಲಿ ಮೀಸಲು ಅರಣ್ಯ ಪ್ರದೇಶ 1,271.54 ಚ.ಕಿ.ಮೀ. ಪ್ರದೇಶದಲ್ಲೂ, ರಕ್ಷಿಸಲ್ಪಟ್ಟ ಅರಣ್ಯ ಪ್ರದೇಶ 14.01 ಚ.ಕಿ.ಮೀ. ಪ್ರದೇಶದಲ್ಲೂ, ವರ್ಗೀಕರಿಸಿದ ಅರಣ್ಯ ಪ್ರದೇಶ 93.21 ಚ.ಕಿ.ಮೀ. ಪ್ರದೇಶದಲ್ಲೂ ಹಾಗೂ ಖಾಸಗಿ ಅರಣ್ಯ ಪ್ರದೇಶ 57.97 ಚ.ಕಿ.ಮೀ. ಪ್ರದೇಶದಲ್ಲೂ ಹರಡಿದೆ. 1991-92ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆಗಳ ವರದಿಯಂತೆ ತಾಲೂಕುವಾರು ಅರಣ್ಯ ಪ್ರದೇಶ (ಹೆಕ್ಟೇರುಗಳಲ್ಲಿ) ಮತ್ತು ಜಿಲ್ಲೆಯ ಅರಣ್ಯ ಪ್ರದೇಶದ ಶೇಕಡಾವಾರು ಅಂಕಿ ಅಂಶಗಳು ಹೀಗಿವೆ: ಕಲಘಟಗಿ 19,526 (16.95); ಮುಂಡರಗಿ 17,646 (15.32); ಧಾರವಾಡ 13,554 (11.77):

ಶಿರಹಟ್ಟಿ 12,943 (11.24); ರಾಣೆಬೆನ್ನೂರು 10,614 (9.22); ಶಿಗ್ಗಾಂವಿ 9,951 (8.64); ಹಿರೇಕೆರೂರು 8,876 (7.71); ಹಾನಗಲ್ 8,474 (7.36); ಬ್ಯಾಡಗಿ 4,889 (4.24); ಹಾವೇರಿ 3,849 (3.34); ಹುಬ್ಬಳ್ಳಿ 2,033 (1.77); ಗದಗ 1,749 (1.52); ಸವಣೂರು 801 (0.70); ಮತ್ತು ರೋಣ 276 (0.24). ನರಗುಂದ, ನವಲಗುಂದ ಮತ್ತು ಕುಂದಗೋಳ ತಾಲೂಕುಗಳಲ್ಲಿ ಗಮನಾರ್ಹ ಪ್ರಮಾಣದಲ್ಲಿ ಅರಣ್ಯ ಪ್ರದೇಶ ಕಂಡುಬರುವುದಿಲ್ಲ. ಪ್ರತಿ ತಾಲೂಕಿನ ಭೌಗೋಳಿಕ ಕ್ಷೇತ್ರದಲ್ಲಿರುವ ಅರಣ್ಯ ಪ್ರದೇಶದ ಶೇಕಡಾವಾರು ಅಂಕಿ ಅಂಶಗಳು ಹೀಗಿವೆ: ಕಲಘಟಗಿ 28.4, ಮುಂಡರಗಿ 19.96, ಶಿಗ್ಗಾಂವಿ 16.89, ಶಿರಹಟ್ಟಿ 13.64, ಧಾರವಾಡ 12.12, ರಾಣೆಬೆನ್ನೂರು 11.73, ಬ್ಯಾಡಗಿ 11.20, ಹಿರೇಕೆರೂರು 11.0, ಹಾನಗಲ್ 10.93, ಹಾವೇರಿ 4.81, ಹುಬ್ಬಳ್ಳಿ 2.76, ಗದಗ 1.59, ಸವಣೂರು 1.49 ಮತ್ತು ರೋಣ 0.21. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಹೆಚ್ಚು ಅರಣ್ಯ ಪ್ರದೇಶ ಕಂಡುಬರುತ್ತದೆ. ರಾಜ್ಯದಲ್ಲಿ ಅರಣ್ಯ ಪ್ರದೇಶವು ಭೌಗೋಳಿಕ ಕ್ಷೇತ್ರದ ಶೇ 20 ರಷ್ಟಿದ್ದು ಅಖಿಲ ಭಾರತದ ಇದೇ ಸರಾಸರಿ ಪ್ರಮಾಣವು ಸುಮಾರು ಶೇ 23 ಇದೆ. ಇದು ಶೇ 33.33 ಇರಬೇಕೆಂದು ರಾಷ್ಟ್ರೀಯ ಅರಣ್ಯ ನೀತಿಯಲ್ಲಿ ಗೊತ್ತುಪಡಿಸಿದೆ. ಆದರೆ ಜಿಲ್ಲೆಯಲ್ಲಿನ ಅರಣ್ಯ ಕ್ಷೇತ್ರದ ಶೇಕಡಾವಾರು ಪ್ರಮಾಣವು (8.47) ಗೊತ್ತುಪಡಿಸಿದ ಪ್ರಮಾಣಕ್ಕಿಂತ ಅತ್ಯಂತ ಕಡಿಮೆ ಇದೆ.

ಜಿಲ್ಲೆಯಲ್ಲಿ ತಲಾ ಅರಣ್ಯ ಕ್ಷೇತ್ರವು 0.04 ಹೆಕ್ಟೇರುಗಳಾಗಿವೆ. ತಲಾ ಇಷ್ಟು ಕಡಿಮೆ ಪ್ರಮಾಣದಿಂದ ಜನರ ಅಥವಾ ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸುವುದು ಕಠಿಣವಿದೆ. ಜಿಲ್ಲಾ ಅರಣ್ಯ ಕ್ಷೇತ್ರವು ಬೆಳಗಾವಿ ಅರಣ್ಯ ವೃತ್ತಕ್ಕೆ ಸೇರಿದ ಧಾರವಾಡ ಮತ್ತು ಗದಗ ವಿಭಾಗಗಳಲ್ಲಿ ವಿಸ್ತರಿಸಿದೆ. ಜಿಲ್ಲೆಯಲ್ಲಿ ಸ್ವಲ್ಪ ತೇವವಿರುವ ಹಾಗೂ ಉದುರೆಲೆ ಅರಣ್ಯಗಳು ಬೆಳೆಯುವುವು. ಈ ಪ್ರಕಾರಗಳ ಅರಣ್ಯಗಳು ಉತ್ತಮ ಮೊಪಿನ ಮರಗಳಿಂದ ಸಮೃದ್ಧವಾಗಿವೆ. ಬೀಟೆ, ತೇಗ, ಹೊನ್ನೆ ಮತ್ತು ನಂದಿ ಮುಂತಾದ ಮರಗಳು ಇಲ್ಲಿ ನೈಸರ್ಗಿಕವಾಗಿಯೇ ಬೆಳೆಯುವುವು. ಈ ಅರಣ್ಯಗಳು ಮರಮಟ್ಟಿನ ಉತ್ಪತ್ತಿಗೆ, ಸೌದೆ ಉತ್ಪತ್ತಿಗೆ ಮತ್ತು ಆಡಳಿತಾತ್ಮಕ ದೃಷ್ಟಿಕೋನದಿಂದಲೂ ಮಹತ್ವದ್ದಿವೆ. ಕುರುಚಲು ಮತ್ತು ಮುಳ್ಳಿನ ಅರಣ್ಯಗಳ ಕ್ಷೇತ್ರವೂ ಜಿಲ್ಲೆಯಲ್ಲಿ ಹೆಚ್ಚಿಗೆ ಇದ್ದು, ಈ ಅರಣ್ಯಗಳಲ್ಲಿ ಶ್ರೀಗಂಧ ಮತ್ತು ಇತರ ಕಿರು ಅರಣ್ಯೋತ್ಪನ್ನಗಳ ಜಾತಿಯ ಹಾಗೂ ಸೌದೆ ಮತ್ತು ಮರಮಟ್ಟಿನ ಕೆಲಸಕ್ಕೆ ಬಳಸುವ ಮರಗಳಿವೆ. ಈ ಅರಣ್ಯಗಳು ಸೌದೆಗೆ, ದನಗಳನ್ನು ಮೇಯಿಸುವುದಕ್ಕೆ ಮತ್ತು ಇತರ ಪ್ರಾಣಿವರ್ಗಗಳ ಬಲವಾದ ಒತ್ತಡಕ್ಕೆ ಒಳಗಾಗಿರುವುದು ಅಪಾಯಕರ ಸನ್ನಿವೇಶವಾಗಿದೆ.

**ಅರಣ್ಯದ ಕಿರು ಉತ್ಪತ್ತಿಗಳು** : ಅರಣ್ಯದ ಕಿರು ಉತ್ಪತ್ತಿಗಳನ್ನು ತಾಲೂಕನ್ನು ಘಟಕವನ್ನಾಗಿ ಇಟ್ಟುಕೊಂಡು ಎರಡು ಮೂರು ವರ್ಷಗಳ ಗುತ್ತಿಗೆಯ ಮೇಲೆ ನೀಡಲಾಗುತ್ತಿದೆ. ಅರಣ್ಯದ ಕಿರು ಉತ್ಪತ್ತಿಗಳಿಂದು ಕಲೆಹಾಕಲ್ಪಟ್ಟ ಅತಿ ಮಹತ್ವದ ವಸ್ತುಗಳಲ್ಲಿ ಮೊದಲನೆಯ ವನೋತ್ಪತ್ತಿಯೆಂದರೆ ಅಳಲೆಕಾಯಿ. ಇದನ್ನು ಚರ್ಮ ಹದ ಮಾಡಲು ಉಪಯೋಗಿಸುವರು. ಇದಲ್ಲದೆ ಹುಣಿಸೆ, ಫೆಲಾಂಥಿಸ್, ಜೇನುತುಪ್ಪ, ಮೇಣ, ಕೊಂಬುಗಳು, ಸೀಗೇಕಾಯಿ, ಅಂಟುವಾಳ, ಧೂಪ, ದಾಲ್ಚಿನ್ನಿಯ ತೊಗಟೆ, ಬಣ್ಣ ಹಾಕಲು ಬೇಕಿರುವ ಅನೇಕ ಹಣ್ಣುಗಳು ಮತ್ತು ಅನೇಕ ಔಷಧೀಯ ಸಸ್ಯಗಳು ಇದರಲ್ಲಿ ಸೇರಿವೆ.

**ಅರಣ್ಯ ಸಂಪತ್ತಿನ ಬಳಕೆ** : ಅರಣ್ಯ ಸಂಪತ್ತು ಮುಂದುವರಿಯುವಿಕೆ ಮತ್ತು ಆಧಾರಪೂರ್ಣ ಪ್ರತಿಫಲ ಈ ತತ್ವಗಳನ್ನವಲಂಬಿಸಿ ವ್ಯವಸ್ಥಿತವಾಗಿ ಉಪಯೋಗಿಸಲ್ಪಡುತ್ತದೆ. ಮತ್ತು ಹೀಗೆ ಮಾಡುವಾಗ ಅರಣ್ಯವನ್ನು ಅವಲಂಬಿಸಿದ ಕೈಗಾರಿಕೆಗಳ ಬೇಡಿಕೆಗಳನ್ನು ಪೂರೈಸುವುದು, ನೈಸರ್ಗಿಕ ಪುನರುತ್ಪತ್ತಿ, ಕಾಡನ್ನು ಪೂರ್ವ ಸ್ಥಿತಿಯಲ್ಲಿ ಸ್ಥಾಪಿಸುವುದು ಮತ್ತು ವನನಿರ್ಮಾಣ ಮಾಡುವುದು ಇವುಗಳನ್ನು ಉತ್ತೇಜಿಸಲಾಗುವುದು. ಬಗೆಬಗೆಯ ಅರಣ್ಯ ಉತ್ಪತ್ತಿಗಳು ಹೊರತೆಗೆಯಲ್ಪಡುತ್ತವೆ ಮತ್ತು ಬೇರೆ ಬೇರೆ ಕೈಗಾರಿಕೆಗಳಿಗೆ ಮತ್ತು ವ್ಯಕ್ತಿಗಳಿಗೆ ಅವು ಮಾರಲ್ಪಡುತ್ತವೆ.

ಜಿಲ್ಲೆಯಲ್ಲಿರುವ ಅರಣ್ಯಗಳನ್ನು ಕಾರ್ಯಯೋಜನೆಗಳ ನಿಯಮಾನುಸಾರವಾಗಿ ನಿರ್ವಹಿಸಲಾಗುತ್ತಿದೆ. ಈ ಯೋಜನೆಯನ್ನು ಬೆಳೆದಿರುವ ಮರಗಳು ವಿವಿಧ ಅರಣ್ಯೋತ್ಪನ್ನಗಳ ಬೇಡಿಕೆ ಮತ್ತು ಭೂ ತೇವಾಂಶ ಸಂರಕ್ಷಣೆ, ಪರಿಸರ ಸಮತೋಲನಕ್ಕೆ ಅಗತ್ಯಾನುಸಾರವಾಗಿ 10 ರಿಂದ 15 ವರ್ಷಗಳ ಅವಧಿಗೆ ರೂಪಿಸಲಾಗುತ್ತದೆ. ಅರಣ್ಯಗಳ ದರ್ಜೆ ತಗ್ಗಿಸಲ್ಪಟ್ಟಿರುವ ಅರಣ್ಯ ಪ್ರದೇಶಗಳಲ್ಲಿ ವನನಿರ್ಮಾಣ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗುತ್ತಿದೆ.

ಹಚ್ಚ ಹಸಿರು ಎಲೆಗಳಿಂದ ಕೂಡಿದ ಮರಗಳನ್ನು ಕಡಿಯುವುದನ್ನು ನಿಷೇಧಿಸಲಾಗಿದ್ದು, ಬಿದ್ದ ಹಾಗೂ ಒಣಗಿದ ಮರಗಳನ್ನು ಮಾತ್ರ ಕಡಿಯಲು ಅವಕಾಶ ಮಾಡಲಾಗಿದೆ. ಸರ್ಕಾರಿ ಉದ್ಯಮವಾಗಿರುವ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ಮರದ ದಿಮ್ಮಿಗಳ ತಯಾರಿ ಕೆಲಸಗಳನ್ನು ಕೈಗೊಳ್ಳಲು ಪ್ರೋತ್ಸಾಹ ನಿರತವಾಗಿದೆ. ಅರಣ್ಯ ಉತ್ಪನ್ನಗಳ ದೊಡ್ಡ ಸಾಮಗ್ರಿಗಳಲ್ಲಿ ಬೀಟೆ ಮರ,

ತೇಗದ ಮರ, ಕತ್ತರಿಸಿದ ಮರ ಇತರ ಬಗೆಯ ಚೌಬೀನೆ, ನೀಲಗಿರಿ ಮರ, ಬೆಂಕಿಕಡ್ಡಿ ಮರ, ಕಂಬಗಳನ್ನೊಳಗೊಂಡ ಚೌಬೀನೆ, ಉರುವಲು ಸೌದೆ (ಜಲಾವಟ್ಟಿಗೆ), ಗಂಧದ ಮರ ಮತ್ತು ಬೊಂಬುಗಳು ಮುಖ್ಯವಾದವುಗಳಾಗಿವೆ.

ಚೌಬೀನೆ ಡಿಪೋಗಳಿಂದ ಬಂದ ಚೌಬೀನೆಯನ್ನೂ ಗುಣ, ದಪ್ಪ ಮತ್ತು ಉದ್ದದಂತೆ ಪ್ರತ್ಯೇಕ ಗುಂಪುಗಳಾಗಿ ವಿಂಗಡಿಸಿ, ಬೇರೆ ಗುಣಮಟ್ಟಗಳ ಚೌಬೀನೆಗಳಿಗೆ ಹಿಂದಿನ ದರಗಳನ್ನು ಆಧರಿಸಿ ಪ್ರತಿಯೊಂದು ಗುಂಪಿನ ಚೌಬೀನೆಯ ಮೌಲ್ಯಗಳನ್ನು ನಿರ್ಧರಿಸಿ ಅವುಗಳನ್ನು ಸಾರ್ವಜನಿಕ ಹರಾಜಿಗೆ ಇಡಲಾಗುವುದು. ಸಾಮಾನ್ಯವಾಗಿ ಪ್ರತಿಯೊಂದು ಡಿಪೋವಿನಲ್ಲಿ ಒಂದೊಂದು ವರ್ಷಕ್ಕೆ ಮೂರರಿಂದ ನಾಲ್ಕು ಬಾರಿ ಚೌಬೀನೆಯನ್ನು ಮಾರಾಟ ಮಾಡಲಾಗುತ್ತದೆ. ಚಿಲ್ಲರೆ ಮಾರಾಟಕ್ಕಾಗಿ ಡಿಪೋದಲ್ಲಿ ರಾಶಿ ಹಾಕಿರುವ ಚೌಬೀನೆ ಮತ್ತು ಇತರ ಅರಣ್ಯ ಉತ್ಪನ್ನಗಳನ್ನೂ ಕಾಲಕಾಲಕ್ಕೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ರೈಲ್ವೇ ಮತ್ತು ರಕ್ಷಣಾ ಇಲಾಖೆಗಳಿಗೆ ಪರಸ್ಪರ ಒಪ್ಪಂದ ಮಾಡಿಕೊಂಡಿರುವ ದರದಲ್ಲಿ ಅರಣ್ಯ ಉತ್ಪನ್ನಗಳನ್ನು ವಿಲೇವಾರಿ ಮಾಡಲಾಗುತ್ತದೆ.

## ಅರಣ್ಯ ಅಭಿವೃದ್ಧಿ ಯೋಜನೆಗಳು

ಜಿಲ್ಲೆಯಲ್ಲಿ ಅನೇಕ ಅರಣ್ಯ ಅಭಿವೃದ್ಧಿ ಯೋಜನೆಗಳು ನೆರವೇರಿಸಲ್ಪಡುತ್ತಿವೆ. ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯ ಉದ್ದೇಶವು ಈಗ ದರ್ಜೆ ತಗ್ಗಿಸಿದ ಅರಣ್ಯ ಪ್ರದೇಶದಲ್ಲಿ ಪುನರ್ ಅರಣ್ಯೀಕರಣ ಮಾಡಿ ಅರಣ್ಯ ಸಂಪತ್ತನ್ನು ಹೆಚ್ಚಿಸಿ ಜನರಿಗೆ ಚೌಬೀನೆ, ಉರವಲು ಸೌದೆ ಹಾಗೂ ದನಗಳ ಮೇವಿನ ಕೊರತೆಯನ್ನು ನೀಗಿಸುವುದಾಗಿದೆ. ಹೆಚ್ಚು ಹೆಚ್ಚಿನ ಉರುವಲು ಸೌದೆ, ಸಣ್ಣ ಪುಟ್ಟ ಚೌಬೀನೆ, ದನಗಳ ಮೇವನ್ನು ದರ್ಜೆ ತಗ್ಗಿಸಿದ ಅರಣ್ಯ ಮತ್ತು ಇತರ ಸರ್ಕಾರಿ ಪಾಳು ಭೂಮಿಯಲ್ಲಿ 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನೊಳಗೊಂಡು ಬೆಳೆಸಲು ಉದ್ದೇಶಿಸಲಾಗಿದೆ. ಜಿಲ್ಲೆಯಲ್ಲಿ 16,098 ಹೆ. ಸರ್ಕಾರಿ ಪಾಳುಭೂಮಿ ಮತ್ತು ಇನ್ನು 37,957 ಹೆ 'ಸಿ' ಮತ್ತು 'ಡಿ' ವರ್ಗದ ಜಮೀನು ಇದ್ದು 31.1.1989 ರ ವೇಳೆಗೆ 38,747 ಹೆ. 'ಸಿ' ಮತ್ತು 'ಡಿ' ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಸಾಮಾಜಿಕ ಅರಣ್ಯ ಯೋಜನೆ ಮತ್ತು ವಿಕೇಂದ್ರೀಕೃತ ಸಸ್ಯಕ್ಷೇತ್ರಗಳ ನಿರ್ಮಾಣದ ಮೂಲಕ ಅರಣ್ಯೀಕರಣ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಧಾರವಾಡ ಜಿಲ್ಲೆಯಲ್ಲಿರುವ ಅರಣ್ಯ ನರ್ಸರಿ ಕ್ಷೇತ್ರಗಳು ಹೀಗಿವೆ: ಬುಡವಾಳ (ಹುಬ್ಬಳ್ಳಿ ತಾ:) ಅರಣ್ಯ ವಿಭಾಗಾಧಿಕಾರಿಗಳ ಕಚೇರಿ ಆವರಣ (ಧಾರವಾಡ ತಾ।।), ಹಾನಗಲ್, ಕುಸನೂರು, ಹೊಂಕಣ (ಹಾನಗಲ್ ತಾ।।), ಗಂಗಿಭಾವಿ (ಶಿಗ್ಗಾಂವ ತಾ।।), ಕಲ್ಲುಂದಿ (ಕಲಘಟಗಿ ತಾ।।), ಗಂಗಾಜಲತಾಂಡಾ, ಬೇವಿನಹಟ್ಟಿ, ವಿಕಲಾಸಪುರ (ರಾಣೆಬೆನ್ನೂರು ತಾ।।), ಸಿಡೆನೂರು, ಗುಂಡಗಟ್ಟಿ, ಹರಿಕಟ್ಟೆ (ಹಿರೇಕೆರೂರು ತಾ।।), ಸಂಗೂರು (ಹಾವೇರಿ ತಾ।।), ಡಂಬಳ, ಬಿಡನಾಳ, ಜಲವಡಗಿ, ಹಾರೋಗೇರಿ (ಮುಂಡರಗಿ ತಾ।।), ಜಲ್ಲಿಗೇರಿ, ಛಬ್ಬಿ, ಡೋಣಿ, ತಂಗೋಡ, ಗಜೇಂದ್ರಗಡ, ನಭಾಪುರ ಮತ್ತು ಚಿಕ್ಕನವಗುಂದ (ಶಿರಹಟ್ಟಿ ತಾ:).

ಅಧಿಕ ಪ್ರಮಾಣ ಅರಣ್ಯೀಕರಣ ಕಾರ್ಯಕ್ರಮವನ್ನು ಎಲ್ಲಾ ಯೋಜನೆಗಳಡಿಯಲ್ಲಿ ಮುಂದುವರೆಸಿಕೊಂಡು ಬರಲಾಗುತ್ತಿದೆ. ದರ್ಜೆ ತಗ್ಗಿಸಿದ ಅರಣ್ಯ, ರಸ್ತೆಬದಿ ಅಂಗಳ, ಕೆರೆ ಬದಿ ಅಂಗಳ ಇತ್ಯಾದಿಗಳನ್ನೊಳಗೊಂಡಂತೆ ಕಂದಾಯ ಪಾಳುಭೂಮಿಯನ್ನು ಅರಣ್ಯೀಕರಣದೆಡೆಗೆ ತರಲಾಗಿದೆ. ಜವಾಹರ ರೋಜಗಾರ್ ಯೋಜನೆ, ಸಾಮಾಜಿಕ ಅರಣ್ಯ ಕಾರ್ಯಕ್ರಮ, ರಾಷ್ಟ್ರೀಯ ಪಾಳು ಭೂಮಿ ಅಭಿವೃದ್ಧಿ ಮಂಡಳಿ ಮುಂತಾದ ಯೋಜನೆಗಳ ನೆರವಿನೊಂದಿಗೆ ವಿಕೇಂದ್ರೀಕೃತ ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಲಾಗುತ್ತಿದೆ. ಜಿಲ್ಲೆಯ ತುಂಗಭದ್ರಾ ನದೀ ಜಲಾನಯನ ಪ್ರದೇಶದಲ್ಲಿ ಕೇಂದ್ರೀಯ ಪುರಸ್ಕೃತ ಯೋಜನೆಯನ್ವಯ ಭೂಸಾರ ಸಂರಕ್ಷಣೆಗಾಗಿ 1987 ರಿಂದ 1992 ರವರೆಗೆ ಸುಮಾರು 340 ಹೆ.ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯವನ್ನು 60 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿ ನೆರವೇರಿಸಲಾಗಿದೆ. ಕೇಂದ್ರ ಪುರಸ್ಕೃತ ಗ್ರಾಮೀಣ ನಿಸರ್ಗ ಸೂಕ್ಷ್ಮ ಪ್ರದೇಶಗಳಲ್ಲಿ ನೆಡುತೋಪು ಬೆಳೆಸುವಿಕೆ ಹಾಗೂ ವನ ನಿರ್ಮಾಣ ಯೋಜನೆಯಡಿ ರಾಜ್ಯ ಮತ್ತು ಕೇಂದ್ರ ಸಂಬಂಧದ 50:50 ಪ್ರಮಾಣದ ಬಂಡವಾಳದೊಡನೆ ಗ್ರಾಮೀಣ ಜನತೆಯ ಬೇಡಿಕೆಯನ್ನು ಪೂರೈಸಲು 1987 ರಿಂದ 1991 ರವರೆಗೆ ಸುಮಾರು 1,100 ಹೆ ಪ್ರದೇಶದಲ್ಲಿ ನೆಡುತೋಪು ನಿರ್ಮಿಸಲಾಯಿತು. ಈ ನೆಡುತೋಪುಗಳನ್ನು ಹೆಚ್ಚಿಗೆ ದರ್ಜೆ ತಗ್ಗಿಸಿದ ಅರಣ್ಯ ಪ್ರದೇಶ ಮತ್ತು ಇತರ ಸರ್ಕಾರಿ ಪಾಳುಭೂಮಿಯ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ. ಕೇಂದ್ರ ಪ್ರೇರಿತ ರಾಷ್ಟ್ರೀಯ ಪಾಳುಭೂಮಿ ಅಭಿವೃದ್ಧಿ ಮಂಡಳಿ, ವಿಕೇಂದ್ರೀಕೃತ ಸಸ್ಯಕ್ಷೇತ್ರ ಯೋಜನೆಯಡಿ ಜಿಲ್ಲೆಯಲ್ಲಿ ಸುಮಾರು 55 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿ ವಿಕೇಂದ್ರೀಯವಾಗಿ ಜನತೆಗೆ ಸಹಾಯ ಧನ ನೀಡಿ 1987 ರಿಂದ

1992 ರವರೆಗೆ 1.96 ಕೋಟಿ ಸಸಿಗಳನ್ನು ಬೆಳೆಸಲಾಗಿದೆ. ಅರಣ್ಯ ಪ್ರದೇಶವನ್ನು ಅರಣ್ಯೇತರ ಉಪಯೋಗಕ್ಕಾಗಿ ಪಡೆದ ಮೇಲೆ ಅದರ ನಷ್ಟ ಪರಿಹಾರಕ್ಕಾಗಿ ನೆಡುತೋಪುಗಳ ನಿರ್ಮಾಣವನ್ನು ಅರಣ್ಯ ನಿಯಮ 1980 ರ ಪ್ರಕಾರ ಕೈಗೆತ್ತಿಕೊಳ್ಳಲಾಗುತ್ತದೆ. ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಿದರೆ ಅದಕ್ಕೆ ಸಮನಾದ ಅರಣ್ಯೇತರ ಪ್ರದೇಶದಲ್ಲಿ ಪರಿಹಾರ ನೆಡುತೋಪುಗಳ ನಿರ್ಮಾಣ ಮಾಡಲಾಗುವುದು. ಅರಣ್ಯೇತರ ಪ್ರದೇಶ ಇಲ್ಲದಿದ್ದಲ್ಲಿ ಬಿಡುಗಡೆಯಾದ ಅರಣ್ಯ ಪ್ರದೇಶದ ಎರಡು ಪಟ್ಟು ನೆಡುತೋಪು ನಿರ್ಮಾಣ ಮಾಡಲಾಗುವುದು. ಅರಣ್ಯೇತರ ಪ್ರದೇಶವನ್ನು ಗುರ್ತಿಸಿ ಪರಿಹಾರ ನೆಡುತೋಪು ಮಾಡುವಾಗ ರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಿ ಮಾನವರ ಹಾಗೂ ಪ್ರಾಣಿಗಳ ಹಾವಳಿಯಿಂದ ತಪ್ಪಿಸಲಾಗುವುದು.

**ರಾಣೆಬೆನ್ನೂರಿನ ಕೃಷ್ಣಮೃಗಗಳ ಅಭಯಾರಣ್ಯ**

ರಾಣೆಬೆನ್ನೂರಿನ ಕಪ್ಪುಜಿಂಕೆ (ಕರಿ ಚಿಗರಿ) ಅಥವಾ ಕೃಷ್ಣಮೃಗಗಳ ಅಭಯಾರಣ್ಯವು 1974 ರಲ್ಲಿ ವನ್ಯಪ್ರಾಣಿಧಾಮವೆಂದು ಸಾರಲ್ಪಟ್ಟಿತು. ಈ ಅಭಯಾರಣ್ಯದ ಅರಣ್ಯಕ್ಷೇತ್ರವು ಉತ್ತರ ಅಕ್ಷಾಂಶ $14^{o}33'$ ರಿಂದ $14^{o}$ $47'$ ರವರೆಗೆ ಪೂರ್ವ ರೇಖಾಂಶ $75^{o}$ $32'$ ರಿಂದ $75^{o}$ $51'$ ರವರೆಗೆ ರಾಣೆಬೆನ್ನೂರು, ಬ್ಯಾಡಗಿ ಮತ್ತು ಹಾವೇರಿ ತಾಲೂಕುಗಳಲ್ಲಿ ವಿಸ್ತರಿಸಿದ್ದು ಒಟ್ಟು 119.89 ಚ.ಕಿ.ಮೀ. (12,000 ಹೆ) ಪ್ರದೇಶವನ್ನು ಹೊಂದಿದೆ. ಈ ವನ್ಯಪ್ರಾಣಿಧಾಮವು ರಾಣೆಬೆನ್ನೂರಿನಿಂದ 16 ಕಿ.ಮೀ. ದೂರದಲ್ಲಿದೆ. ಈ ಅಭಯಾರಣ್ಯವು ಏರುತಗ್ಗುಗಳನ್ನೊಳಗೊಂಡ ಪ್ರದೇಶಗಳನ್ನು ಒಳಗೊಂಡಿದ್ದು ಅತಿ ಎತ್ತರದ ಜಾಗವು ಸಮುದ್ರಮಟ್ಟದಿಂದ ಸುಮಾರು 700 ಮೀ.ಗಳಷ್ಟು ಎತ್ತರವಿದೆ. ಇಲ್ಲಿ ಕೆಲವು ಸಣ್ಣ ಹೊಳೆಗಳು ಹರಿಯುತ್ತಲಿದ್ದು ಅವುಗಳು ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಬಹುತೇಕ ಪ್ರದೇಶವು ಕುರುಚಲು ಹಾಗೂ ಮುಳ್ಳುಕಂಟಿಗಳ ಅರಣ್ಯವನ್ನು ಹೊಂದಿದ್ದು ಮಣ್ಣಿನ ಸವೆತವು ಈ ಪ್ರದೇಶದಲ್ಲಿ ಹೆಚ್ಚಾಗಿ ಆಗುತ್ತದೆ. ಆದುದರಿಂದ 1956 ರಿಂದ ಬೋಳಾದ ಪ್ರದೇಶದಲ್ಲಿ ಅರಣ್ಯೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಸ್ಥಳೀಯ ನೀಲಗಿರಿ ಸಸ್ಯಗಳ ಪ್ಲಾಂಟೇಷನ್ ಬೆಳೆಸಲು ಆದ್ಯತೆ ನೀಡಲಾಗಿದೆ. ಇಲ್ಲಿ ಕೃಷ್ಣಮೃಗಗಳಲ್ಲದೆ ತೋಳಗಳು, ಕಾಡುಹಂದಿ ಮತ್ತು ನವಿಲುಗಳು ಹೇರಳವಾಗಿ ಕಾಣಸಿಗುತ್ತವೆ.

**ಮಕ್ಕಳ ಪ್ರಾಣಿಸಂಗ್ರಹಾಲಯ:** ಗದಗ ತಾಲೂಕಿನ ಬಿಂಕದಕಟ್ಟೆಯ ಬಳಿ ಇರುವ ಮಕ್ಕಳ ಪ್ರಾಣಿ ಸಂಗ್ರಹಾಲಯ 12 ಹೆ. ಪ್ರದೇಶದಲ್ಲಿ ವಿಸ್ತರಿಸಿದೆ. ಗದಗ ಪಟ್ಟಣದಿಂದ ಎರಡು ಕಿ.ಮಿ. ದೂರದಲ್ಲಿದೆ. ಇದನ್ನು ಪೂರ್ಣ ದರ್ಜೆಯ ಪ್ರಾಣಿ ಸಂಗ್ರಹಾಲಯವನ್ನಾಗಿ ಮಾಡಲು ಯೋಜನೆ ಸಿದ್ಧಪಡಿಸಲಾಗಿದ್ದು ಕೆಲಸಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ.

## ವಾಯುಗುಣ

ಜಿಲ್ಲೆಯು ಸಮಭಾಜಕ ವೃತ್ತಕ್ಕೆ ಹತ್ತಿರದಲ್ಲಿರುವುದರಿಂದ ಅಧಿಕ ಉಷ್ಣತೆಯನ್ನು ಒಳಗೊಂಡ ವಾಯುಗುಣವನ್ನು ಹೊಂದಿದೆ. ಸಾಮಾನ್ಯವಾಗಿ ಶುಷ್ಕ ಹವೆ ಇದ್ದು ಮಾನ್ಸೂನ್ ಕಾಲದಲ್ಲಿ ತಂಪಾದ ಹವೆ ಇರುತ್ತದೆ. ಒಟ್ಟಿನಲ್ಲಿ ಜಿಲ್ಲೆಯ ವಾಯುಗುಣವು ಹಿತಕರ ಮತ್ತು ಆಹ್ಲಾದಕರವಾಗಿದೆ. ಜಿಲ್ಲೆಯು ರಾಜ್ಯದ ಉತ್ತರಭಾಗದ ಮೈದಾನ ಪ್ರದೇಶದಲ್ಲಿದ್ದು ಈ ಪ್ರದೇಶದಲ್ಲಿನ ಹವೆ ಬೇಸಗೆಯಲ್ಲಿ ಉಷ್ಣತೆಯಿಂದ ಕೂಡಿರುವಂಥದೂ, ಚಳಿಗಾಲದಲ್ಲಿ ತಂಪಾಗಿರುವಂಥದೂ, ಮಳೆಗಾಲದಲ್ಲಿ ಹೆಚ್ಚು ಆರ್ದ್ರತೆಯುಳ್ಳದ್ದೂ ಆಗಿರುತ್ತದೆ. ಮಳೆ ಅನಿಯಮಿತವಾಗಿಯೂ, ಅನಿಶ್ಚಿತವಾಗಿಯೂ ಬೀಳುತ್ತದೆ. ಒಂದು ವರ್ಷವನ್ನು ನಾಲ್ಕು ಋತುಗಳನ್ನಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ (1) ಚಳಿಗಾಲ (ಜನವರಿ- ಫೆಬ್ರುವರಿ), (2) ಬೇಸಿಗೆ ಕಾಲ (ಮಾರ್ಚಿನಿಂದ ಮೇ ವರೆಗೆ), (3) ನೈರುತ್ಯ ಮಾನ್ಸೂನ್ ಕಾಲ (ಜೂನ್‌ನಿಂದ ಸೆಪ್ಟಂಬರ್‌ವರೆಗೆ), ಮತ್ತು (4) ಈಶಾನ್ಯ ಮಾನ್ಸೂನ್ ಕಾಲ (ಅಕ್ಟೋಬರ್- ನವೆಂಬರ್).

**ಮಳೆ** : ಭಾರತದ ಪವನಶಾಸ್ತ್ರ ಇಲಾಖೆಯ ವರದಿಯಂತೆ ಜಿಲ್ಲೆಯಲ್ಲಿ 14 ಮಳೆ ಮಾಪಕ ಕೇಂದ್ರಗಳಿದ್ದು, ಈ ಕೇಂದ್ರಗಳಿಗೆ ಸಂಬಂಧಿಸಿದಂತೆ 50 ರಿಂದ 80 ವರ್ಷಗಳ ಮಳೆಯ ಅಂಕಿ ಅಂಶಗಳು ದೊರೆಯುತ್ತವೆ. 1901 ರಿಂದ 1950 ರವರೆಗೆ ಮಳೆಮಾಪಕ ಕೇಂದ್ರವಾರು ಮತ್ತು ಮಾಹೆವಾರು ಬಿದ್ದ ಸರಾಸರಿ ಮಳೆಯ ವಿವರಗಳನ್ನು ಕೋಷ್ಟಕ 1.4 ರಲ್ಲಿ ಕೊಟ್ಟಿದೆ. ಜಿಲ್ಲೆಯ ವಾರ್ಷಿಕ ಸರಾಸರಿ ವಾಡಿಕೆ ಮಳೆಯ (1901 ರಿಂದ 1950) ಪ್ರಮಾಣ 691.1 ಮಿ.ಮೀ. ಆಗಿದೆ. ಸಹ್ಯಾದ್ರಿಗೆ ಹೊಂದಿಕೊಂಡಿರುವ ಜಿಲ್ಲೆಯ ಪಶ್ಚಿಮ ಭಾಗಗಳಲ್ಲಿ ಅತೀ ಹೆಚ್ಚು ಮಳೆ ಬೀಳುತ್ತದೆ. ಪೂರ್ವಕ್ಕೆ ಹೋದ ಹಾಗೆ ಮಳೆಯ ಪ್ರಮಾಣವು ಕುಂಠಿತವಾಗುತ್ತದೆ. ಹೀಗಾಗಿ ಪಶ್ಚಿಮಘಟ್ಟ ಪ್ರದೇಶದ ಕಲಘಟಗಿಯಲ್ಲಿ 914 ಮಿ.ಮೀ. ವಾರ್ಷಿಕ ಮಳೆ ಬಿದ್ದರೆ

ಮುಂಡರಗಿಯಲ್ಲಿ ವಾರ್ಷಿಕ ಮಳೆಯು ಬಿದ್ದ ಪ್ರಮಾಣ 465 ಮಿ.ಮೀ. ಆಗಿದೆ. ಒಟ್ಟು ವಾರ್ಷಿಕ ಮಳೆಯ ಶೇ 67 ರಷ್ಟು ಮಳೆಯು ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳಿನವರೆಗೆ ಬೀಳುತ್ತದೆ. ಜುಲೈ ಅತಿ ಹೆಚ್ಚು ಮಳೆ ಬೀಳುವ ತಿಂಗಳಾಗಿದೆ. ಕೆಲವು ವೇಳೆ ಗುಡುಗು ಸಹಿತ ಬೀಳುವ ಬಿರುಮಳೆಯು ಬೇಸಿಗೆ ಕಾಲದ ಉತ್ತರಾರ್ಧದಲ್ಲಿ ಮತ್ತು ಈಶಾನ್ಯ ಮಾನ್ಸೂನ್ ತಿಂಗಳುಗಳಲ್ಲಿ ಬೀಳುತ್ತದೆ. ಈಶಾನ್ಯ ಮಾರುತಗಳಿಂದ ಜಿಲ್ಲೆಯ ಒಟ್ಟು ಮಳೆಯ ಶೇ 22 ರಷ್ಟು ಮಳೆಯು ಜಿಲ್ಲೆಯಲ್ಲಿ ಆಗುತ್ತದೆ.

ವಾರ್ಷಿಕ ಮಳೆಯ ಏರಿಳಿತಗಳ ವ್ಯತ್ಯಾಸ ಅಷ್ಟೊಂದು ಗಮನಾರ್ಹವಾಗಿಲ್ಲ, 1901 ರಿಂದ 1950 ರ ಅವಧಿಯಲ್ಲಿ ವಾಡಿಕೆ ಮಳೆಯ ಶೇ 144 ರಷ್ಟು ಹೆಚ್ಚು ಮಳೆಯು 1933 ರಲ್ಲೂ, ವಾಡಿಕೆ ಮಳೆಯ ಶೇ 66 ರಷ್ಟು ಕಡಿಮೆ ಮಳೆಯು 1945 ರಲ್ಲೂ ದಾಖಲಾಗಿದೆ. ಆದರೆ ಕಡಿಮೆ ಮಳೆ ಬೀಳುವ ಜಿಲ್ಲೆಯ ಪೂರ್ವಭಾಗದ ಪ್ರದೇಶದಲ್ಲಿ ವಾರ್ಷಿಕ ಮಳೆಯ ಏರಿಳಿತಗಳ ಪ್ರಮಾಣ ಅತಿ ಗಮನಾರ್ಹವಾಗಿದೆ. ಇದೇ ಅವಧಿಯಲ್ಲಿ ವಾಡಿಕೆ ಮಳೆಗಿಂತ ಶೇ 80 ಕ್ಕಿಂತ ಕಡಿಮೆ ಮಳೆಯು ಆರು ವರ್ಷಗಳಲ್ಲಿ ದಾಖಲಾಗಿದೆ. ಧಾರವಾಡದಲ್ಲಿ 1936 ರಿಂದ 1942 ರವರೆಗೆ ಅತಿ ಕಡಿಮೆ ಮಳೆಯು ವಾರ್ಷಿಕ ವಾಡಿಕೆ ಮಳೆಯ ಶೇ 80 ರಷ್ಟು ಬಿದ್ದಿದೆ. ಸರಾಸರಿ ವರ್ಷದಲ್ಲಿ 54 ಮಳೆ ಬಿದ್ದ ದಿವಸಗಳು ಜಿಲ್ಲೆಯಲ್ಲಿ ದಾಖಲಾಗಿವೆ. (ಪ್ರತಿ ದಿನ 2.5 ಮಿ.ಮೀ.ಗಿಂತ ಹೆಚ್ಚು ಮಳೆ ಬಿದ್ದಿರುವುದು). ಈ ಸಂಖ್ಯೆಯ ಮುಂಡರಗಿಯಲ್ಲಿ 32 ಆಗಿದ್ದರೆ ಕಲಘಟಗಿಯಲ್ಲಿ 72 ಆಗಿದೆ. ಜಿಲ್ಲೆಯಲ್ಲಿ 1959 ರ ಜುಲೈ ತಿಂಗಳ ಎರಡರಂದು 290.1 ಮಿ.ಮೀ.ಅತಿ ಗರಿಷ್ಠ ಮಳೆ (24 ಗಂಟೆಗಳಲ್ಲಿ) ದಾಖಲಾಗಿದೆ. ಮುಂಡರಗಿ ತಾಲೂಕು ರಾಜ್ಯದ ಅತ್ಯಂತ ಎರಡು ಒಣ ತಾಲೂಕುಗಳಲ್ಲಿ ಒಂದಾಗಿದೆ (ಇನ್ನೊಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾ:). 1901 ರಿಂದ 1970 ರವರೆಗಿನ ಅವಧಿಯ ಮಾಹೆವಾರು ಬಿದ್ದ ವಾರ್ಷಿಕ ವಾಡಿಕೆ ಮಳೆ ಹಾಗೂ 1970 ರಿಂದ 1992 ರವರೆಗೆ ತಾಲೂಕುವಾರು ದಾಖಲಾದ ವಾರ್ಷಿಕ ಮಳೆಯ ಪ್ರಮಾಣವನ್ನು (ಮಿ.ಮೀ.ಗಳಲ್ಲಿ) ಕೋಷ್ಟಕ 1.5 ಮತ್ತು 1.6 ರಲ್ಲಿ ಕೊಟ್ಟಿದೆ.

**ಉಷ್ಣತೆ :** ಗದಗದಲ್ಲಿ ದಾಖಲಾಗಿರುವ ಉಷ್ಣತೆಯ ಅಂಕಿ ಅಂಶಗಳು ಸಾಮಾನ್ಯವಾಗಿ ಜಿಲ್ಲೆಯ ಎಲ್ಲಾ ಪ್ರದೇಶಗಳಿಗೂ ಅನ್ವಯಿಸುತ್ತವೆ. ಫೆಬ್ರವರಿ ತಿಂಗಳಿನ ನಂತರ ಉಷ್ಣತೆಯು ಅತಿ ಶೀಘ್ರವಾಗಿ ಏರುತ್ತದೆ. ಏಪ್ರಿಲ್ ತಿಂಗಳು ಅತಿ ಹೆಚ್ಚು ಉಷ್ಣತೆ ಇರುವ ತಿಂಗಳಾಗಿದ್ದು ಸರಾಸರಿ ದೈನಂದಿನ ಗರಿಷ್ಠ ಉಷ್ಣತೆಯು $37.3^{0}$ ಸೆಲ್ಸಿಯಸ್ ಮತ್ತು ಸರಾಸರಿ ದೈನಂದಿನ ಕನಿಷ್ಠ ಉಷ್ಣತೆಯು $22.5^{0}$ ಸೆಲ್ಸಿಯಸ್ ಮತ್ತು ಸರಾಸರಿ ದೈನಂದಿನ ಉಷ್ಣತೆಯು $29.9^{0}$ ಸೆಲ್ಸಿಯಸ್ ಆಗಿದೆ. ಮೇ ಮತ್ತು ಜೂನ್ ತಿಂಗಳುಗಳ ರಾತ್ರಿಯ ವೇಳೆಯು ಏಪ್ರಿಲ್ ತಿಂಗಳಿನಲ್ಲಿರುವಂತೆ ಇರುತ್ತದೆ. ಬೇಸಿಗೆಯ ಕಾಲದಲ್ಲಿ ಕೆಲವು ವೇಳೆ ದೈನಂದಿನ ಉಷ್ಣತೆಯು $41^{0}$ ಸೆಲ್ಸಿಯಸ್‌ವರೆಗೂ ತಲಪುತ್ತದೆ. ಕೆಲವೊಮ್ಮೆ ಬೇಸಿಗೆ ಕಾಲದಲ್ಲಿ ಬೀಳುವ ಬಿರುಮಳೆಯಿಂದ ಉಷ್ಣತೆ ತಾತ್ಕಾಲಿಕವಾಗಿ ಕಡಿಮೆಯಾಗುವುದು ಕಂಡುಬರುತ್ತದೆ. ನೈರುತ್ಯ ಮಾರುತಗಳು ಮಳೆಯನ್ನು ಸುರಿಸಲು ಜೂನ್ ತಿಂಗಳ ಆದಿಯಲ್ಲಿ ಪ್ರಾರಂಭಿಸುವುವು. ಇದರಿಂದ ದೈನಂದಿನ ಉಷ್ಣತೆಯಲ್ಲಿ ಗಮನಾರ್ಹ ಇಳಿತ ಕಂಡುಬರುವುದು. ಸೆಪ್ಟೆಂಬರ್ ನಂತರ ಮತ್ತೆ ಉಷ್ಣತೆ ಏರಲು ಪ್ರಾರಂಭಗೊಂಡು ವಾರ್ಷಿಕದಲ್ಲಿ ಎರಡನೇ ಅತಿ ಹೆಚ್ಚು ಉಷ್ಣತೆಯ ಪ್ರಮಾಣ ಅಕ್ಟೋಬರ್ ತಿಂಗಳಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿನಲ್ಲಿ ಅತಿ ಕಡಿಮೆ ಉಷ್ಣತೆ ದಾಖಲಾಗುತ್ತದೆ ($16.5^{0}$ ಸೆಲ್ಸಿಯಸ್). ಕೆಲವೊಂದು ದಿವಸಗಳಲ್ಲಿ ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳ ಅವಧಿಯಲ್ಲಿ ದೈನಂದಿನ ಅತಿ ಕನಿಷ್ಠ ಉಷ್ಣತೆಯ $11^{0}$ ಸೆಲ್ಸಿಯಸ್ ತಲುಪುತ್ತದೆ. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಗರಿಷ್ಠ ಉಷ್ಣತೆ ಗದಗದಲ್ಲಿ ದಾಖಲಾಗಿರುವಂತೆ ಮೇ 15, 1939 ರಂದು $41.7^{0}$ ಸೆಲ್ಸಿಯಸ್ ಆಗಿದ್ದರೆ ಅತಿ ಕಡಿಮೆ ಕನಿಷ್ಠ ಉಷ್ಣತೆಯು 26 ನೇ ಡಿಸೆಂಬರ್ 1975 ರಂದು $10^{0}$ ಸೆಲ್ಸಿಯಸ್ ಆಗಿದೆ. ಗದಗಿನಲ್ಲಿ ದಾಖಲಾದ ಮಾಹೆವಾರು ಉಷ್ಣತೆ ಹಾಗೂ ಸಾಪೇಕ್ಷ ಆರ್ದ್ರತೆಯ ವಿವರಗಳನ್ನು ಕೋಷ್ಟಕ 1.7 ರಲ್ಲಿ ಕೊಟ್ಟಿದೆ.

**ಆರ್ದ್ರತೆ:** ಜಿಲ್ಲೆಯ ಸರಾಸರಿ ಸಾಪೇಕ್ಷ ಆರ್ದ್ರತೆಯು ವರ್ಷಪೂರ್ತಿ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ನೈರುತ್ಯ ಮಾರುತಗಳ ಸಮಯದಲ್ಲಿ (ಜೂನ್ ಸೆಪ್ಟೆಂಬರ್) ಸರಾಸರಿ ಶೇ80 ಕ್ಕಿಂತ ಹೆಚ್ಚಿರುತ್ತದೆ. ನಂತರ ಕಡಿಮೆಯಾಗುತ್ತ ಹೋಗುತ್ತದೆ. ಜನವರಿಯಿಂದ ಮಾರ್ಚ್ ತಿಂಗಳವರೆಗೆ ಆರ್ದ್ರತೆಯು ಅತಿ ಕಡಿಮೆ (ಶೇ 30) ಆಗಿರುತ್ತದೆ. ಕೋಷ್ಟಕ 1.7 ರಲ್ಲಿ ಸಾಪೇಕ್ಷ ಆರ್ದ್ರತೆಯ ವಿವರಗಳನ್ನು ಕೊಟ್ಟಿದೆ.

**ಮುಗಿಲ ಮುಸುಕು :** ನೈರುತ್ಯ ಮಾರುತಗಳ ಕಾಲದಲ್ಲಿ ಮುಗಿಲ ಮುಸುಕು ಹೆಚ್ಚಾಗಿರುತ್ತದೆ. ನಂತರ ಮುಗಿಲ ಮುಸುಕುವಿಕೆ ಕಡಿಮೆಯಾಗುತ್ತಾ ಹೋಗುತ್ತದೆ. ಡಿಸೆಂಬರ್ ಮಾರ್ಚ್ ಅವಧಿಯಲ್ಲಿ ಮುಗಿಲ ಮುಸುಕುವಿಕೆ ತೀರ ಕಡಿಮೆಯಾಗಿದ್ದುಆಕಾಶವು ಶುಭ್ರವಾಗಿರುತ್ತದೆ. ಏಪ್ರಿಲ್ ನಂತರ ಮುಗಿಲ ಮುಸುಕುವಿಕೆ ಹೆಚ್ಚಾಗುವುದು. ಸಾಮಾನ್ಯವಾಗಿ ಮಧ್ಯಾಹ್ನದ ಸಮಯದಲ್ಲಿ ಹೆಚ್ಚಿರುತ್ತದೆ.

**ಒತ್ತಡ ಮತ್ತು ಗಾಳಿಗಳು:** ಜಿಲ್ಲೆಯಲ್ಲಿ ಗಾಳಿಯು ಸಾಮಾನ್ಯವಾಗಿ ಲಘು ಪ್ರಮಾಣದಲ್ಲಿ ಬೀಸುತ್ತದೆ. ಬೇಸಿಗೆ ಕಾಲದ ಉತ್ತರಾರ್ಧದಲ್ಲಿ ಮತ್ತು ಮಾರುತಗಳ ಸಮಯದಲ್ಲಿ ಗಾಳಿಯ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ನವೆಂಬರ್- ಡಿಸೆಂಬರ್ ಅವಧಿಯಲ್ಲಿ ಪೂರ್ವ ಮತ್ತು ಆಗ್ನೇಯ ದಿಕ್ಕುಗಳಿಂದ ಗಾಳಿಯು ಬೆಳಗಿನ ಮತ್ತು ಸಂಜೆಯ ವೇಳೆ ಬೀಸುತ್ತದೆ. ಜನವರಿ -ಫೆಬ್ರವರಿ ಅವಧಿಯಲ್ಲಿ ಬೆಳಗಿನ ವೇಳೆ ದಕ್ಷಿಣ ಮತ್ತು ಆಗ್ನೇಯ ದಿಕ್ಕುಗಳಿಂದ ಬೀಸುತ್ತದೆ. ಫೆಬ್ರವರಿಯಲ್ಲಿ ಉತ್ತರ ಮತ್ತು ವಾಯವ್ಯ ದಿಕ್ಕುಗಳ ಕಡೆಯಿಂದಲೂ ಬೀಸುವುದು ಕಂಡುಬರುತ್ತದೆ. ಸಂಜೆಯ ಸಮಯದಲ್ಲಿ ಆಗ್ನೇಯ ಮತ್ತು ಪೂರ್ವ ದಿಕ್ಕುಗಳಿಂದ ಬೀಸುವುದು. ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಆಗ್ನೇಯ ದಿಕ್ಕಿನ ಕಡೆಯಿಂದ ಬೀಸುವುದನ್ನು ವಾಯವ್ಯದ ಕಡೆಗೆ ಬದಲಾಯಿಸಿಕೊಳ್ಳುತ್ತವೆ. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಪ್ರಮುಖವಾಗಿ ವಾಯುವ್ಯ ದಿಕ್ಕಿನಿಂದ ಗಾಳಿ ಬೀಸುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ಮತ್ತೆ ಗಾಳಿಯು ದಿಕ್ಕನ್ನು ವಾಯವ್ಯದಿಂದ ಆಗ್ನೇಯದ ಕಡೆಗೆ ಬದಲಾಯಿಸುತ್ತದೆ. ಮಾಹೆವಾರು ಗಾಳಿ ಬೀಸುವ ವೇಗದ ವಿವರಗಳನ್ನು ಕೋಷ್ಟಕ 1.8 ರಲ್ಲಿ ಕೊಟ್ಟಿದೆ.

**ಹವಾಗುಣದ ಇತರ ಸಂಗತಿಗಳು:** ಈಶಾನ್ಯ ಮಾರುತದ ಋತುವಿನ ನಂತರದಲ್ಲಿ ವಾಯು ಕುಸಿತಗಳು ಬಂಗಾಳ ಕೊಲ್ಲಿಯ ಉತ್ತರ ತುದಿಯಲ್ಲಿ ರೂಪುಗೊಂಡು ಪಶ್ಚಿಮಕ್ಕೆ ಅಥವಾ ವಾಯುವ್ಯಕ್ಕೆ ಚಲಿಸುತ್ತವೆ. ಋತುವು ಮುಂದುವರೆದಂತೆ ಈ ಕುಸಿತಗಳು ದಕ್ಷಿಣದ ಭಾಗದಲ್ಲಿ ಹೆಚ್ಚಾಗಿ ರೂಪುಗೊಳ್ಳುತ್ತವೆ. ಇದರಿಂದ ಅಕ್ಟೋಬರ್ ನವೆಂಬರ್ ಮತ್ತು ಸ್ವಲ್ಪಮಟ್ಟಿಗೆ ಡಿಸೆಂಬರ್ ತಿಂಗಳುಗಳು ಬಿರುಗಾಳಿಗೆ ಹೆಸರಾಗಿವೆ. ಈ ತಿಂಗಳುಗಳಲ್ಲಿ ಜಿಲ್ಲೆಯಲ್ಲಿ ವ್ಯಾಪಕ ಹಾಗೂ ಭಾರಿ ಮಳೆಗಳು ಆಗುವುದು ಕಂಡುಬರುತ್ತದೆ. ಬೇಸಿಗೆ ಮತ್ತು ಮಾರುತಗಳ ನಂತರದ ಅವಧಿಯಲ್ಲಿ ಸಿಡಿಲು ಬಿರುಗಾಳಿಗಳೊಂದಿಗೆ ಭಾರಿ ಮಳೆ ಬರುವುದುಂಟು. ಮಾಹೆಯಾನ ಹವಾಗುಣದ ಇತರ ಸಂಗತಿಗಳನ್ನು ಕೋಷ್ಟಕ 1.9 ರಲ್ಲಿ ಕೊಟ್ಟಿದೆ.

## ಕೋಷ್ಟಕ 1.4: ತಾಲೂಕುವಾರು ವಾಡಿಕೆ ಮತ್ತು ಅತಿವೃಷ್ಟಿ (ಮಿ.ಮೀ.) ಧಾರವಾಡ ಜಿಲ್ಲೆ

| ಮಳೆ ಮಾಪನ ಕೇಂದ್ರದ ಹೆಸರು | ಅಂಕಿ ಅಂಶಗಳ ದೊರೆತ ವರ್ಷ | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ | ವಾರ್ಷಿಕ ಸರಾಸರಿ ಶೇಕಡ ಹೆಚ್ಚಿನ ಮಳೆ ಬಿದ್ದ ವರ್ಷ | ವಾರ್ಷಿಕ ಸರಾಸರಿ ಶೇಕಡ ಕಡಿಮೆ ಮಳೆ ಬಿದ್ದ ವರ್ಷ | 24 ಘಂಟೆಗಳಲ್ಲಿ ದಾಖಲಿಸಿದ ಹೆಚ್ಚು ಮಳೆ: ಮಿ.ಮೀ. | 24 ಘಂಟೆಗಳಲ್ಲಿ ದಾಖಲಿಸಿದ ಹೆಚ್ಚು ಮಳೆ: ದಿನಾಂಕ |
|---|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| ಧಾರವಾಡ | 50 | ಅ) 2.0 | 1.5 | 8.9 | 48.3 | 74.4 | 95.3 | 174.0 | 121.4 | 102.4 | 125.2 | 48.0 | 11.9 | 813.3 | 165 | 63 | 147.3 | ಆಗಸ್ಟ್ 6, 1914 |
| | | ಬ) 0.1 | 0.1 | 0.7 | 3.3 | 5.0 | 8.3 | 15.19 | 11.8 | 7.0 | 7.8 | 2.9 | 0.7 | 63.6 | (1946) | (1905) | | |
| ಹುಬ್ಬಳ್ಳಿ | 50 | ಅ) 1.5 | 1.5 | 9.4 | 36.6 | 70.1 | 81.8 | 113.3 | 87.6 | 100.8 | 111.5 | 42.9 | 11.9 | 668.9 | 162 | 62 | 133.6 | ಸೆಪ್ಟೆಂಬರ್ 14, 1927 |
| | | ಬ) 0.1 | 0.2 | 0.7 | 3.1 | 4.9 | 7.6 | 12.4 | 8.7 | 7.3 | 7.0 | 2.8 | 0.7 | 55.5 | (1933) | (1918) | | |
| ಕಲಘಟಗಿ | 50 | ಅ) 0.8 | 1.5 | 7.9 | 40.1 | 72.6 | 135.4 | 232.7 | 153.9 | 99.8 | 114.8 | 43.4 | 10.9 | 913.8 | 147 | 57 | 133.3 | ಸೆಪ್ಟೆಂಬರ್ 26, 1924 |
| | | ಬ) 0.1 | 0.1 | 0.6 | 2.9 | 4.6 | 11.4 | 18.8 | 14.8 | 8.8 | 7.2 | 2.5 | 0.5 | 72.3 | (1933) | (1918) | | |
| ಶಿಗ್ಗಾಂವ | 50 | ಅ) 2.3 | 1.5 | 5.1 | 32.3 | 62.5 | 90.9 | 155.7 | 101.3 | 78.5 | 111.3 | 37.6 | 10.2 | 689.2 | 149 | 53 | 118.6 | ನವೆಂಬರ್ 19, 1948 |
| (ಬಂಕಾಪುರ) | | ಬ) 0.2 | 0.1 | 0.4 | 2.5 | 4.1 | 9.2 | 15.6 | 11.5 | 7.2 | 6.6 | 2.4 | 0.7 | 60.5 | (1943) | (1905) | | |
| ಹಾನಗಲ್ | 50 | ಅ) 2.5 | 1.3 | 6.6 | 38.1 | 64.0 | 138.9 | 268.7 | 148.3 | 72.9 | 112.5 | 39.4 | 11.2 | 904.4 | 149 | 48 | 161.5 | ಜೂನ್ 30, 1959 |
| | | ಬ) 0.2 | 0.1 | 0.5 | 2.7 | 4.0 | 11.2 | 19.1 | 13.7 | 7.6 | 6.7 | 2.5 | 0.6 | 68.9 | (1933) | (1911) | | |
| ಹಿರೇಕೆರೂರು | 50 | ಅ) 2.5 | 4.3 | 3.8 | 34.8 | 71.6 | 101.9 | 199.6 | 111.5 | 85.6 | 119.6 | 49.8 | 13.2 | 798.2 | 152 | 55 | 144.8 | ಜುಲೈ 8, 1888 |
| | | ಬ) 0.2 | 0.3 | 0.3 | 2.7 | 4.2 | 9.5 | 17.9 | 11.9 | 7.5 | 7.1 | 3.0 | 0.7 | 65.3 | (1932) | (1918) | | |
| ರಾಣೆಬೆನ್ನೂರು | 50 | ಅ) 2.8 | 2.5 | 6.9 | 32.8 | 70.4 | 68.8 | 96.8 | 76.5 | 90.4 | 109.5 | 46.5 | 15.5 | 619.4 | 142 | 52 | 169.4 | ಡಿಸೆಂಬರ್ 22, 1906 |
| | | ಬ) 0.2 | 0.2 | 0.6 | 2.7 | 4.6 | 6.6 | 10.5 | 7.8 | 6.2 | 6.6 | 2.5 | 0.7 | 49.2 | (1932) | (1905) | | |
| ಹಾವೇರಿ | 50 | ಅ) 4.3 | 3.3 | 7.9 | 43.2 | 79.8 | 95.0 | 158.7 | 101.9 | 89.4 | 121.4 | 49.3 | 15.0 | 769.2 | 166 | 52 | 192.8 | ಮೇ 21, 1943 |
| | | ಬ) 0.2 | 0.2 | 0.5 | 2.5 | 4.6 | 9.0 | 15.2 | 10.5 | 7.1 | 7.0 | 2.7 | 0.7 | 60.2 | (1933) | (1905) | | |

(ಮುಂದುವರೆದಿದೆ)

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
|---|---|---|---|---|---|---|---|---|---|---|---|---|---|---|---|---|---|---|
| ಗದಗ | 50 | ಅ) 2.8 | 2.5 | 7.1 | 30.7 | 69.1 | 71.1 | 67.6 | 92.2 | 129.0 | 112.0 | 44.2 | 9.4 | 637.7 | 163 | 54 | 171.5 | ಅಕ್ಟೋಬರ್ 7, 1947 |
| | | ಬ) 0.5 | 0.3 | 0.6 | 2.7 | 4.5 | 5.3 | 6.5 | 7.3 | 7.3 | 6.8 | 2.9 | 0.6 | 45.3 | (1943) | (1934) | | |
| ಮುಂಡರಗಿ | 50 | ಅ) 2.0 | 2.3 | 3.1 | 19.6 | 51.1 | 53.6 | 38.1 | 59.9 | 101.3 | 89.1 | 36.8 | 7.6 | 464.5 | 163 | 36 | 127.5 | ಅಕ್ಟೋಬರ್ 3, 1906 |
| | | ಬ) 1.0 | 0.2 | 0.3 | 1.7 | 3.8 | 3.8 | 4.4 | 4.1 | 7.0 | 5.2 | 2.2 | 0.4 | 33.2 | (1946) | (1934) | | |
| ನವಲಗುಂದ | 50 | ಅ) 1.3 | 3.8 | 5.3 | 28.5 | 62.7 | 65.0 | 67.6 | 71.1 | 130.8 | 111.8 | 36.3 | 10.7 | 594.9 | 176 | 46 | 154.9 | ಅಕ್ಟೋಬರ್ 18, 1892 |
| | | ಬ) 0.1 | 0.3 | 0.5 | 2.5 | 4.7 | 4.8 | 6.2 | 5.4 | 7.5 | 6.4 | 2.1 | 0.6 | 41.1 | (1916) | (1904) | | |
| ನರಗುಂದ | 50 | ಅ) 2.5 | 3.3 | 5.1 | 24.4 | 61.5 | 49.5 | 57.9 | 60.2 | 123.9 | 25.6 | 34.5 | 8.9 | 517.3 | 196 | 47 | 290.2 | ಜುಲೈ 2, 1959 |
| | | ಬ) 0.3 | 0.2 | 0.4 | 2.0 | 4.3 | 4.3 | 5.7 | 4.9 | 6.6 | 5.5 | 2.1 | 0.6 | 36.9 | (1933) | (1945) | | |
| ರೋಣ | 50 | ಅ) 1.3 | 3.1 | 4.1 | 19.6 | 52.1 | 80.5 | 65.0 | 79.8 | 153.4 | 99.1 | 37.9 | 10.7 | 606.6 | 199 | 53 | 170.2 | ಡಿಸೆಂಬರ್ 6, 1902 |
| | | ಬ) 0.1 | 0.3 | 0.5 | 2.0 | 3.9 | 5.6 | 6.3 | 6.4 | 8.0 | 5.6 | 2.0 | 0.5 | 41.2 | (1916) | (1945) | | |
| ಸವಣೂರು | 50 | ಅ) 1.5 | 2.8 | 4.1 | 34.3 | 77.0 | 89.1 | 123.7 | 89.4 | 88.7 | 113.5 | 39.9 | 12.2 | 676.2 | 144 | 49 | 101.6 | ಅಕ್ಟೋಬರ್ 24, 1912 |
| | | ಬ) 0.1 | 0.2 | 0.3 | 2.5 | 4.8 | 8.0 | 13.3 | 9.6 | 6.8 | 6.5 | 2.4 | 0.7 | 55.2 | (1932) | (1905) | | |
| ಧಾರವಾಡ ಜಿಲ್ಲೆ | 50 | ಅ) 2.1 | 2.5 | 6.1 | 33.1 | 67.1 | 86.9 | 130.0 | 96.8 | 103 | 109.8 | 41.9 | 11.4 | 691.1 | 144 | 66 | | |
| | | ಬ) 0.2 | 0.2 | 0.5 | 2.6 | 4.4 | 7.5 | 12.0 | 9.2 | 7.3 | 6.6 | 2.5 | 0.6 | 53.6 | (1933) | (1945) | | |

ಅ) ವಾಡಿಕೆ ಮಳೆ (ಮಿ.ಮೀ.) 1901 ರಿಂದ 1950 ರವರೆಗೆ; ಬ) ಮಳೆಯ ದಿನಗಳ ಸರಾಸರಿ ಸಂಖ್ಯೆ (24 ಘಂಟೆಗಳಲ್ಲಿ ಕನಿಷ್ಠ 2.5 ಮಿ.ಮೀ. ಮಳೆ ಬಿದ್ದ ದಿವಸಗಳು) : * 1970 ರವರೆಗೆ ಲಭ್ಯವಿರುವ ಎಲ್ಲಾ ಮಳೆ ಬಿದ್ದ ಅಂಕಿ ಅಂಶಗಳನ್ನು ಆಧರಿಸಿದೆ. ವರ್ಷಗಳನ್ನು ಆವರಣದೊಳಗೆ ಕೊಟ್ಟಿದೆ.

ಮೂಲ : ಭಾರತೀಯ ಪವನಶಾಸ್ತ್ರ ಇಲಾಖೆ (ಇಂಡಿಯನ್ ಮಿಟಿಯೋರಾಲಾಜಿಕಲ್ ಡಿಪಾರ್ಟ್‌ಮೆಂಟ್), ಪುಣೆ. 1984.

**ಕೋಷ್ಟಕ 1.5 : 1901 ರಿಂದ 1970 ರವರೆಗಿನ ಅವಧಿಯ ಮಾಹೆಯಾನ ಬದ್ಧ ವಾರ್ಷಿಕ ವಾಡಿಕೆ ಮಳೆ (ಮಿ.ಮೀ.ಗಳಲ್ಲಿ)**

| ಕ್ರ. ಸಂ. | ತಾಲೂಕು | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|---|---|
| 1. | ಬ್ಯಾಡಗಿ | 0.5 | - | 3.7 | 40.9 | 77.8 | 89.4 | 146.6 | 94.2 | 90.8 | 125.9 | 34.9 | 7.9 | 712.6 |
| 2. | ಧಾರವಾಡ | 1.4 | 1.3 | 7.1 | 48.6 | 81.9 | 102.5 | 183.8 | 118.6 | 107.5 | 129.9 | 44.9 | 11.0 | 838.5 |
| 3. | ಗದಗ | 2.8 | 1.9 | 5.7 | 39.0 | 80.9 | 72.7 | 70.5 | 83.4 | 132.7 | 126.9 | 38.8 | 10.4 | 665.7 |
| 4. | ಹಾನಗಲ್ | 1.9 | 1.1 | 5.8 | 38.6 | 70.2 | 142.0 | 283.2 | 151.7 | 73.1 | 117.5 | 37.5 | 10.8 | 933.4 |
| 5. | ಹಾವೇರಿ | 3.1 | 2.3 | 7.7 | 44.5 | 82.4 | 93.8 | 164.9 | 98.3 | 90.7 | 126.5 | 42.6 | 13.3 | 770.1 |
| 6. | ಹಿರೇಕೆರೂರು | 1.9 | 3.2 | 3.8 | 37.8 | 74.3 | 101.1 | 209.1 | 111.4 | 86.8 | 125.1 | 43.6 | 11.7 | 809.8 |
| 7. | ಹುಬ್ಬಳ್ಳಿ | 1.1 | 1.2 | 6.8 | 40.6 | 77.5 | 85.8 | 120.4 | 84.3 | 106.3 | 118.3 | 40.0 | 10.7 | 693.0 |
| 8. | ಕಲಘಟಗಿ | 0.6 | 1.1 | 7.5 | 44.4 | 83.5 | 133.5 | 245.6 | 153.7 | 99.5 | 119.6 | 41.2 | 9.5 | 939.7 |
| 9. | ಕುಂದಗೋಳ | - | 9.7 | 7.9 | 58.7 | 108.5 | 89.1 | 135.7 | 75.6 | 118.1 | 114.6 | 52.5 | 7.5 | 777.9 |
| 10. | ಮುಂಡರಗಿ | 1.8 | 1.8 | 2.3 | 26.8 | 58.9 | 53.0 | 41.3 | 54.9 | 104.8 | 100.1 | 34.2 | 9.1 | 489.0 |
| 11. | ನರಗುಂದ | 1.9 | 3.1 | 3.6 | 27.6 | 65.1 | 58.3 | 69.9 | 55.4 | 124.4 | 93.5 | 33.4 | 8.8 | 545.0 |
| 12. | ನವಲಗುಂದ | 1.0 | 3.0 | 5.9 | 33.2 | 72.2 | 64.7 | 73.2 | 67.4 | 130.6 | 118.6 | 32.3 | 10.0 | 612.1 |
| 13. | ರಾಣೆಬೆನ್ನೂರು | 2.0 | 1.9 | 5.6 | 37.5 | 77.5 | 69.4 | 98.8 | 71.1 | 86.0 | 119.6 | 40.5 | 13.4 | 623.3 |
| 14. | ರೋಣ | 1.0 | 2.7 | 4.1 | 23.3 | 53.2 | 82.6 | 66.6 | 79.9 | 154.0 | 104.4 | 31.7 | 9.6 | 613.1 |
| 15. | ಸವಣೂರು | 1.1 | 2.1 | 2.9 | 39.9 | 89.4 | 84.5 | 129.5 | 87.8 | 88.9 | 120.6 | 36.9 | 9.0 | 692.6 |
| 16. | ಶಿಗ್ಗಾಂವಿ | 1.7 | 1.1 | 3.6 | 38.8 | 70.4 | 90.8 | 168.9 | 106.2 | 81.1 | 119.1 | 36.3 | 9.9 | 727.9 |
| 17. | ಶಿರಹಟ್ಟಿ | 0.5 | 2.7 | 4.8 | 57.1 | 99.1 | 81.3 | 93.9 | 75.4 | 125.2 | 156.8 | 45.2 | 6.9 | 748.9 |
| | ಜಿಲ್ಲೆಯ ಸರಾಸರಿ | 1.4 | 2.4 | 5.2 | 39.8 | 77.8 | 87.9 | 135.4 | 92.3 | 105.9 | 119.8 | 39.2 | 10.0 | 717.2 |
| | ರಾಜ್ಯದ ಸರಾಸರಿ | 2.9 | 3.6 | 7.4 | 37.5 | 86.6 | 181.8 | 284.7 | 189.9 | 149.8 | 134.3 | 48.6 | 11.7 | 1,138.6 |

**ಕೋಷ್ಟಕ - 1.6 : ತಾಲೂಕುವಾರು 1971 ರಿಂದ 1981 ರವರೆಗೆ ದಾಖಲಾದ ವಾರ್ಷಿಕ ಮಳೆಯ ಪ್ರಮಾಣ (ಮಿ.ಮೀ) - ಮುಂದುವರೆದಿದೆ**

| ಕ್ರ.ಸಂ | ತಾಲೂಕು | 1971 | 1972 | 1973 | 1974 | 1975 | 1976 | 1977 | 1978 | 1979 | 1980 | 1981 |
|---|---|---|---|---|---|---|---|---|---|---|---|---|
| 1. | ಬ್ಯಾಡಗಿ | 783.1 | 444.0 | 641.8 | 658.6 | 860.3 | 575.0 | 625.7 | 938.1 | 735.1 | 727.1 | 447.0 |
| 2. | ಧಾರವಾಡ | 722.7 | 637.8 | 715.3 | 877.6 | 661.4 | 583.7 | 857.7 | 761.4 | 1,016.4 | 926.4 | 1,009.0 |
| 3. | ಗದಗ | 589.9 | 598.0 | 643.7 | 858.3 | 905.1 | 466.6 | 752.4 | 539.0 | 611.6 | 606.6 | 548.1 |
| 4. | ಹಾನಗಲ್ | 760.1 | 868.3 | 866.5 | 943.0 | 1,015.1 | 806.0 | 1,009.0 | 1,633.1 | 1,400.2 | 1,646.8 | 835.2 |
| 5. | ಹಾವೇರಿ | 984.2 | 778.2 | 603.8 | 590.3 | 811.5 | 531.9 | 823.5 | 1,063.1 | 833.1 | 866.7 | 651.3 |
| 6. | ಹಿರೇಕೆರೂರು | 768.1 | 738.9 | 671.5 | 768.1 | 1,159.3 | 549.9 | 624.5 | 1,157.6 | 1,373.4 | 1,630.3 | 623.5 |
| 7. | ಹುಬ್ಬಳ್ಳಿ | 641.1 | 629.1 | 773.3 | 887.7 | 770.3 | 518.6 | 782.2 | 1,114.3 | 917.7 | 648.6 | 543.4 |
| 8. | ಕಲಘಟಗಿ | 914.0 | 938.3 | 1,228.8 | 1,071.9 | 1,590.2 | 1,166.9 | 951.5 | 880.7 | 1,122.9 | 1,189.4 | 871.5 |
| 9. | ಕುಂದಗೋಳ | 700.6 | 778.6 | 739.6 | 866.8 | 587.4 | 568.6 | 655.2 | 876.1 | 933.8 | 701.8 | 402.2 |
| 10. | ಮುಂಡರಗಿ | 413.8 | 466.6 | 476.3 | 692.4 | 605.2 | 276.7 | 670.2 | 720.4 | 784.7 | 412.3 | 637.4 |
| 11. | ನರಗುಂದ | 551.2 | 446.9 | 582.1 | 1,048.5 | 785.0 | 421.5 | 543.7 | 527.5 | 732.7 | 198.7 | 528.7 |
| 12. | ನವಲಗುಂದ | 520.1 | 502.1 | 555.2 | 1,089.8 | 715.6 | 383.4 | 548.4 | 559.6 | 889.3 | 554.1 | 694.6 |
| 13. | ರಾಣೆಬೆನ್ನೂರು | 725.0 | 607.3 | 424.1 | 438.6 | 736.0 | 338.3 | 503.5 | 738.0 | 607.7 | 699.0 | 537.5 |
| 14. | ರೋಣ | 585.2 | 402.3 | 624.4 | 1,191.8 | 1,048.2 | 1,026.9 | 838.8 | 621.6 | 1,405.1 | 633.8 | 1,131.9 |
| 15. | ಸವಣೂರು | 623.1 | 649.5 | 619.6 | 821.7 | 785.3 | 605.0 | 622.4 | 988.2 | 866.3 | 648.1 | 397.7 |
| 16. | ಶಿಗ್ಗಾಂವಿ | 727.3 | 602.8 | 753.6 | 717.0 | 904.2 | 609.4 | 666.2 | 1364.7 | 1,349.4 | 1,666.4 | 831.3 |
| 17. | ಶಿರಹಟ್ಟಿ | 563.5 | 563.2 | 690.5 | 1,058.9 | 889.2 | 596.2 | 1,043.9 | 1,175.8 | 897.3 | 650.2 | 502.9 |
| | ಒಟ್ಟು | 11,573 | 10,052 | 11,610 | 14,581 | 14,829 | 10,025 | 12,519 | 15,660 | 16,477 | 14,406 | 11,193 |
| | ಜಿಲ್ಲೆಯ ಸರಾಸರಿ | 680.8 | 626.6 | 682.9 | 857.7 | 872.3 | 589.7 | 736.4 | 921.1 | 969.2 | 847.4 | 658.4 |

**ಕೋಷ್ಟಕ 1.6 : ತಾಲೂಕುವಾರು 1982 ರಿಂದ 1992 ರವರೆಗೆ ದಾಖಲಾದ ವಾರ್ಷಿಕ ಮಳೆಯ ಪ್ರಮಾಣ (ಮಿ.ಮೀ.)**

| ಕ್ರ.ಸಂ | ತಾಲೂಕು | 1982 | 1983 | 1984 | 1985 | 1986 | 1987 | 1988 | 1989 | 1990 | 1991 | 1992 |
|---|---|---|---|---|---|---|---|---|---|---|---|---|
| 1. | ಬ್ಯಾಡಗಿ | 883.8 | 449.6 | 662.4 | 347.4 | 621.2 | 662.4 | 554.1 | 482.2 | 335.4 | 977.4 | 1,152.5 |
| 2. | ಧಾರವಾಡ | 684.0 | 694.5 | 725.3 | 680.4 | 661.3 | 563.9 | 788.6 | 617.0 | 751.6 | 1,239.2 | 966.8 |
| 3. | ಗದಗ | 743.6 | 690.9 | 488.9 | 340.7 | 621.9 | 756.3 | 641.3 | 588.5 | 378.2 | 708.0 | 674.9 |
| 4. | ಹಾನಗಲ್ | 1,172.3 | 1,069.4 | 1,063.9 | 920.3 | 1,432.8 | 1,290.5 | 1,122.5 | 680.0 | 573.6 | 1,168.8 | 1,282.6 |
| 5. | ಹಾವೇರಿ | 1,104.4 | 588.0 | 714.0 | 430.2 | 803.6 | 731.3 | 803.4 | 562.8 | 430.3 | 919.5 | 1,223.8 |
| 6. | ಹಿರೇಕೆರೂರು | 754.7 | 637.0 | 712.1 | 560.3 | 814.0 | 716.6 | 734.8 | 680.0 | 573.6 | 1,168.8 | 1,149.6 |
| 7. | ಹುಬ್ಬಳ್ಳಿ | 808.9 | 923.6 | 713.0 | 711.4 | 627.4 | 724.8 | 735.0 | 491.2 | 511.0 | 1,564.3 | 931.5 |
| 8. | ಕಲಘಟಗಿ | 923.0 | 919.7 | 965.1 | 786.2 | 702.8 | 951.6 | 964.0 | 577.5 | 835.6 | 958.2 | 1,106.5 |
| 9. | ಕುಂದಗೋಳ | 440.3 | 397.2 | 390.7 | 329.6 | 973.5 | 1,057.1 | 697.0 | 441.4 | 497.3 | 958.4 | 601.0 |
| 10. | ಮುಂಡರಗಿ | 543.9 | 456.0 | 410.0 | 254.8 | 565.2 | 737.4 | 558.7 | 386.4 | 409.3 | 489.4 | 636.7 |
| 11. | ನರಗುಂದ | 601.7 | 491.1 | 288.0 | 353.8 | 600.0 | 579.2 | 577.5 | 480.2 | 303.5 | 545.1 | 512.3 |
| 12. | ನವಲಗುಂದ | 723.0 | 548.4 | 476.9 | 359.6 | 679.8 | 560.5 | 774.4 | 450.1 | 385.2 | 737.3 | 620.4 |
| 13. | ರಾಣೆಬೆನ್ನೂರು | 812.5 | 449.7 | 488.3 | 353.2 | 486.3 | 621.9 | 613.1 | 508.1 | 336.4 | 715.7 | 908.5 |
| 14. | ರೋಣ | 1,203.6 | 640.9 | 457.7 | 320.2 | 651.5 | 860.5 | 852.7 | 377.0 | 461.6 | 726.7 | 633.2 |
| 15. | ಸವಣೂರು | 762.9 | 664.4 | 633.1 | 424.1 | 684.6 | 578.9 | 597.1 | 650.0 | 359.0 | 788.0 | 880.5 |
| 16. | ಶಿಗ್ಗಾಂವಿ | 721.2 | 668.8 | 853.8 | 453.0 | 839.9 | 674.5 | 614.9 | 549.9 | 592.4 | 924.2 | 1,125.6 |
| 17. | ಶಿರಹಟ್ಟಿ | 609.9 | 527.3 | 469.8 | 373.4 | 472.6 | 742.6 | 972.6 | 462.4 | 452.7 | 669.9 | 857.3 |
| | ಒಟ್ಟು | 13,494 | 10,817 | 10,513 | 7,999 | 12,238 | 12,810 | 12,602 | 8,989 | 8,489 | 15,334 | 15,264 |
| | ಜಿಲ್ಲೆಯ ಸರಾಸರಿ | 793.8 | 636.3 | 618.3 | 470.5 | 719.9 | 753.5 | 741.3 | 528.6 | 499.3 | 901.9 | 897.9 |

**ಕೋಷ್ಟಕ 1.7 ಗದಗಿನಲ್ಲಿ ಗರಿಷ್ಠ ಮತ್ತು ಕನಿಷ್ಠ ಉಷ್ಣತೆ (ಡಿಗ್ರಿ ಸೆಲ್ಸಿಯಸ್‌ನಲ್ಲಿ) ಹಾಗೂ ಸಾಪೇಕ್ಷ ಆರ್ದ್ರತೆ**

| ತಿಂಗಳು | ದಿನದ ಸರಾಸರಿ ಗರಿಷ್ಠ ಉಷ್ಣತೆ | ದಿನದ ಸರಾಸರಿ ಕನಿಷ್ಠ ಉಷ್ಣತೆ | ಅತಿ ಹೆಚ್ಚಿನ ಗರಿಷ್ಠ ಉಷ್ಣತೆಯ ದಾಖಲೆ ಮತ್ತು ದಿನಾಂಕ | | ಅತಿ ಕಡಿಮೆ ಕನಿಷ್ಠ ಉಷ್ಣತೆಯ ದಾಖಲೆ ಮತ್ತು ದಿನಾಂಕ | | ಸಾಪೇಕ್ಷ ಆರ್ದ್ರತೆ (ಶೇಕಡ) ಬೆಳಗ್ಗೆ 8.30ರಲ್ಲಿ | ಸಾಪೇಕ್ಷ ಆರ್ದ್ರತೆ (ಶೇಕಡ) ಸಾಯಂಕಾಲ 5.30ರಲ್ಲಿ |
|---|---|---|---|---|---|---|---|---|
| ಜನವರಿ | 30.3 | 16.7 | 34.5 | 29ನೇ ಜನವರಿ1960 | 11.1 | 7ನೇ ಜನವರಿ 1951 | 61 | 35 |
| ಫೆಬ್ರವರಿ | 33.0 | 18.6 | 37.7 | 28ನೇ ಫೆಬ್ರವರಿ 1961 | 11.1 | 11ನೇ ಫೆಬ್ರವರಿ 1950 | 54 | 31 |
| ಮಾರ್ಚ್ | 36.0 | 21.0 | 40.0 | 20ನೇ ಮಾರ್ಚ್ 1953 | 14.5 | 5ನೇ ಮಾರ್ಚ್ 1971 | 58 | 31 |
| ಏಪ್ರಿಲ್ | 37.3 | 22.5 | 41.1 | 23ನೇ ಏಪ್ರಿಲ್ 1941 | 17.2 | 15ನೇ ಏಪ್ರಿಲ್ 1935 | 71 | 41 |
| ಮೇ | 36.5 | 22.6 | 41.7 | 15ನೇ ಮೇ 1939 | 17.6 | 5ನೇ ಮೇ 1976 | 78 | 49 |
| ಜೂನ್ | 31.1 | 21.9 | 40.6 | 4ನೇ ಜೂನ್ 1953 | 18.3 | 5ನೇ ಜೂನ್ 1975 | 88 | 68 |
| ಜುಲೈ | 28.5 | 21.2 | 34.9 | 18ನೇ ಜುಲೈ 1960 | 18.9 | 4ನೇ ಜುಲೈ 1934 | 84 | 73 |
| ಆಗಸ್ಟ್ | 28.9 | 20.9 | 35.4 | 19ನೇ ಆಗಸ್ಟ್ 1969 | 18.3 | 15ನೇ ಆಗಸ್ಟ್1965 | 84 | 70 |
| ಸೆಪ್ಟಂಬರ್ | 29.7 | 20.5 | 37.8 | 20ನೇ ಸೆಪ್ಟಂಬರ್ 1951 | 17.2 | 19ನೇ ಸೆಪ್ಟಂಬರ್ 1952 | 83 | 66 |
| ಅಕ್ಟೋಬರ್ | 30.8 | 20.2 | 35.6 | 3ನೇ ಅಕ್ಟೋಬರ್ 1965 | 15.0 | 31ನೇ ಅಕ್ಟೋಬರ್ 1974 | 75 | 57 |
| ನವೆಂಬರ್ | 29.8 | 18.4 | 37.2 | 24ನೇ ನವೆಂಬರ್ 1947 | 12.2 | 25ನೇ ನವೆಂಬರ್ 1939 | 64 | 46 |
| ಡಿಸೆಂಬರ್ | 29.1 | 16.5 | 34.1 | 31ನೇ ಡಿಸೆಂಬರ್ 1959 | 10.0 | 26ನೇ ಡಿಸೆಂಬರ್ 1975 | 63 | 41 |
| ವಾರ್ಷಿಕ ಸರಾಸರಿ | 31.7 | 20.1 | | - | | - | 72 | 51 |

**ಕೋಷ್ಟಕ 1.8**

**ಸರಾಸರಿ ಗಾಳಿ ಬೀಸುವ ವೇಗ ಘಂಟೆಗೆ ಕಿಲೋಮೀಟರ್‌ಗಳಲ್ಲಿ (ಗದಗ)**

| ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|
| 7.5 | 7.1 | 8.1 | 10.1 | 13.8 | 18.2 | 19.6 | 17.5 | 13.6 | 7.8 | 7.0 | 7.6 | 11.4 |

**ಕೋಷ್ಟಕ 1.9**

**ಹವಾಗುಣದ ಇತರ ಸಂಗತಿಗಳು**

| ದಿನಗಳು* | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ವಾರ್ಷಿಕ |
|---|---|---|---|---|---|---|---|---|---|---|---|---|---|
| ಸಿಡಿಲು ಬಿರುಗಾಳಿ | 0.1 | 0.1 | 0.9 | 5 | 6 | 2 | 0.6 | 5 | 3 | 3 | 0.8 | 0.1 | 27 |
| ಆಲಿಕಲ್ಲು ಮಳೆ | 0 | 0 | 0 | 0.1 | 0.3 | 0 | 0 | 0 | 0 | 0 | 0 | 0 | 0.4 |
| ಧೂಳಿನ ಬಿರುಗಾಳಿ | 0 | 0.1 | 0 | 0.1 | 0 | 0 | 0 | 0 | 0 | 0 | 0 | 0 | 0.2 |
| ಚಂಡಮಾರುತ | 0 | 0 | 0 | 0 | 0.1 | 0.1 | 0 | 0 | 0 | 0 | 0 | 0 | 0.2 |
| ಮಂಜು | 0.1 | 0.1 | 0 | 0 | 0 | 0 | 0 | 0 | 0 | 0.1 | 0 | 0 | 0.3 |

*ಸರಾಸರಿ ತಿಂಗಳಿಗೆ ಎರಡು ದಿವಸಗಳ ನಂತರದ ಅಂಕಿಗಳನ್ನು ಪೂರ್ಣಾಂಶಗಳಲ್ಲಿ ಕೊಟ್ಟಿದೆ

## ಪರಿಸರ ಮತ್ತು ಜೀವಿ ಪರಿಸ್ಥಿತಿ

ಔದ್ಯಮಿಕ ಚಟುವಟಿಕೆಯು ಅಭಿವೃದ್ಧಿ ಕಾರ್ಯದ ಒಂದು ಅವಿಭಾಜ್ಯ ಅಂಗವಾಗಿದೆ. ಉದ್ದಿಮೆಗಳು ಮೊದಲಿನಿಂದಲೂ ವಸ್ತುಗಳ ತಯಾರಿಕೆಯ ಜೊತೆಗೆ ಅಸಂಖ್ಯಾತ ಕಾರ್ಮಿಕರಿಗೆ ಉದ್ಯೋಗಾವಕಾಶ ಕಲ್ಪಿಸುತ್ತ ಬಂದಿವೆ. ಆದರೆ ಭೂಮಿಯ ಸಂಪನ್ಮೂಲಗಳ ಹಾಗೂ ಸುತ್ತಲ ಪರಿಸರದ ಮೇಲೆ ಇದರಿಂದ ಅನೇಕ ವಿಧದ ಪರಿಣಾಮಗಳಾಗುತ್ತವೆ. ಉದ್ದಿಮೆಗಳೂ ಸೇರಿದಂತೆ ಎಲ್ಲಾ ಬಗೆಯ ಚಟುವಟಿಕೆಗಳಿಂದಲೂ ಮಲಿನ ಪದಾರ್ಥಗಳು ಪರಿಸರಕ್ಕೆ ಅಂದರೆ ಗಾಳಿ, ನೀರು ಮತ್ತು ಭೂಮಿಗೆ ಸೇರುತ್ತವೆ. ಉದ್ದಿಮೆಗಳಿಗೆ ಬಳಸುವ ಕಚ್ಚಾವಸ್ತುಗಳ ಗುಣ ಧರ್ಮವನ್ನವಲಂಬಿಸಿ ಕೆಲವು ಪ್ರಮಾಣದ ತ್ಯಾಜ್ಯ ವಸ್ತುಗಳು ಸೋರುತ್ತವೆ, ಚೆಲ್ಲುತ್ತವೆ ಅಥವಾ ಉಪವಸ್ತುಗಳಾಗಿ ಹೊರಬೀಳುತ್ತವೆ. ಪರಿಸರಕ್ಕೆ ಸೇರಿಹೋಗುವ ಈ ವ್ಯರ್ಥ ಪದಾರ್ಥಗಳಿಂದಾಗಿ ಕೃಷಿ ಮತ್ತಿತರ ಚಟುವಟಿಕೆಗಳ ಮೇಲೆ ವಿಪರೀತ ಪರಿಣಾಮಗಳುಂಟಾಗಿ ವಾತಾವರಣ ಹಾಗೂ ಜನಜೀವನಕ್ಕೆ ಸಮಸ್ಯೆಗಳು ಎದುರಾಗುತ್ತವೆ.

ಮಾಲಿನ್ಯವೆಂದರೆ ಪರಿಸರಕ್ಕೆ ಬಾಹ್ಯ ವಸ್ತುಗಳ ಸೇರ್ಪಡೆಯಾಗಿ, ಅದರ ಮಾಮೂಲು ಬಳಕೆಯ ಮೇಲೆ ದುಷ್ಪರಿಣಾಮ ಉಂಟುಮಾಡುವುದು ಅಂದರೆ ಜಲಮಾಲಿನ್ಯ, ವಾಯುಮಾಲಿನ್ಯ ಅಥವಾ ಭೂಮಾಲಿನ್ಯ. ಶಬ್ದ ಮಾಲಿನ್ಯ ಎಂದರೆ ಮನುಷ್ಯನ ಕೆಲಸದ ಅಥವಾ ಜೀವನ ಸ್ಥಿತಿಯನ್ನು ಅಸಹನೀಯವೆನಿಸುವ ಮಟ್ಟಿಗೆ ಪರಿಸರದಲ್ಲಿ ಗದ್ದಲ ಹೆಚ್ಚಾಗುವುದು. ಹರಿಯುವ ನೀರಿಗೆ ಅಥವಾ ಕೆರೆಸರೋವರಗಳಿಗೆ ಹೊಲಸು ನೀರು ಸೇರಿದಾಗ ಜಲಮಾಲಿನ್ಯ ಉಂಟಾಗುತ್ತದೆ. ಹೀಗಾಗುವುದರಿಂದ ನೀರಿನಲ್ಲಿ ಕರಗಿರುವ ಜೀವಪೋಷಕ ಆಮ್ಲಜನಕ ಖಾಲಿಯಾಗುತ್ತದೆ. ನೀರಿನಲ್ಲಿ ಸಾಮಾನ್ಯವಾಗಿ ಕಂಡುಬಾರದ ಎಲ್ಲಾ ವಿಧದ ವಸ್ತುಗಳನ್ನು ಸುರಿಯುವುದರಿಂದಲೂ ಜಲಮಾಲಿನ್ಯ ಉಂಟಾಗುತ್ತದೆ. ಉದ್ದಿಮೆಗಳು ಜಲಮಾಲಿನ್ಯಕ್ಕೆ ಪ್ರಮುಖ ಹೊಣೆಯಾಗಿದೆ. ಉದ್ದಿಮೆಗಳಿಂದ ಹೊರಬೀಳುವ ಮಾಲಿನ್ಯ ಕಾರಕಗಳಲ್ಲಿ ನೀರಿನ ಆಮ್ಲಜನಕವನ್ನು ಖಾಲಿ ಮಾಡುವ ವಸ್ತುಗಳು, ರಾಸಾಯನಿಕ ಹಾಗೂ ವಿಷಕಾರಕ ವಸ್ತುಗಳೂ ಮುಖ್ಯವಾದವು. ಕಾರ್ಖಾನೆಯ ಕಲ್ಮಷಗಳನ್ನು ಸಂಸ್ಕರಿಸದೇ ಹಾಗೆಯೇ ಹರಿದುಬಿಟ್ಟಾಗ ಆ ನೀರು ಉದ್ದಿಮೆ ಪುನರ್ಬಳಕೆಗಾಗಲಿ ಅಥವಾ ಬೇಸಾಯಕ್ಕಾಗಲೀ ಉಪಯೋಗಿಸುವುದು ಕಷ್ಟ ಸಾಧ್ಯವಾಗುತ್ತದೆ.

ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಕುಮಾರಪಟ್ಟಣದ ಬಳಿಯ ಹರಿಹರ ಪಾಲಿಫೈಬರ್ಸ್ ಹಾಗೂ ಗ್ರಾಸಿಲೀನ್ ಪ್ಲಾಂಟ್ ಎಂಬ ಉದ್ದಿಮೆಗಳಿಂದಾಗಿ ತುಂಗಭದ್ರಾ ತೀರದ ನೂರಕ್ಕೂ ಹೆಚ್ಚು ಹಳ್ಳಿಗಳು ತೊಂದರೆಗೀಡಾಗಿವೆಯೆಂದು ಹೇಳಲಾಗುತ್ತದೆ. ಹರಿಹರ ಪಾಲಿಫೈಬರ್ ಕಂಪೆನಿ 1972 ರಲ್ಲಿ ಕಾರ್ಯಾರಂಭ ಮಾಡಿದ್ದು ಪ್ರತಿದಿನ 165 ಟನ್‌ಗಳಷ್ಟು ರೇಯಾನ್ ಗ್ರೇಡಿನ ಕಟ್ಟಿಗೆ ಚಟ್ನಿಯನ್ನು ಉತ್ಪಾದಿಸುತ್ತದೆ. ಇದರಿಂದಾಗಿ ದಿನಕ್ಕೆ 33,000 ಘನ ಮೀಟರ್‌ಗಳಷ್ಟು ಔದ್ಯಮಿಕ ತ್ಯಾಜ್ಯ ಪದಾರ್ಥ ಹೊರಬೀಳುತ್ತದೆ. ಗ್ವಾಲಿಯರ್ ರೇಯಾನ್ ಸಿಲ್ಕ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ (ಗ್ರಾಸಿಮ್) 1977 ರಲ್ಲಿ ಕಾರ್ಯಾರಂಭ ಮಾಡಿದ್ದು ರೇಯಾನ್ ಗ್ರೇಡ್ ಕಟ್ಟಿಗೆ ಚಟ್ನಿಯಿಂದ ಗ್ರಾಸಿಲೀನ್ ನೂಲೆಳೆಗಳನ್ನು ತಯಾರಿಸುತ್ತದೆ. ಇದು ತಿಂಗಳಿಗೆ 800 ಟನ್‌ಗಳಷ್ಟು ಗ್ರಾಸಿಲೀನ್ ನೂಲೆಳೆ ತಯಾರಿಸುವ ಸಾಮರ್ಥ್ಯ ಪಡೆದಿದ್ದು, ಗಂಟೆಗೆ 575 ಘನಮೀಟರ್‌ಗಳಷ್ಟು ನೀರನ್ನು ಬಳಸುತ್ತಿದೆ. ಗಂಟೆಗೆ 490 ಘನಮೀಟರ್‌ಗಳಷ್ಟು ತ್ಯಾಜ್ಯ ವಸ್ತುವನ್ನು ಹೊರಹಾಕುತ್ತಿದೆ. ಹೀಗೆ ಹೊರಬಿದ್ದ ಮಾಲಿನ್ಯ ಪದಾರ್ಥಗಳಿಂದಾಗಿ ಜನರ, ದನಕರುಗಳ ಹಾಗೂ ಭೂಮಿಯ ಆರೋಗ್ಯದ ಮೇಲೆ ದುಷ್ಪರಿಣಾಮಗಳುಂಟಾಗಿವೆಯೆಂದು ಹೇಳಲಾಗುತ್ತದೆ. ರಾಷ್ಟ್ರೋತ್ತರ ಕೇಂದ್ರ (ಟ್ರಾನ್ಸ್‌ನಾಷನಲ್ ಸೆಂಟರ್, ಟಿ.ಎನ್.ಸಿ) ಎಂಬ ಸ್ವಯಂ ಸೇವಾ ಸಂಸ್ಥೆ, ಭಾರತ ಅಭ್ಯುದಯ ಕೇಂದ್ರ (ಐ.ಡಿ.ಎಸ್) ಮತ್ತು ಇತರ ಸಂಘ ಸಂಸ್ಥೆಗಳು ಪರಿಸರ ಶಿಕ್ಷಣ ಹಾಗೂ ನಿರ್ವಹಣೆ ಕುರಿತು ತೊಂದರೆಗೀಡಾದ ಜನರಿಗೆ ಪರಿಜ್ಞಾನ ಮೂಡಿಸಲು ಪ್ರಯತ್ನಿಸುತ್ತಿವೆ. ಈಗ ಅಲ್ಲಿನ ಹಳ್ಳಿಗರೇ ಪರಿಸರ ಸಮಿತಿಗಳನ್ನು ಪ್ರಾರಂಭಿಸಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. 1) ಪರಿಸರ ಸಮಸ್ಯೆ ಎದುರಾದಾಗ ಕಾರಣಗಳನ್ನು ಹುಡುಕಿ ಇತರರ ಗಮನಕ್ಕೆ ತರುವುದು ಹಾಗೂ ನಿವಾರಣಾ ಕ್ರಮಗಳ ಬಗ್ಗೆ ಸಮಾಲೋಚಿಸುವುದು, 2) ವಿಜ್ಞಾನಿಗಳಿಗೆ ಅವಶ್ಯಕವಾದ ಮಾಹಿತಿಗಳು ಲಭ್ಯವಾಗುವಂತೆ ನೆರವು ನೀಡುವುದು, 3) ಅಹಿಂಸಾತ್ಮಕ ನೇರಕ್ರಮ ಕೈಗೊಳ್ಳುವ ತಂತ್ರವನ್ನು ತರಬೇತಿಯ ಮೂಲಕ ಕಲಿಸಿಕೊಡುವುದು ಹಾಗೂ 4) ಇಂತಹುದೇ ಸಮಸ್ಯೆಗಳನ್ನು ಎದುರಿಸುತ್ತಿರುವ ನೆರೆಹೊರೆಯ ಹಳ್ಳಿಗಳೊಂದಿಗೆ ಸಂಬಂಧವಿಟ್ಟುಕೊಂಡು ಅವರ ನೆರವಿನಿಂದ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು. ಹರಿಹರದ ಕೆಳದಂಡೆಯ ತುಂಗಭದ್ರಾ ನದಿಯಲ್ಲಿ 1984 ರ ಫೆಬ್ರವರಿಯಲ್ಲಿ ಭಾರೀ ಸಂಖ್ಯೆಯಲ್ಲಿ ಮೀನುಗಳು ಸತ್ತವು, ಹಾಗೂ ಕುಮಾರಪಟ್ಟಣದಲ್ಲಿ ಉದ್ದಿಮೆ ಪ್ರಾರಂಭವಾದಾಗಿನಿಂದಲೂ ಪ್ರತಿ ವರ್ಷ ಎರಡು ಮೂರು ಬಾರಿ ಈ ರೀತಿ ಮೀನುಗಳು ಸಾಯುತ್ತಿವೆಯೆಂದು ಹಳ್ಳಿಯ ಜನ ಹೇಳುತ್ತಾರೆ. ಪರಿಸರ ಸಮಿತಿಗಳ ಒತ್ತಾಯದ ಮೇರೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿಷೇಧಾಜ್ಞೆ ಹೊರಡಿಸಿ ಹರಿಹರ ಪಾಲಿಫೈಬರ್ಸ್ ಕಾರ್ಖಾನೆ ನೀರಿಗೆ

ಕೊಳಚೆ ದ್ರವ ಹರಿಬಿಡದಂತೆ ನಿರ್ಬಂಧಿಸಿತು. ಕರಗಿದ ಆಮ್ಲಜನಕದ ಪ್ರಮಾಣ ಮೊದಲಿನಂತಾದಾಗ ನಿಷೇದಾಜ್ಞೆಯನ್ನು ಹಿಂತೆಗೆದುಕೊಳ್ಳಲಾಯಿತು. ನೆಲವಾಗಲಹಳ್ಳಿಯಲ್ಲಿ ರಾಶಿ ಹಾಕಲಾದ ಕಲ್ಲಿದ್ದಲ ಬೂದಿಯನ್ನು ಸ್ಥಳಾಂತರಿಸಲು ಕಾರ್ಖಾನೆ ಒಪ್ಪಿಕೊಂಡಿತು.

ರಾಣೆಬೆನ್ನೂರು ತಾಲೂಕಿನ ಅರೆಮಲ್ಲಾಪುರದಲ್ಲಿ ಸಮುದಾಯ ಬೇಸಾಯ ಯೋಜನೆಯನ್ನು ಭಾರತ ಅಭ್ಯುದಯ ಸಂಸ್ಥೆ (ಐ.ಡಿ.ಎಸ್) ಮೂಲಕ ಪ್ರಾರಂಭಿಸಲಾಗಿದೆ. ಜಿಲ್ಲೆಯ ಬರಗಾಲ ಪೀಡಿತ ಪ್ರದೇಶದ 51 ಹಳ್ಳಿಗಳ ಗುಂಪಿನಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಸ್ವಯಂಸೇವಾ ಸಂಸ್ಥೆ ಹಮ್ಮಿಕೊಂಡಿದೆ. ಈ ಭಾಗದಲ್ಲಿ ಭೂಹೀನ ರೈತರಿಗೆ ದನಕರುಗಳನ್ನು ಸಾಕಿಕೊಳ್ಳಲು ಮೇವಿನ ತೀವ್ರ ಅಭಾವ ಆಗಾಗ ತಲೆದೋರುತ್ತದೆ. ಐ.ಡಿ.ಎಸ್. ಸಂಸ್ಥೆಗೆ ಮೇವು ಬೇಸಾಯ ಯೋಜನೆಗಾಗಿ 10 ಹೆ.ಗಳಷ್ಟು ಗೋಮಾಳವನ್ನು ಬಳಸಲು ಸರ್ಕಾರ ಅನುಮತಿ ನೀಡಿದೆಯಲ್ಲದೆ, ಸರ್ಕಾರದ ವಿವಿಧ ಇಲಾಖೆಗಳು ಸಹಕಾರ ನೀಡುತ್ತಿವೆ. ಸೂಬಾಬುಲ್ ನೆಟ್ಟು ಅಗ್ಗದ ಮಣ್ಣು ಸಂರಕ್ಷಣೆ, ಕಲ್ಲು ಸಾಲುಗಳನ್ನಿಟ್ಟು ಭೂ ಸವಕಳಿ ತಡೆ, ಬೇಲಿಗುಂಟ ಬಳ್ಳಾರಿ ಜಾಲಿ, ಕತ್ತಾಳೆ, ಸೂಬಾಬುಲ್ ಬೆಳೆ, ವಿವಿಧ ಬಗೆಯ ಮೇವಿನ ಗಿಡ, ಮರ ಹಾಗೂ ಪೈರಿನ ಬೇಸಾಯ ಇವೇ ಮುಂತಾದ ಪ್ರಾಯೋಗಿಕ ಕಾರ್ಯ ಅಲ್ಲಿ ನಡೆಯುತ್ತಿದೆ. ಇದರೊಂದಿಗೆ ಗ್ರಾಮೀಣ ಬಡ ಮಹಿಳೆಯರಿಂದ ಸಂಘಟಿತ ಹೈನು ಉದ್ಯಮವನ್ನು ಪಶುಸಂಗೋಪನೆಯನ್ನು ಸಮೀಪದ ಪೇಟೆಯಲ್ಲಿ ಹಾಲು ಮೊಸರು ಮಾರಾಟವನ್ನು ಮಾಡಿಸಲಾಗುತ್ತಿದೆ.

ಸಾಮಾನ್ಯವಾಗಿ ವಾಯುವಿನಲ್ಲಿ ಆಮ್ಲಜನಕ, ಸಾರಜನಕ ಹಾಗೂ ಇಂಗಾಲದ ಡೈ ಆಕ್ಸೈಡ್ ಪ್ರಮಾಣ ಪರಿಮಿತವಿಲ್ಲದೆ ಅಪ್ಪಷ್ಟ ಇರುತ್ತದೆ. ಮನೆಯಲ್ಲಿ, ವಾಹನಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ ನಡೆಯುವ ದಹನ ಕ್ರಿಯೆಯಿಂದಾಗಿ ಉತ್ಪನ್ನವಾಗುವ ಅನೇಕ ಬಗೆಯ ಅನಿಲ ಹಾಗೂ ಧೂಳು ಬೂದಿ ಕಣಗಳು ವಾಯುಮಂಡಲವನ್ನು ಸೇರುತ್ತಿರುತ್ತವೆ. ನಾವು ಉಸಿರಾಡುವ ವಾಯುವಿನಲ್ಲಿ ಈ ಬಗೆಯ ಮಾಲಿನ್ಯಗಳಿದ್ದರೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಗಂಧಕದ ಡೈ ಆಕ್ಸೈಡ್, ಸಾರಜನಕ ಭಸ್ಮಗಳು, ಕಲ್ಲಿದ್ದಲಿನ ಭಸ್ಮ ಇಂಗಾಲದ ಡೈ ಆಕ್ಸೈಡ್, ಧೂಳು ಕಣಗಳು ಇವೇ ಮುಂತಾದ ಮಾಲಿನ್ಯಕಾರಕಗಳು ಹವೆಯೊಂದಿಗೆ ಸೇರ್ಪಡೆಯಾಗಿರುತ್ತದೆ. ಇವಲ್ಲದೇ ಹೈಡ್ರೋಕಾರ್ಬನ್ ಮತ್ತಿತರ ಕ್ಲಿಷ್ಟ ರಾಸಾಯನಿಕಗಳೂ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಾಗಿ ವಾತಾವರಣದಲ್ಲಿದ್ದರೆ ಜನರ ಆರೋಗ್ಯಕ್ಕೆ ಧಕ್ಕೆ ಉಂಟಾಗುತ್ತದೆ ಕಾರ್ಖಾನೆಗಳ ಸಂಖ್ಯೆ ಹೆಚ್ಚು ಇರುವ ಕಡೆ ಹಾಗೂ ವಾಹನಗಳ ಓಡಾಟ ಹೆಚ್ಚಿದಲ್ಲಿ ವಾಯುಮಾಲಿನ್ಯ ಸಮಸ್ಯೆ ಗಂಭೀರವಾಗಿರುತ್ತದೆ. ವಾಯುಮಾಲಿನ್ಯದಿಂದ ದೈನಂದಿನ ಹವಾಮಾನ ಹಾಗೂ ವಾಯುಗುಣದ ಮೇಲೂ ಪರಿಣಾಮವಾಗುತ್ತದೆ.

ವಾಯು ಮತ್ತು ನೀರಿನ ನಂತರ ಪರಿಸರದ ಅತಿ ಮುಖ್ಯ ಘಟಕವೆಂದರೆ ಮಣ್ಣು, ಮನುಷ್ಯನೂ ಸೇರಿದಂತೆ, ಭೂಮಿಯ ಮೇಲಿನ ಎಲ್ಲಾ ಪ್ರಾಣಿಗಳ ಚಟುವಟಿಕೆಗಳಿಗೆ ಮಣ್ಣೇ ಆಧಾರ. ಮಣ್ಣು ಮಾಲಿನ್ಯವೆಂದರೆ ಮಾನವ ಚಟುವಟಿಕೆಗಳಿಂದಾಗಿ ಕೆಲವು ಸಂಯುಕ್ತಗಳು ಮಣ್ಣನ್ನು ಕಲುಷಿತಗೊಳಿಸಿ ಪರಿಸರದ ಈ ಘಟಕವನ್ನು ನಿಷ್ಕ್ರಿಯಗೊಳಿಸುವುದು. ತ್ಯಾಜ್ಯ ಪದಾರ್ಥಗಳನ್ನು ಹೆಚ್ಚು ಬಳಸಿದಲ್ಲಿ ಮಣ್ಣಿನಲ್ಲಿರುವ ಹೀರು ನಿವೇಶನಗಳು ಕ್ರಮೇಣ ಹೀರಲಾರದ ಹಂತಕ್ಕೆ ತಲಪುತ್ತವೆ. ನಂಜು ರಾಸಾಯನಿಕಗಳು ಮಣ್ಣು ದ್ರಾವಣದ ರೂಪದಲ್ಲೆ ಉಳಿದುಬಿಟ್ಟು ಬೆಳೆಸಸ್ಯಗಳಿಗೂ ಇತರ ಜೈವಿಕ ಚಟುವಟಿಕೆಗಳಿಗೂ ಕೆಡುಕನ್ನುಂಟು ಮಾಡುತ್ತವೆ. ಹೀರುವಿಕೆ ಅಸಾಧ್ಯವಾದಾಗ ಈ ನಂಜು ರಾಸಾಯನಿಕಗಳು ಅಂತರ್ಜಲವನ್ನೂ ಮಲಿನಗೊಳಿಸುತ್ತವೆ. ಮಣ್ಣಿಗೆ ಮಾಲಿನ್ಯಕಾರಕಗಳಾಗಬಲ್ಲ ಮೂಲ ವಸ್ತುಗಳು ಹೀಗಿವೆ ಅಲ್ಯೂಮಿನಿಯಂ, ಅರ್ಸೆನಿಕ್, ಬೋರಾನ್, ಕ್ಯಾಲ್ಸಿಯಂ, ನೀರಿನಲ್ಲಿ ಕರಗುವ ಕಾರ್ಬೋನೇಟ್ ಹಾಗೂ ಬೈಕಾರ್ಬೋನೇಟ್, ಕ್ಲೋರೈಡ್, ಕೋಬಾಲ್ಟ್, ಕ್ರೋಮಿಯಂ, ತಾಮ್ರ, ಫ್ಲೋರಿನ್, ಸೀಸ, ಮ್ಯಾಂಗನೀಸ್, ನಿಕ್ಕಲ್, ಸೋಡಿಯಂ ಸಲ್ಫೇಟ್, ಸತು ಇತ್ಯಾದಿ, ಕೊಳಚೆ ಘನವಸ್ತುಗಳಿಂದಾಗಿ ಅಮೂಲ್ಯ ಭೂಮಿಯೂ ಕೃಷಿಯಂಥ ಇತರ ಚಟುವಟಿಕೆಗಳಿಗೆ ಬಳಕೆಯಾಗದೆ ವ್ಯರ್ಥವಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ತೀರ ವಾಹನ ಸಂದಣಿ ಇರುವ ಕೆಲವು ರಸ್ತೆಗಳನ್ನು ಬಿಟ್ಟರೆ ಶಬ್ದ ಮಾಲಿನ್ಯ ಅಷ್ಟೇನೂ ತೀವ್ರವಾಗಿಲ್ಲ.

ಮಾನವನ ಪ್ರತೀಯೊಂದು ಚಟುವಟಿಕೆಯಿಂದಲೂ ಘನ, ದ್ರವ ಅಥವಾ ವಾಯುಮಾಲಿನ್ಯಕಾರಕಗಳು ಉತ್ಪತ್ತಿ ಯಾಗುತ್ತಿರುವುದರಿಂದ ಅದೆಲ್ಲವೂ ಪರಿಸರಕ್ಕೆ ಸೇರುವ ಮುಂಚೆ ಸಂಸ್ಕರಣೆಯಾಗಲೇಬೇಕು. ಮಾಲಿನ್ಯದ ಬಗೆಗಿನ ಪರಿಜ್ಞಾನ, ಅದರಿಂದಾಗುವ ಪರಿಣಾಮಗಳು ಹಾಗೂ ಅದನ್ನು ನಿಯಂತ್ರಿಸಬೇಕಾದ ಅವಶ್ಯಕತೆ ಇವೆಲ್ಲವುಗಳನ್ನು ಸಾಕಷ್ಟು ಮಟ್ಟಿಗೆ ರೂಢಿಸಿಕೊಂಡಾಗಿದೆ. 1974ರ ಜಲ (ಮಾಲಿನ್ಯ ನಿಯಂತ್ರಣ ಹಾಗೂ ಪ್ರತಿಬಂಧ) ಕಾನೂನು ಜಾರಿಗೆ ಬಂದಂದಿನಿಂದ 1974

ರಲ್ಲಿ ಮಾಲಿನ್ಯ ನಿಯಂತ್ರಣ ಕಾರ್ಯ ಜಾರಿಗೆ ಬಂದಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ 1974 ರಲ್ಲಿ ಸ್ವಾಯತ್ತವಾಗಿ ಸ್ಥಾಪನೆಗೊಂಡಿದೆ. 1981ರ ವಾಯು (ಮಾಲಿನ್ಯ ನಿಯಂತ್ರಣ ಹಾಗೂ ಪ್ರತಿ ಬಂಧ) ಕಾನೂನು ಜಾರಿಗೆ ಬಂದಂದಿನಿಂದ ವಾಯು ಮಾಲಿನ್ಯ ನಿಯಂತ್ರಣದ ಶಾಸನ ಜಾರಿಗೆ ಬಂದಿದೆ. ರಾಜ್ಯದಲ್ಲಿ ವಾಯು ಮತ್ತು ಜಲಮಾಲಿನ್ಯ ನಿಯಂತ್ರಣ ಕಾನೂನುಗಳೆರಡೂ ಜಾರಿಯಲ್ಲಿದ್ದು ಅವುಗಳನ್ನು ವ್ಯವಸ್ಥಿತವಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಹೊಸ ಉದ್ದಿಮೆಗಳ ಸ್ಥಾಪನೆಯ ಸಿದ್ಧತೆ ನಡೆಯುತ್ತಿರುವಾಗಲೇ ಜಲಮಾಲಿನ್ಯ, ವಾಯುಮಾಲಿನ್ಯದ ಬಗ್ಗೆ ಉದ್ದಿಮೆಗಳ ಮೇಲಿರುವ ಹೊಣೆಗಾರಿಕೆ ಕುರಿತು ಅವಕ್ಕೆ ಮಾಹಿತಿ ನೀಡಲಾಗುತ್ತದೆ. ಕಾರ್ಖಾನೆ ಕಾರ್ಯಾರಂಭ ಮಾಡುತ್ತಲೇ ಮಾಲಿನ್ಯ ನಿಯಂತ್ರಣ ವ್ಯವಸ್ಥೆ ನಿರ್ಮಿಸಿಕೊಳ್ಳಲು ಅನುಕೂಲವಾಗುತ್ತದೆ. ಹೀಗೆ ಮಾಡಲು ತಯಾರಿಲ್ಲದ ಅಪರೂಪದ ಸಂದರ್ಭಗಳಲ್ಲಿ ಕಾನೂನಿನ ಪ್ರಕಾರ ದಂಡಹಾಕಬಹುದಾಗಿದೆ.

ಭೂಮಿಯ ಮೇಲೆ ಬೇಸಾಯ ಚಟುವಟಿಕೆಯ ಶೀಘ್ರ ವಿಸ್ತರಣೆಯಿಂದಾಗಿ ಈವರೆಗೆ ಕಂಡು ಕೇಳರದಿದ್ದ ಹೊಸ ಬಗೆಯ ಭೂ ಬಳಕೆ ಪದ್ಧತಿ ರೂಢಿಗೆ ಬರಲಾರಂಭಿಸಿದೆ. ತಂತಾನೇ ಬೆಳೆದುಕೊಂಡಿದ್ದ ಸಸ್ಯಾವರಣವನ್ನು ನೈಸರ್ಗಿಕ ಕಾಡುಸಸ್ಯ ಸಂಕುಲಗಳನ್ನು ತೆಗೆದು ಹಾಕಿ ಮಾನವ ತನಗೆ ಬೇಕಾದ ಸಸ್ಯಗಳನ್ನು ಬೆಳೆಸಲಾರಂಭಿಸಿದ. ಹೀಗೆ ಮಾಡಿದ್ದರಿಂದ ಮೊದಲಿದ್ದ ಸಸ್ಯಾವರಣ ಹಾಗೂ ಕಾಡುಪ್ರಾಣಿ ಸಂಕುಲಗಳು ಮಾರ್ಪಾಡಾಗಿವೆ. ಹಲವಾರು ಬಗೆಯ ಹಣ್ಣಿನ ಮರಗಳೂ ಸೇರಿದಂತೆ ಒಟ್ಟು 15 ಬಗೆಯ ವೃಕ್ಷಗಳೂ ತೋಟದ ಬೆಳೆಗಳೂ ರಾಜ್ಯದ ಪ್ರಮುಖ ವೃಕ್ಷ ಬೇಸಾಯದ ಅಂಗಗಳಾಗಿವೆ. ಇವುಗಳೊಂದಿಗೆ ಆಹಾರಕ್ಕೆ ಹಾಗೂ ಮೇವಿಗಾಗಿ ಅಲ್ಪಾವಧಿ ಬೆಳೆಗಳೂ ಇಲ್ಲಿ ಬೆಳೆಯುತ್ತವೆ. ಧಾರವಾಡ ಜಿಲ್ಲೆಯಲ್ಲಿ, ಅಡಿಕೆ (ಶೇ.3.66), ಕಿತ್ತಳೆ (ಶೇ.10.25), ತೆಂಗು (ಶೇ.8.76), ಸೀಬೆ (ಶೇ.15.03), ಹಲಸು (ಶೇ.2.61) ಮಾವು (ಶೇ.37.74), ದಾಳಿಂಬೆ (ಶೇ.0.82), ಸಪೋಟ (ಶೇ.15.28) ಮತ್ತು ಹುಣಸೆ (ಶೇ.5.81) ಮರಗಳು ಪ್ರಮುಖ ವೃಕ್ಷ ಬೇಸಾಯದ ಅಂಗಗಳಾಗಿವೆ. ಬೇಸಾಯ ಮತ್ತು ಅದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳಿಂದಾಗಿ ಬಯಲು ಪ್ರದೇಶದಲ್ಲಿನ ನೈಸರ್ಗಿಕ ಸಸ್ಯ ಸಮೂಹವೇ ಹೆಚ್ಚಾಗಿ ಹಾನಿಗೊಳಗಾಗಿದೆ. ವಿಶೇಷವಾಗಿ ದಕ್ಷಿಣ ಪ್ರಸ್ಥಭೂಮಿಯಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಕುರುಚಲು ಗಿಡಗಂಟಿಗಳು ಹೆಚ್ಚು ಕಡಿಮೆ ಸಂಪೂರ್ಣ ನಶಿಸಲು ಆರಂಭಿಸಿವೆ. ಕೆಲವು ಆಯಕಟ್ಟಿನ ಕ್ಷೇತ್ರಗಳನ್ನು ಬಿಟ್ಟರೆ ವನ್ಯಜೀವಿಗಳಂತೂ ಹೇಳಹೆಸರಿಲ್ಲದಂತಾಗಿವೆ. ವೃಕ್ಷಬೇಸಾಯ ಪದ್ಧತಿಯಲ್ಲಿ ಗಿಡಮರಗಳ ತುದಿಯಲ್ಲಿ ಸದಾ ಮೇಲ್ಛಾವಣಿ ಇರುವುದರಿಂದ ಮಳೆ ನೀರನ್ನು ತಡೆಯುವ ಸಾಮರ್ಥ್ಯ, ಹೀರಿಕೊಳ್ಳುವ ಸಾಮರ್ಥ್ಯ ಹಾಗೂ ಬಿದ್ದ ನೀರು ಹರಿದುಹೋಗದಂತೆ ತಡೆಹಿಡಿದು ಭೂಮಿಯೊಳಕ್ಕೆ ಇಂಗಿಸುವ ಸಾಮರ್ಥ್ಯ ಹೆಚ್ಚಾಗಿರುತ್ತದೆ. ಮೇವು, ಉರುವಲ ಹಾಗೂ ನಾಟಾಗಳಿಗೆಂದು ನೈಸರ್ಗಿಕ ಅರಣ್ಯದ ಮೇಲೆ ಒತ್ತಡ ತೀರ ಹೆಚ್ಚಾಗುತ್ತಿರುವ ಈ ದಿನಗಳಲ್ಲಿ ವೃಕ್ಷಬೇಸಾಯ ಪದ್ಧತಿಯನ್ನು ತೀವ್ರವಾಗಿಸಿ ಉತ್ತಮ ಉಸ್ತುವಾರಿಯಲ್ಲಿಟ್ಟರೆ ಅರಣ್ಯ ಮೂಲದ ಎಲ್ಲಾ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ ಎಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಬೆಳೆಗಳಿಗೆ ತಗಲುವ ಎಲ್ಲಾ ಬಗೆಯ ರೋಗಗಳ ನಿಯಂತ್ರಣಕ್ಕೆ ಬಳಸುವ ಕೀಟನಾಶಕಗಳ ಪ್ರಮಾಣ ಎಷ್ಟೆಂಬುದು ಖಚಿತವಾಗಿ ಗೊತ್ತಿಲ್ಲದಿದ್ದರೂ ಭತ್ತ ಮತ್ತು ಹತ್ತಿಯಂಥ ಅಲ್ಪಾವಧಿ ಬೆಳೆಗಳಿಗೆ ಬಳಕೆಯಾಗುವ ಕೀಟನಾಶಕಗಳಿಂದ ಹಾನಿ ಕಡಿಮೆ ಪ್ರಮಾಣದಲ್ಲಿದೆಯೆಂಬುದು ಸ್ಪಷ್ಟವಾಗಿ ತಿಳಿದುಬಂದಿದೆ. ಮನುಷ್ಯ ಮತ್ತು ಆತನ ಸಾಕುಪ್ರಾಣಿಗಳು ಜೀವಜಾಲದ ಅವಿಭಾಜ್ಯ ಅಂಗಗಳಾಗಿವೆ. ಪಶುಗಳನ್ನು ಉಳುಮೆ ಮಾಡಲು, ನೀರೆತ್ತಲು ಹಾಗೂ ಕೃಷಿಗೆ ಅವಶ್ಯಕವಾದ ಗೊಬ್ಬರ ಉತ್ಪಾದನೆಗೆಂದು ಸಂಗೋಪನೆ ಮಾಡಲಾಗುತ್ತಿದ್ದು ಇಲ್ಲಿನ ಜೀವಜಾಲದ ಬಹುಮುಖ್ಯ ಕೊಂಡಿಯಾಗಿದೆ.

ಭೂಮಿಯ ಮೇಲಿನ ಜೀವಮಂಡಲ ಹಾಗೂ ಅದಕ್ಕೆ ಆಶ್ರಯಕೊಟ್ಟ ಪರಿಸರ ಎರಡನ್ನೂ ಸೇರಿಸಿ ಜೀವಗೋಳ (ಬಯೊಸಿಸ್ಟಂ) ಎನ್ನಲಾಗುತ್ತಿದೆ. ಜೀವ ಹಾಗೂ ನಿರ್ಜೀವ ಪರಿಸರದೊಂದಿಗಿನ ಸಂಯೋಜನೆಗೆ ಇಕೋಸಿಸ್ಟೆಮ್ ಅಥವಾ ಜೀವ ಪರಿಸರ ವ್ಯವಸ್ಥೆ ಎನ್ನುತ್ತಾರೆ. ಈಗಿನ ಸಂದರ್ಭದಲ್ಲಿ ಮನುಷ್ಯ ಜೀವಿಯ ಅತಿ ಪ್ರಸರಣ ಎಷ್ಟಾಗುತ್ತಿದೆಯೆಂದರೆ ಆತನಿಗೆ ಆಶ್ರಯ ನೀಡಿದ ಜೀವ ಪರಿಸರ ಮಂಡಲದ ಸಮತೋಲ ಸ್ಥಿತಿಗೆ ಧಕ್ಕೆಯಾಗುವ ಪರಿಸ್ಥಿತಿ ಬಂದಿದೆ. ಔದ್ಯಮೀಕರಣ ಹಾಗೂ ನಗರೀಕರಣದಿಂದಾಗಿ ವಸತಿ ಸಮಸ್ಯೆ, ನೀರಿನ ಸಮಸ್ಯೆ, ಕೊಳಚೆ ನಿರ್ಮೂಲನ ವ್ಯವಸ್ಥೆ, ಹೊಗೆ ಮಾಲಿನ್ಯದ ಸಮಸ್ಯೆ ಮುಂತಾದವು ಉದ್ಭವವಾಗಿದೆ. ಸಾರ್ವಜನಿಕ ಸ್ವಾಸ್ಥ್ಯ ಸಮಸ್ಯೆ ತಲೆದೋರುತ್ತದೆ.

ಪರಿಸರ ಶಿಕ್ಷಣವೆಂದರೆ ನಮ್ಮ ಸುತ್ತಮುತ್ತಲ ಪರಿಸರ ಸಮಸ್ಯೆಗಳನ್ನು ಗುರುತಿಸುವ ಹಾಗೂ ಆ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸಾಮರ್ಥ್ಯವನ್ನು ಬಲಪಡಿಸಬಲ್ಲ ಒಂದು ಕಲಿಕೆ ವಿಧಾನವಾಗಿದೆ. ರಾಜ್ಯದಲ್ಲಿ 1970 ರ ಈಚೆಗಷ್ಟೇ ಪರಿಸರ ಸಮಸ್ಯೆಗಳ ಹಾಗೂ ಪರಿಸರ ಶಿಕ್ಷಣದತ್ತ ಗಮನಕೊಡಲಾಗುತ್ತಿದೆ. ಯುನಿಸೆಫ್ ನೆರವಿನ ಪ್ರಾಥಮಿಕ ಶಿಕ್ಷಣ ಪಠ್ಯಕ್ರಮ ನವೀಕರಣ ಯೋಜನೆಯ

ಅನ್ವಯವಾಗಿ ರಾಜ್ಯ ಶಾಲಾ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯವರು ಪರಿಸರ ಅಧ್ಯಯನದಲ್ಲಿ ಶಿಕ್ಷಕರ ಮಾರ್ಗದರ್ಶಿ ಎಂಬ ಮಾರ್ಗದರ್ಶಿಯನ್ನು ಪ್ರಕಟಿಸಿದ್ದಾರೆ. ಶಿಕ್ಷಣದಲ್ಲಿ ಪರಿಸರ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ರಾಜ್ಯದಲ್ಲಿರುವ ಅನೌಪಚಾರಿಕ ಶಿಕ್ಷಣ ವ್ಯವಸ್ಥೆ ಅಂದರೆ ನಿರಂತರ ಶಿಕ್ಷಣ ಕೇಂದ್ರಗಳ ಹಾಗೂ ಬಿಡುವಿನ ಕಲಿಕೆ (ಪಾರ್ಟ ಟೈಮ್) ಕೇಂದ್ರಗಳ ಮೂಲಕ ಪಠ್ಯಪುಸ್ತಕಗಳಲ್ಲಿರುವ ವಿಷಯಗಳನ್ನು ಸರಳೀಕರಿಸಿ ಪರಿಸರದ ಬಗ್ಗೆ ಶಿಕ್ಷಣ ನೀಡಲಾಗುತ್ತಿದೆ. ನಾವು ಮತ್ತು ನಮ್ಮ ಪರಿಸರ ಮತ್ತು ಜೀವನದ ಬೆಳಕು ಎಂಬ ಪುಸ್ತಕಗಳನ್ನು ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆಯವರು ಪ್ರಕಟಿಸಿದ್ದಾರೆ. ವಯಸ್ಕರ ಶಿಕ್ಷಣ ಯೋಜನೆಗಾಗಿ ಪರಿಸರದ ಬಗ್ಗೆ ನಾವು ತಿಳಿಯೋಣ ಎಂಬ ಮಾಹಿತಿ ಪತ್ರ ಪ್ರಕಟಿಸಲಾಗಿದೆ. ವಯಸ್ಕರ ಶಿಕ್ಷಣ ಯೋಜನೆಯನ್ನು ಜಾರಿಗೊಳಿಸುವ ಬೋಧಕರಿಗೆ 21 ದಿನಗಳ ತರಬೇತಿ ನೀಡಲಾಗುತ್ತದೆ. ಪಠ್ಯೇತರ ಚಟುವಟಿಕೆ, ಅಂದರೆ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಪರಿಸರ ಶಿಕ್ಷಣದ ಅದ್ಯತೆ ಬಗ್ಗೆ ಗಮನ ನೀಡಲಾಗುತ್ತಿದೆ. ಆಟಗಳ ಮೂಲಕ ಹಾಗೂ ನಿಸರ್ಗ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲೂ ಪರಿಸರದ ಬಗ್ಗೆ ಶಿಕ್ಷಣ ನೀಡಲಾಗುತ್ತಿದೆ. ವಿಶ್ವ ವನ್ಯಜೀವಿ ನಿಧಿಯ ಕರ್ನಾಟಕ ಶಾಖೆ ನಿಸರ್ಗ ಶಿಕ್ಷಣ ಕಾರ್ಯಕ್ರಮ ಏರ್ಪಡಿಸುತ್ತಿದೆ. ಹಲವಾರು ನೇಚರ್ ಕ್ಲಬ್‌ಗಳೂ ಪ್ರಾರಂಭವಾಗಿವೆ. ಪರಿಸರ ಸಂವರ್ಧನ ಶಿಬಿರಗಳನ್ನು ರಾಷ್ಟ್ರೀಯ ಸೇವಾ ಯೋಜನೆಯ (ಎನ್.ಎಸ್.ಎಸ್) ಮೂಲಕ ಕೂಡ ಕಾರ್ಯರೂಪಕ್ಕೆ ತರಲಾಗುತ್ತಿದೆ.